ವಿವೇಕಪ್ರಭ

ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ



₹ 14

ಸೆಪ್ಟೆಂಬರ್ 2018

PACKAGE TOURS

Hotel Room Accom. & South Indian Veg. Food





Charodham Yatra : 15/19 Days — Oct 07

Haridwar, Yamunotri, Gangotri, Uttarkashi, Kedarnath, Triyugi (Optional), Mana, Vyasa Guha, Ganesh Guha, Keshava Prayag, Badrinath, Rishikesh, New Delhi

Panchadwarka & Jyothirlinga : 22/24 DAYS — Nov 15

Pushkar, Ajmer, Nathadwar, Kankroli, Eklingji, Udaipur, Mt. Abu, Mathru Gaya, Dwarka, Bet Dwarka, Nagesham, Mul Dwarka, Porbandar, Veraval, Somnath, Dakor, Ahmedabad, Ujjain, Omkareshwar, Parli, Aurangabad, Ellora, Grishneshwar, Nasik, Triyambak, Shirdi, Shanisinganapur, Bhimashankar

Nepal : 07 DAYS — Sep 04, 20

Kathmandu, Manokamana, Pokhara, Jomsom, Mukthinath, Bakthapur

Kashi Chitrakoota : 15 Days — Oct 20

Allahabad, Gaya, Bodhgaya, Kashi, Saranath, Ayodhya, Naimisharanya, Chitrakoot

Mini Andhra : 05 Days — Sep 19 Dec 04

Manthralaya, Srishailam, Mahanandi, Ahobilam (Nava Narasimha)

Rajasthan Special : 16 Days — Sep 20

Jaipur, Pushkar, Ajmer, Chittaurgarh, Udaipur, Eklingji, Nathadwar, Mt. Abu, Jodhpur, Bikaner, Jaisalmer

Andhra Special : 10 Days — Dec 11

Bhadrachalam, Annavaram, Simhachalam, Borra Caves, Draksharam, Vasavi Penugonda, Dwaraka Tirumala, Mangalagiri, Vijayawada





Shri Hansaa Travels

Recognised by Department of Tourism, Govt. of Karnataka

: 640, 40th Cross, 8th Block, Jayanagar, Bangalore - 70

: hansaatravels@gmail.com : hansaatravels.com

: 080-26643276 / 26543891 / 9341215612 / 9341415612

ವಿವೇಕಪ್ರಭ


ಸೆಪ್ಟೆಂಬರ್-2018 ಸಂಪುಟ 19 ಸಂಚಿಕೆ 09











ಮುಖಪುಟ

ಆರ್ಟ್ ಇನ್‌ಸ್ಟಿಟ್ಯೂಟ್, ಚಿಕಾಗೋ

ಸ್ವಾಮೀಜಿ ಉಪನ್ಯಾಸ ಮಾಡಿದ ಸ್ಥಳ

ಚಂದಾ ವಿವರ

ಬಿಡಿ ಪ್ರತಿ : ₹14 ವಾರ್ಷಿಕ : ₹ 140 ಮೂರು ವರ್ಷ : ₹ 375
ಆಜೀವ (25 ವರ್ಷ) : ₹3,000 ಪೋಷಕರು : ₹5,000 ಅಥವಾ ಹೆಚ್ಚು.

ವಿದೇಶಗಳಿಗೆ : (ಏರ್‌ಮೇಲ್) ವಾರ್ಷಿಕ : $ 20; ಮೂರು ವರ್ಷ : $ 60
ಆಜೀವ (25ವರ್ಷ) : $ 300 ಪೋಷಕರು : $ 600 ಅಥವಾ ಹೆಚ್ಚು.

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– *ಸ್ವಾಮಿ ವಿವೇಕಾನಂದ*

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

E-mail: mysuru.vivekaprabha@rkmm.org Website: www.vivekaprabha.net ಫೋನ್ : 9481533505

ಶ್ರೀಕೃಷ್ಣ ಸ್ತುತಿಯಿಂದ



ಕೃಷಿರ್ಭೂವಾಚಕಃ ಶಬ್ದೋ ಣಶ್ಚ ನಿರ್ವೃತಿವಾಚಕಃ ।
ತಯೋರೈಕ್ಯಂ ಪರಂ ಬ್ರಹ್ಮ ಕೃಷ್ಣ ಇತ್ಯಭಿಧೀಯತೇ ॥ ೧ ॥

'ಕೃಷ್' ಎಂಬುದು ಸತ್ ಎಂದರೆ ಇರುವಿಕೆಯನ್ನೂ, 'ನ' ಎಂಬುದು ಆನಂದವನ್ನೂ ಸೂಚಿಸುತ್ತವೆ. ಇವೆರಡೂ ಒಟ್ಟುಸೇರಿದಾಗ ಪರಬ್ರಹ್ಮನಾದ ಕೃಷ್ಣ ಎಂಬ ಅರ್ಥವನ್ನು ಕೊಡುವುದು.

ಸಚ್ಚಿದಾನಂದರೂಪಾಯ ಕೃಷ್ಣಾಯಾಕ್ಲಿಷ್ಟಕಾರಿಣೇ ।
ನಮೋ ವೇದಾಂತವೇದ್ಯಾಯ ಗುರವೇ ಬುದ್ಧಿಸಾಕ್ಷಿಣೇ ॥ ೨ ॥

ಸತ್(ಇರುವಿಕೆ), ಚಿತ್(ಜ್ಞಾನ), ಆನಂದ ಸ್ವರೂಪನೂ, ಎಲ್ಲ ಕಠಿಣತೆಯನ್ನೂ ಬಗೆಹರಿಸಿ ಸುಲಭ ಮಾಡಿಕೊಡುವವನೂ, ವೇದಾಂತದ ಮೂಲಕ ತಿಳಿಯಲ್ಪಡುವವನೂ, ಸಾಕ್ಷಿರೂಪದಲ್ಲಿದ್ದುಕೊಂಡು ಬುದ್ಧಿಯನ್ನು ಗಮನಿಸುವವನೂ ಆದ ಆ ಜಗದ್ಗುರುವಿಗೆ ನಮಸ್ಕಾರ.

ನಮೋ ವಿಶ್ವಸ್ವರೂಪಾಯ ವಿಶ್ವಸ್ಥಿತ್ಯಂತಹೇತವೇ ।
ವಿಶ್ವೇಶ್ವರಾಯ ವಿಶ್ವಾಯ ಗೋವಿಂದಾಯ ನಮೋ ನಮಃ ॥ ೩ ॥

ವಿಶ್ವದ ಸ್ವರೂಪನೂ, ವಿಶ್ವದ ಸ್ಥಿತಿ ಹಾಗೂ ಸಂಹಾರಕ್ಕೆ ಕಾರಣನೂ ಆದ, ಸಮಸ್ತ ವಿಶ್ವಕ್ಕೆ ಈಶ್ವರನಾದ, ಇಡೀ ವಿಶ್ವವೇ ತಾನಾಗಿರುವ ಗೋವಿಂದನಿಗೆ ನಮಸ್ಕಾರಗಳು.

ವೇಣುವಾದನಶೀಲಾಯ ಗೋಪಾಲಾಯಾಹಿಮರ್ದಿನೇ ।
ಕಾಲಿಂದೀಕೂಲಲೀಲಾಯ ಲೋಲಕುಂಡಲಧಾರಿಣೇ ॥ ೪ ॥

ಕೊಳಲನ್ನು ನುಡಿಸುವುದರಲ್ಲಿ ಪ್ರವೀಣನಾದ, ಘೋರ ಕಾಲಿಯ ನೆಂಬ ಸರ್ಪದ ದರ್ಪವನ್ನು ಮರ್ದಿಸಿದ, ಕಾಳಿಂದೀ ನದಿಯ ತೀರದಲ್ಲಿ ತನ್ನ ಲೀಲೆಯನ್ನು ಮೆರೆದ, ಸದಾ ಅಲುಗಾಡುತ್ತಿರುವ ಕುಂಡಲಗಳನ್ನು ಧರಿಸಿದ (ಶ್ರೀಕೃಷ್ಣನಿಗೆ ನಮಸ್ಕಾರ).

ನಿಷ್ಕಲಾಯ ವಿಮೋಹಾಯ ಶುದ್ಧಾಯಾಶುದ್ಧವೈರಿಣೇ ।
ಅದ್ವಿತೀಯಾಯ ಮಹತೇ ಶ್ರೀಕೃಷ್ಣಾಯ ನಮೋ ನಮಃ ॥ ೫ ॥

ಅಖಂಡನಾದ, ಮೋಹರಹಿತನಾದ, ಶುದ್ಧನಾದ ಹಾಗೂ ಅಶುದ್ಧವಾದುದಕ್ಕೆ ವೈರಿಯಾದ, ಎರಡಿಲ್ಲದ, ಅತಿಶ್ರೇಷ್ಠನಾದ ಶ್ರೀಕೃಷ್ಣ ಪರಮಾತ್ಮನಿಗೆ ನಮಸ್ಕಾರಗಳು.

ಪ್ರಸೀದ ಪರಮಾನಂದ ಪ್ರಸೀದ ಪರಮೇಶ್ವರ ।
ಆಧಿವ್ಯಾಧಿಭುಜಂಗೇನ ದಷ್ಟಂ ಮಾಮುದ್ಧರ ಪ್ರಭೋ ॥ ೬ ॥

ಪರಮಾನಂದ ಸ್ವರೂಪನೆ, ಪರಮೇಶ್ವರನೆ, ಪ್ರಸನ್ನನಾಗು. ದುಃಖ, ರೋಗಗಳೆಂಬ ಹಾವುಗಳಿಂದ ನಾನು ಕಡಿಯಲ್ಪಟ್ಟಿದ್ದೇನೆ.

ಶ್ರೀಕೃಷ್ಣ ರುಕ್ಮಿಣೀಕಾಂತ ಗೋಪೀಜನಮನೋಹರ ।
ಸಂಸಾರಸಾಗರೇ ಮಗ್ನಂ ಮಾಮುದ್ಧರ ಜಗದ್ಗುರೋ ॥ ೭ ॥

ರುಕ್ಮಿಣೀದೇವಿಯ ಪತಿಯಾದ ಹೇ ಶ್ರೀಕೃಷ್ಣನೆ, ಗೋಪಿಕೆಯರ ಮನಸ್ಸನ್ನು ಅಪಹರಿಸಿದವನೆ, ಜಗದ್ಗುರುವೆ, ಸಂಸಾರಸಾಗರದಲ್ಲಿ ಮುಳುಗಿಹೋದ ನನ್ನನ್ನು ಉದ್ಧರಿಸು!

ಕೇಶವ ಕ್ಲೇಶಹರಣ ನಾರಾಯಣ ಜನಾರ್ದನ ।
ಗೋವಿಂದ ಪರಮಾನಂದ ಮಾಂ ಸಮುದ್ಧರ ಮಾಧವ ॥ ೮ ॥

ಹೇ ಕೇಶವ! ಕ್ಲೇಶಗಳನ್ನು ನಿವಾರಿಸುವವನೆ! ನಾರಾಯಣ! ಜನಾರ್ದನ! ಪರಮಾನಂದಸ್ವರೂಪಿಯಾದ ಗೋವಿಂದ! ಮಾಧವ! ನನ್ನನ್ನು ಉದ್ಧರಿಸು ಪ್ರಭು!

— ಗೋಪಾಲಪೂರ್ವತಾಪನೀಯೋಪನಿಷತ್

ಶ್ರೀಕೃಷ್ಣ ಸೂಕ್ತಿಗಳು

ನೀನು ಕರ್ಮವನ್ನು ಮಾತ್ರ ಮಾಡಲು ಬಯಸಬೇಕು; ಕರ್ಮದ ಫಲದಲ್ಲಿ ನಿನಗೆ ಆಸಕ್ತಿಯಾಗದಿರಲಿ. *(ಗೀತಾ, ೨.೪೭)*

ಕರ್ಮದ ಫಲದಲ್ಲಿ ಆಸಕ್ತಿಯನ್ನು ಬಿಟ್ಟು ಸದಾ ತೃಪ್ತನೂ, ಯಾವ ಆಶ್ರಯವನ್ನೂ ಹೊಂದದವನೂ, ಕರ್ಮದಲ್ಲಿ ನಿರತನಾಗಿದ್ದರೂ ಅವನು ಯಾವ ಕರ್ಮವನ್ನೂ ಮಾಡದಂತೆಯೇ ಸರಿ. *(ಗೀತಾ, ೪.೨೦)*


ಮನಸ್ಸನ್ನು ನಿಗ್ರಹಿಸುವುದು ಅತ್ಯಂತ ಕಷ್ಟ; ಇದರಲ್ಲಿ ಸಂಶಯವಿಲ್ಲ. ಆದರೆ ಅಭ್ಯಾಸದಿಂದ ಮತ್ತು ವೈರಾಗ್ಯದಿಂದ ಅದನ್ನು ಸಾಧಿಸಬಹುದು. *(ಗೀತಾ, ೬.೩೫)*

ಮನಸ್ಸಿನಿಂದಲೇ ತನ್ನನ್ನು ಉದ್ಧರಿಸಿಕೊಳ್ಳಬೇಕು. ತನ್ನನ್ನು ಕುಗ್ಗಿಸಿಕೊಳ್ಳಬಾರದು. ಮನಸ್ಸೇ ತನಗೆ ಬಂಧು; ಮನಸ್ಸೇ ತನ್ನ ಶತ್ರು. *(ಗೀತಾ, ೬.೫)*

ಅನನ್ಯರಾಗಿ ನನ್ನನ್ನು ಧ್ಯಾನಿಸುತ್ತ ಯಾರು ನನ್ನ ಉಪಾಸನೆ ಮಾಡುತ್ತಾರೋ ಅಂತಹ ನಿತ್ಯಯುಕ್ತರಾದ ಭಕ್ತರ ಯೋಗ, ಕ್ಷೇಮ ಎರಡನ್ನೂ ನಾನು ವಹಿಸಿಕೊಳ್ಳುತ್ತೇನೆ. *(ಗೀತಾ, ೯.೨೨)*

ಸಮಸ್ತ ಪ್ರಾಣಿಗಳಲ್ಲೂ ಸಮನಾಗಿರುವ, ನಾಶವಾಗುವ ವಸ್ತುಗಳೆಲ್ಲ ನಾಶವಾಗದೆ ಇರುವ ಪರಮಾತ್ಮನನ್ನು ಯಾರು ನೋಡುತ್ತಾನೋ ಅವನೇ ನಿಜವಾಗಿ ನೋಡುವವನು. *(ಗೀತಾ, ೧೩.೨೭)*





Ramakrishna Math (A Branch of Belur Math)

South Nada, Opp. Ashoka Petrol Pump, Haripad - 690514 Dist. Alleppey, Kerala.
Phone: 0479-2411700,0974 5325 834. Email: srkmathharipad@gmail.com,
viveka.vira@gmail.com Website: www.rkmathharipad.org

ಶ್ರೀರಾಮಕೃಷ್ಣರ ಮಠದ ಪುನರ್ನಿರ್ಮಾಣಕ್ಕಾಗಿ ಒಂದು ಮನವಿ



ಎರಡು ಕೊಠಡಿಗಳಿರುವ ಹಳೇ ಗೋಡೌನ್ (ಸಾಧುಗಳು ಈಗ ಇಲ್ಲಿಯೇ ತಂಗಿದ್ದಾರೆ)



ಜೀರ್ಣಾವಸ್ಥೆಯಲ್ಲಿರುವ ಕಟ್ಟಡಗಳು



೧೯೧೨ರ ಶಂಕುಸ್ಥಾಪನೆ ಶಿಲಾಫಲಕ

ಪ್ರೀತಿಯ ಭಕ್ತರೆ, ಹಿತೈಷಿಗಳೆ ಮತ್ತು ಸ್ನೇಹಿತರೆ,

ಕೇರಳದ ಹರಿಪಾಡ್‌ನಲ್ಲಿರುವ ರಾಮಕೃಷ್ಣ ಮಠವನ್ನು ೧೯೧೨ರಲ್ಲಿ ಸ್ಥಾಪಿಸಲಾಯಿತು. ಶ್ರೀರಾಮಕೃಷ್ಣರ ನೇರಶಿಷ್ಯರೂ, ಅವರ ಮಾನಸಪುತ್ರರೂ ಆಗಿದ್ದ ಪರಮಪೂಜ್ಯ ಸ್ವಾಮಿ ಬ್ರಹ್ಮಾನಂದಜಿಯವರು ನೆಲೆಸಿದ್ದ ಪವಿತ್ರಸ್ಥಾನವಿದು. ಹಲವು ವರ್ಷಗಳ ಕಾಲ ಬಳಸದೆ ಉಳಿದದ್ದರಿಂದ ಆಶ್ರಮದ ಕಟ್ಟಡಗಳು ಈಗ ಜೀರ್ಣಾವಸ್ಥೆಯಲ್ಲಿವೆ. ಮತ್ತೆ ಇದರ ಪುನರ್‌ನಿರ್ಮಾಣ ಕಾರ್ಯವನ್ನು ನಾವು ಕೈಗೊಂಡಿದ್ದು, ಮೊದಲ ಹಂತದಲ್ಲಿ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರ, ಸಮಾಜ ಕಲ್ಯಾಣ ಚಟುವಟಿಕೆಗಳಿಗಾಗಿ ಕೊಠಡಿಗಳು, ಸಂನ್ಯಾಸಿಗಳು ಮತ್ತು ಅತಿಥಿಗಳಿಗೆ ನಿವಾಸದ ಕೊಠಡಿಗಳು, ಕಛೇರಿ ಕಟ್ಟಡ, ಗ್ರಂಥಾಲಯ ಮತ್ತು ಉಚಿತ ವಾಚನಾಲಯ – ಇವುಗಳನ್ನು ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದೇವೆ. ಈ ಎಲ್ಲ ಕಟ್ಟಡಗಳನ್ನೂ ಸಂಪೂರ್ಣವಾಗಿ ನವೀಕರಿಸಬೇಕಾಗಿದೆ.

ಈ ಯೋಜನೆಗೆ ಸುಮಾರು 9 ಕೋಟಿ ರೂಪಾಯಿ ವೆಚ್ಚ ತಗಲಬಹುದಾಗಿದೆ.

ಉದಾರ ಹೃದಯಿಗಳಾದ ಎಲ್ಲ ದಾನಿಗಳು, ಅದರಲ್ಲೂ ಶ್ರೀರಾಮಕೃಷ್ಣರ ಭಕ್ತರು ಮುಂದೆ ಬಂದು ಶ್ರೀರಾಮಕೃಷ್ಣರ ಈ ಧಾಮವನ್ನು ನಿರ್ಮಿಸಲು ಮತ್ತು ಆ ಮೂಲಕ ಮಾನವ ಜನಾಂಗದ ಸೇವೆಯನ್ನು ಸಲ್ಲಿಸಲು ದೇಣಿಗೆಗಳನ್ನು ನೀಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇವೆ. ಈ ಸೇವಾಯಜ್ಞದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರೂ ಭಗವಾನ್ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಆಶೀರ್ವಾದಗಳಿಗೆ ಖಂಡಿತವಾಗಿಯೂ ಪಾತ್ರರಾಗುತ್ತಾರೆ ಎಂಬುದು ನಮ್ಮ ನಂಬಿಕೆ.

ಇತಿ ಭಗವತ್ಸೇವೆಯಲ್ಲಿ ತಮ್ಮ,
ಸ್ವಾಮಿ ವೀರಭದ್ರಾನಂದ, ಅಧ್ಯಕ್ಷರು

ದೇಣಿಗೆಗಳನ್ನು ಕಳುಹಿಸುವುದಕ್ಕೆ ಅಗತ್ಯವಾದ ವಿವರಗಳು

1) ದೇಣಿಗೆ – ಭಾರತದಲ್ಲಿ : 1) Go to-www.onlinesbi.com > Then Select- SBI Collect> State- Kerala >Institutions -Charitable Institutions >Ramakrishna Math Haripad.

2) ಚೆಕ್, ಡಿ.ಡಿ.ಗಳನ್ನು "Ramakrishna Math, Haripad" ಈ ಹೆಸರಿಗೆ ಕಳುಹಿಸಿ ಕೊಡಬೇಕು.

3) NEFT Transfer : AC Number : 30642551603, : State Bank of India. Haripad.
RTGS/NEFT/IFSC code : SBIN0010596.

(ಒಂದು ವೇಳೆ NEFT ವರ್ಗಾವಣೆ ಮಾಡುವುದಾಗಿದ್ದರೆ, ದಯವಿಟ್ಟು ಇ-ಮೇಲ್ ಮೂಲಕ ನಿಮ್ಮ ಹೆಸರು, ಕಳುಹಿಸಿದ ಮೊತ್ತ, ಅಂಚೆ ವಿಳಾಸ, PAN ಸಂಖ್ಯೆ, ಫೋನ್ ಸಂಖ್ಯೆ ಹಾಗೂ ವರ್ಗಾವಣೆಯ ವಿವರಗಳನ್ನು ಈ ವಿಳಾಸಕ್ಕೆ ತಿಳಿಸಬೇಕು: srkmathharipad@gamil.com)

★ Donations from Foreign countries: Kindly draw a Cheque/ Draft in favour of "Ramakrishna Math" and send it to the General Secretary, Ramakrishna Math, Belur Math, Dt. Howrah (West Bengal), Pin -711 202, India. In the covering letter mention that it is a donation for Haripad Centre building fund. And inform all the details of the donation to e-mail: srkmathharipad@gmail.com, viveka.vira@gmail.com

ರಾಮಕೃಷ್ಣ ಮಠಕ್ಕೆ ನೀಡುವ ದೇಣಿಗೆಗಳಿಗೆ ಸೆಕ್ಷನ್ 80G ಪ್ರಕಾರ, ಆದಾಯ ತೆರಿಗೆ ವಿನಾಯಿತಿ ಅನ್ವಯವಾಗುತ್ತದೆ.

ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮ, ರಾಣೇಬೆನ್ನೂರು

ಮಾಗೋಡ ರಸ್ತೆ, ರಾಣೇಬೆನ್ನೂರು - 581115, ಮೊ : 9480566346
email : srvashramaranebennur@gmail.com

ಆತ್ಮೀಯ ಆಧ್ಯಾತ್ಮಿಕ ಬಂಧುಗಳೇ,

ರಾಣೇಬೆನ್ನೂರಿನ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮ 2005ರಲ್ಲಿ ಪ್ರಾರಂಭವಾಗಿ, ಭಗವಾನ ಶ್ರೀ ರಾಮಕೃಷ್ಣರ, ಶ್ರೀ ಮಾತೆಯವರ ಮತ್ತು ಶ್ರೀ ಸ್ವಾಮಿ ವಿವೇಕಾನಂದರ ವಿಚಾರ ಧಾರೆಗಳನ್ನು ಹಾವೇರಿ ಜಿಲ್ಲೆ ಮತ್ತು ಸುತ್ತಮುತ್ತಲಿನ ಜಿಲ್ಲೆಗಳಿಗೂ ತಲುಪಿಸುವ ಕಾರ್ಯವನ್ನು ಮಾಡುತ್ತಾ ಬಂದಿದೆ. ಈ ಆಶ್ರಮವು ಒಂದು ಎಕರೆ ಜಮೀನಿನಲ್ಲಿ ಸಾಧು ನಿವಾಸ ಕಟ್ಟಡ ಹೊಂದಿದೆ. ಶ್ರೀ ಸ್ವಾಮಿ ವಿವೇಕಾನಂದ ವಿದ್ಯಾರ್ಥಿ ಮಂದಿರವನ್ನು ನಡೆಸುತ್ತಿದೆ. ಯುವಕರಿಗೆ, ಶಿಕ್ಷಕರಿಗೆ, ಆಧ್ಯಾತ್ಮಿಕ ಬಂಧುಗಳಿಗೆ ಮತ್ತು ಸಾರ್ವಜನಿಕರಿಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

ಇದೀಗ ಸಭಾಂಗಣ ಕಟ್ಟಡದ ನಿರ್ಮಾಣ ಕಾರ್ಯ ತ್ವರಿತ ಗತಿಯಲ್ಲಿ ನಡೆಯುತ್ತಿದೆ. ಕರ್ನಾಟಕ ರಾಜ್ಯ ಶ್ರೀ ರಾಮಕೃಷ್ಣ ವಿವೇಕಾನಂದ ಭಾವ ಪ್ರಚಾರ ಪರಿಷತ್‌ನ 5ನೇ ವಾರ್ಷಿಕ ಸಮ್ಮೇಳನವನ್ನು ನಡೆಸಲು ಸಿದ್ಧತೆ ನಡೆಯುತ್ತಿದೆ. ಇದೇ ಸಂದರ್ಭದಲ್ಲಿ ಶ್ರೀ ರಾಮಕೃಷ್ಣ ಮಠ ಮತ್ತು ಮಿಷನ್, ಕಲ್ಕತ್ತಾ ಇದರ ಉಪಾಧ್ಯಕ್ಷರಾದ ಪರಮಪೂಜ್ಯ ಶ್ರೀ ಸ್ವಾಮಿ ಗೌತಮಾನಂದಜಿ ಮಹಾರಾಜ್ ಇವರ ಅಮೃತ ಹಸ್ತದಿಂದ ಈ ಸಭಾಂಗಣ ಉದ್ಘಾಟನೆಗೊಳ್ಳಲಿದೆ.

ಈಗ ನಿರ್ಮಾಣವಾಗುತ್ತಿರುವ ಸಭಾಂಗಣದಲ್ಲಿ

1) ಸಾವಿರ ಭಕ್ತರು ಕುಳಿತುಕೊಳ್ಳಬಹುದಾದ ಸಭಾಂಗಣ
2) ಸಂಸ್ಕೃತ ಮತ್ತು ಸಂಗೀತ ಪಾಠಶಾಲೆ
3) 50 ಜನ ಭಕ್ತಾದಿಗಳು ಉಳಿದುಕೊಳ್ಳಬಹುದಾದ ಅತಿಥಿ ಗೃಹಗಳು
4) ಆಶ್ರಮದ ಕಾಂಪೌಂಡ್ ಗೋಡೆ
5) ಉದ್ಯಾನವನ ನಿರ್ಮಾಣ


ಕಾರಣ ಎಲ್ಲ ಭಕ್ತಾದಿಗಳು ಉದಾರವಾಗಿ ಧನಸಹಾಯ ಮಾಡುವುದರ ಮೂಲಕ ಈ ಸತ್ಕಾರ್ಯದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇವೆ. ಈ ಮೇಲಿನ ಯೋಜನೆಗೆ ಅಂದಾಜು 95 ಲಕ್ಷ ರೂಪಾಯಿಗಳು ಆಗುತ್ತದೆ.

ತಮ್ಮ ದೇಣಿಗೆಯನ್ನು ಚೆಕ್/ಡಿ.ಡಿ. (ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮ, ರಾಣೇಬೆನ್ನೂರು) /ಆನ್‌ಲೈನ್ ವರ್ಗಾವಣೆ ಮಾಡಬಹುದು. ಈ ದೇಣಿಗೆಗಳಿಗೆ 80G ಆದಾಯ ತೆರಿಗೆ ಕಾಯ್ದೆಯ ಅನ್ವಯ ವಿನಾಯಿತಿ ಇರುತ್ತದೆ.

ವಂದನೆಗಳೊಂದಿಗೆ

ಆನ್‌ಲೈನ್ ವರ್ಗಾವಣೆ ವಿವರ **NEFT DETAILS :**
Name : Sri Ramakrishna Vivekananda Ashram
SB A/c No. 64047102821 IFSC Code : SBIN0040738
Bank : State Bank of India, P.B.Road, Branch

ಭಗವತ್ಸೇವೆಯಲ್ಲಿ ತಮ್ಮ
ಸ್ವಾಮಿ ಪ್ರಕಾಶಾನಂದ
ಅಧ್ಯಕ್ಷರು





ಚಿಕಾಗೋ ಉಪನ್ಯಾಸಗಳು : ೧೨೫ನೇ ವಾರ್ಷಿಕೋತ್ಸವ

ಸೆಪ್ಟೆಂಬರ್ ೧೧ ಎಂದ ಕೂಡಲೇ ಸ್ವಾಮಿ ವಿವೇಕಾನಂದರು ೧೮೯೩ರಲ್ಲಿ ಮಾಡಿದ ಚಿಕಾಗೋ ಭಾಷಣದ ನೆನಪಾಗುತ್ತದೆ. ಆ ಒಂದು ಭಾಷಣದಿಂದಾಗಿ ಕೇವಲ ಸ್ವಾಮೀಜಿಯಷ್ಟೇ ಅಲ್ಲ, ಇಡೀ ಭಾರತವೇ ಜಗದ್ವಿಖ್ಯಾತವಾಯಿತು. ಹಿಂದೂಧರ್ಮದ ಸನಾತನ ತತ್ತ್ವಗಳು ಹೊಸ ಸಂದರ್ಭದಲ್ಲಿ ಮತ್ತೆ ಬೆಳಗಿದವು. 'ಕೊಲಂಬಿಯನ್ ಜಾಗತಿಕ ಮೇಳ'ದ ಅಂಗವಾಗಿ ನಡೆದ ವಿಶ್ವ ಧರ್ಮ ಸಮ್ಮೇಳನದಲ್ಲಿ ಹಿಂದೂಧರ್ಮದ ಪ್ರತಿನಿಧಿಯಾಗಿ ಸ್ವಾಮಿ ವಿವೇಕಾನಂದರು ಮಾತನಾಡಲು ಎದ್ದು ನಿಂತಾಗಲೇ ಇಡೀ ಜಗತ್ತಿನ ಗಮನವೆಲ್ಲ ಅತ್ತ ಸೆಳೆದಂತಾಗಿತ್ತು. ಆಕರ್ಷಕ ಭಂಗಿ, ದಿವ್ಯದೀಪ್ತ ಮುಖಮಂಡಲ, ಆಧ್ಯಾತ್ಮಿಕ ತೇಜಸ್ಸಿನಿಂದ ಹೊಳೆಯುತ್ತಿದ್ದ ವಿಶಾಲನೇತ್ರಗಳು ಇವುಗಳ ಮಾಂತ್ರಿಕ ಸ್ಪರ್ಶಕ್ಕೆ ಒಳಗಾದ ಇಡೀ ಸಭೆ, ಒಂದು ಕ್ಷಣ ಸ್ವಾಮೀಜಿ ಸಭಿಕರನ್ನು ಉದ್ದೇಶಿಸಿ, ''**ಅಮೆರಿಕಾದ ಸಹೋದರಿಯರೇ ಹಾಗೂ ಸಹೋದರರೇ ...**'' ಎಂದು ಸಂಬೋಧಿಸಿದ ಕೂಡಲೇ ವಿದ್ಯುತ್ ಸಂಚಾರದ ಆವೇಗಕ್ಕೆ ಒಳಗಾಗಿ, ಸುದೀರ್ಘ ಕರತಾಡನಗಳೊಂದಿಗೆ ಅವರನ್ನು ಅಭಿನಂದಿಸಿತು. ಮೇಲ್ನೋಟಕ್ಕೆ ಅದೊಂದು ಸಭೆ; ಒಬ್ಬರು ಭಾಷಣಕಾರರು; ನೆರೆದಿದ್ದವರು ಸಭಿಕರು. ಆದರೆ ಚಿಕಾಗೋ ಆರ್ಟ್ ಇನ್‌ಸ್ಟಿಟ್ಯೂಟಿನಲ್ಲಿ ನಡೆದ ಈ ಸಭೆ ಎರಡು ಪ್ರಪಂಚಗಳ, ಎರಡು ಭಾವಗಳ ಹಾಗೂ ಎರಡು ಮಾನವ ಧ್ಯೇಯಗಳ ಮುಖಾಮುಖಿಯಾಗಿತ್ತು; ಮುಂದಿನ ಮಹಾ ಸಮನ್ವಯಕ್ಕೆ ನಾಂದಿಯಾಗಿತ್ತು.



ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಗೆ ಸೋದರಿ ನಿವೇದಿತಾ ಬರೆದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾಳೆ: ''ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಕುರಿತು ಮಾತನಾಡಲು ಅವರು ಪ್ರಾರಂಭಿಸಿದರು; ಆದರೆ ಅವರು ಸಮಾಪ್ತಿಗೊಳಿಸಿದಾಗ ಹಿಂದೂಧರ್ಮವೇ ಸೃಷ್ಟಿಯಾಗಿತ್ತು.'' *(ಕೃತಿಶ್ರೇಣಿ, ಸಂ.೧, ಪು.XI)* ಹಿಂದೆಂದೂ ಭಾರತೀಯ ವಿಚಾರಧಾರೆ, ಅಧ್ಯಾತ್ಮ ಹಾಗೂ ಹಿಂದೂಧರ್ಮದ ಭಾವನೆಗಳು ತನ್ನೆಲ್ಲ ಸಮಗ್ರತೆಯೊಂದಿಗೆ ಪಾಶ್ಚಾತ್ಯ ಜಗತ್ತಿನ ಮುಂದೆ ಪ್ರಕಟವಾಗಿರಲಿಲ್ಲ. ಇಲ್ಲಿ ಕೇವಲ ಭಾವನೆ, ತತ್ತ್ವಗಳಷ್ಟೇ ಅಲ್ಲ ಇದ್ದುದು; ಇಡೀ ಭಾರತವನ್ನು ಅದರ ಎಲ್ಲ ಪರಂಪರೆ, ಧರ್ಮ, ಸಿದ್ಧಾಂತಗಳೊಂದಿಗೆ ಪ್ರತಿನಿಧಿಸುವ ಒಬ್ಬ ಜೀವಂತ ವ್ಯಕ್ತಿ ಅವರೆದುರು ನಿಂತಿದ್ದನು. ಸ್ವಾಮೀಜಿ ಮಾತನಾಡಲು ಆರಂಭಿಸಿದಾಗ ಅವರು ವಾಗ್ದೇವತೆಯನ್ನು ನೆನೆದರಂತೆ. ಅದರೊಂದಿಗೆ ಶ್ರೀರಾಮಕೃಷ್ಣರ ಅವ್ಯಕ್ತ ಚೇತನವೂ ಅದೃಶ್ಯವಾಗಿ ನಿಂತು ಅವರ ವಾಣಿಯಾಗಿ ಹೊರಹೊಮ್ಮಿರಬೇಕು. ಸ್ವಾಮಿ ವಿವೇಕಾನಂದರ ಭಾಷಣ ಕೇವಲ ಆ ಒಂದು ಸಭೆಯನ್ನಷ್ಟೇ ಪ್ರಭಾವಿಸಿದ್ದಲ್ಲ; ಅಲ್ಲಿಂದ ಅದರ ಪ್ರಭಾವ ಸಮುದ್ರದ ಅಲೆಅಲೆಗಳಂತೆ ಭೋರ್ಗರೆಯುತ್ತ ಪೂರ್ವ-ಪಶ್ಚಿಮ ದೇಶಗಳ ಉದ್ದಕ್ಕೂ ವ್ಯಾಪಿಸಿತು. ಅವರ ಮುಂದಿನ ದಿಗ್ವಿಜಯ ಎಲ್ಲೆಡೆ ಹೊಸ ಧಾರ್ಮಿಕ, ಆಧ್ಯಾತ್ಮಿಕ ಸಂಚಾರ, ಹಳೆಯ ಮತ್ತು ಹೊಸ ವಿಚಾರಗಳ ಸಾಮರಸ್ಯ ಇವೆಲ್ಲವೂ ಮುಂದೆ ಇತಿಹಾಸವಾಯಿತು.



ಚಿಕಾಗೋ ಆರ್ಟ್ ಇನ್‌ಸ್ಟಿಟ್ಯೂಟ್

ಧರ್ಮದ ಉದ್ದೇಶವೇ ಜಗತ್ತಿಗೆ ಶಾಂತಿ, ಆಧ್ಯಾತ್ಮಿಕ ಉನ್ನತಿ ಹಾಗೂ ಸಾಮರಸ್ಯದ ಶ್ರೇಷ್ಠ ಬದುಕನ್ನು ಕಲಿಸುವುದು. ಆದರೆ ಎಲ್ಲ ಮತಾಂಧತೆಯ, ಯುದ್ಧ ಹಾಗೂ ಅನಾಹುತಗಳ ಮೂಲ ಕಾರಣ ಹಲವು ಬಾರಿ ಧಾರ್ಮಿಕ ಪಂಥಗಳಲ್ಲೇ ಹುಟ್ಟಿಕೊಂಡಿರುವುದು ಸ್ವಾಮೀಜಿಯವರಿಗೆ ಸುಸ್ಪಷ್ಟವಾಗಿತ್ತು. ಚಿಕಾಗೋ ಉಪನ್ಯಾಸಗಳಲ್ಲಿ ಅವರು ಧರ್ಮಸಮನ್ವಯದ ಸಂದೇಶವನ್ನು ಅತ್ಯಂತ ಪ್ರಭಾವಶಾಲಿಯಾಗಿ ಸಾರಿದರು. ''ಇಂದು ಬೆಳಿಗ್ಗೆ ಈ ಸಭೆಯ ಶುಭಾರಂಭವನ್ನು ಸೂಚಿಸಲು ಮೊಳಗಿದ ಘಂಟನಾದವು ಎಲ್ಲ ಮತಾಂಧತೆಯ, ಖಡ್ಗ ಇಲ್ಲವೇ ಲೇಖನಿಯಿಂದ ಸಾಧಿಸಿದ ಮತೀಯ ಹಿಂಸೆಗಳ, ಒಂದೇ ಗುರಿಯೆಡೆಗೆ ಸಾಗುತ್ತಿದ್ದರೂ ಪಥಿಕರಲ್ಲಿ ತಲೆದೋರುತ್ತಿರುವ ಉದಾರವಲ್ಲದ ಎಲ್ಲ ಮನಸ್ತಾಪಗಳ ಅಂತ್ಯಕ್ರಿಯೆಯನ್ನು ಸೂಚಿಸುವ ಘಂಟಾನಾದವೂ ಆಗಲಿ ಎಂಬುದೇ ನನ್ನ ಆಶಯ'' ಎಂದು ಅವರು ತಮ್ಮ ಮೊದಲ ಚಿಕಾಗೋ ಭಾಷಣವನ್ನು ಮುಗಿಸುತ್ತಾರೆ.



ಚಿಕಾಗೋ ಉಪನ್ಯಾಸಗಳ ನಂತರ ಸ್ವಾಮಿ ವಿವೇಕಾನಂದರು ಜಗತ್ಪ್ರಸಿದ್ಧರಾದರು. ಅಮೆರಿಕ, ಯೂರೋಪ್ ಹಾಗೂ ಭಾರತದಲ್ಲಿ ಅವರು ವ್ಯಾಪಕವಾಗಿ ಪ್ರವಚನ ಮಾಡಿದರು, ಹಲವು ಮಂದಿ ಪ್ರಮುಖ ವ್ಯಕ್ತಿಗಳೊಂದಿಗೆ ವಿಚಾರ ವಿನಿಮಯ ಮಾಡಿದರು. ಆದರೆ ಅವರು ಎಂದಿಗೂ ತನ್ನ ಮಾತೃಭೂಮಿ, ತನ್ನ ದೇಶದ ಜನತೆ, ಹಾಗೂ ತನ್ನ ಆದರ್ಶ-ಧ್ಯೇಯಗಳನ್ನು ಮರೆಯಲಿಲ್ಲ. ಹಿಮಾಲಯದ ತುತ್ತತುದಿಗೇರಿದರೂ ದೂರದ ತನ್ನ ಹಳ್ಳಿಯ ಮಣ್ಣಿನ ವಾಸನೆಯನ್ನು ಮರೆಯದ ಪರ್ವತಾರೋಹಿಯಂತೆ, ಪ್ರಸಿದ್ಧಿಯ ಶಿಖರಕ್ಕೇರಿದರೂ, ಆಧ್ಯಾತ್ಮಿಕ ಅನುಭವದ ಉತ್ತುಂಗಕ್ಕೇರಿದರೂ ಅವರ ಹೃದಯ ಮಗುವಿನಂತಿತ್ತು; ಪ್ರತಿಯೊಂದು ಜೀವಿಗೂ ಮಿಡಿಯುತ್ತಿತ್ತು. ವಿಶ್ವದಾದ್ಯಂತ ಹೊಸ ಆಧ್ಯಾತ್ಮಿಕ ಅಲೆಯನ್ನೇ ಎಬ್ಬಿಸಿದರು ಸ್ವಾಮೀಜಿ. ವಿಶ್ವಭ್ರಾತೃತ್ವ, ವಿಶ್ವಧರ್ಮ ಹಾಗೂ ಪ್ರಾಯೋಗಿಕ ವೇದಾಂತದ ಮಹತ್ವವನ್ನು ಸಾರಿದ ಅವರ ಸಂದೇಶಗಳು ಇಂದಿಗೂ ಜಗತ್ತಿನೆಲ್ಲೆಡೆ ಅನುರಣಿಸುತ್ತಿವೆ. ಚಿಕಾಗೋ ಉಪನ್ಯಾಸದ ಮೂಲಕ ಸ್ವಾಮೀಜಿಯವರ ಮಹಾನ್ ವ್ಯಕ್ತಿತ್ವ ಇಡೀ ಜಗತ್ತಿನ ಮುಂದೆ ಪ್ರಕಟಗೊಂಡಿತು; ಇದು ವಿಶ್ವನಿಯಾಮಕನ ವ್ಯವಸ್ಥಿತ ಯೋಜನೆಗೆ ಅನುಗುಣವಾಗಿಯೇ ನಡೆದಿರಬಹುದು! ಹಲವು ಏರುಪೇರುಗಳ, ಕಾಲಬದ್ಧ ಬದಲಾವಣೆಗಳ ನಡುವೆ, ಪ್ರಕೃತಿಯ ಲೀಲಾವ್ಯಾಪಾರದಲ್ಲಿ ಇದೊಂದು ಹೊಸ ಮಿಂಚು! ಜಗತ್ತನ್ನೇ ತನ್ನತ್ತ ಸೆಳೆದ ಆಕರ್ಷಕ ಬೆಳಕಿನೊಂದಿಗೇ ಅನುಸರಿಸಿ ಬಂತು ಅಲೆಯಲೆಯಾದ ಗುಡುಗಿನ ಶಬ್ದಸಾಗರ! ನೆನೆದಷ್ಟೂ ಗಂಭೀರ, ಶಾಂತ ಹಾಗೂ ಸುಮಧುರ ಅವರ ವಾಣಿ. ಚಿಕಾಗೋ ಉಪನ್ಯಾಸಗಳು ನಡೆದು ಇಂದಿಗೆ ೧೨೫ ವರ್ಷಗಳು ಸಂದಿವೆ. ಸ್ವಾಮೀಜಿ ಅಲ್ಲಿ ಮೊಳಗಿಸಿದ ಸಂದೇಶಗಳು ಇನ್ನಷ್ಟು ವ್ಯಾಪಕವಾಗಿ ಹರಡಲಿ ಎಂಬುದೇ ನಮ್ಮ ಹಾರೈಕೆ.



ಚಿಕಾಗೋದಲ್ಲಿ ಪ್ರದರ್ಶಿಸಿದ ಭಿತ್ತಿಚಿತ್ರ



ಸಂಪಾದಕೀಯ

ನಮ್ಮ ಅರಿವಿನ ಮಿತಿ

ನಮ್ಮ ಬದುಕಿನಲ್ಲಿ ಅರಿವು ಎಂಬುದು ಬಹಳ ಮಹತ್ವದ ಪಾತ್ರ ವಹಿಸುತ್ತದೆ. ಶಿಕ್ಷಣ, ವೃತ್ತಿ, ಬೆಳವಣಿಗೆ, ಜ್ಞಾನದ ಆವಿಷ್ಕಾರ – ಎಲ್ಲವೂ ಒಂದಲ್ಲ ಒಂದು ರೀತಿ ಅರಿವಿನ ಪ್ರಕ್ರಿಯೆಯನ್ನೇ ಅವಲಂಬಿಸುತ್ತವೆ. ಇಂಥ ಅರಿವು ಆಧ್ಯಾತ್ಮಿಕ ಜಗತ್ತಿನಲ್ಲಿ ಯಾವ ಸ್ವರೂಪವನ್ನು ಪಡೆದುಕೊಳ್ಳುತ್ತದೆ? ಈ ಪ್ರಶ್ನೆ ಹಲವು ಬಗೆಯ ಸಮಸ್ಯೆಗಳನ್ನು ತಂದೊಡ್ಡುತ್ತವೆ; ಅಂತೆಯೇ ಅರಿವನ್ನು ಕುರಿತ ಸೂಕ್ಷ್ಮ ವಿಶ್ಲೇಷಣೆಗೂ ದಾರಿ ಮಾಡಿಕೊಡುತ್ತವೆ.

ಅರಿವು: ಅದರ ಮಹತ್ವವೇನು?

ನಮ್ಮೆಲ್ಲರ ಅನುಭವಕ್ಕೆ ನಿಲುಕುವ ಒಂದು ವಿಚಾರವನ್ನು ತೆಗೆದುಕೊಳ್ಳೋಣ. ಒಂದು ವಸ್ತುವನ್ನು ನಾವು ಕಂಡಿಲ್ಲ, ಕೇಳಿಲ್ಲ, ಅದನ್ನು ಕುರಿತ ಯಾವ ಮಾಹಿತಿಯೂ ನಮಗಿಲ್ಲ. ಇದ್ದಕ್ಕಿದ್ದಂತೆ ಎಲ್ಲಿಂದಲೋ ಆ ವಸ್ತು ನಮ್ಮ ಬಳಿಗೆ ಬಂತು. ಸ್ನೇಹಿತ ಅದನ್ನು ಉಡುಗೊರೆ ನೀಡಿ ಹೇಳಿದ, ''ನಿನಗೇ ಕಣೋ. ವಿದೇಶದಿಂದ ತಂದಿದ್ದೇನೆ. ತೆಗೆದುಕೋ.'' ಅರ್ಥವಾಗದೆ ನಾನು ತಲೆ ಅಲ್ಲಾಡಿಸಿ ಕೇಳುತ್ತೇನೆ, ''ಏನಿದು? ಇದರ ಹೆಸರೇನು?'' ಆತ ಉತ್ತರಿಸುತ್ತಾನೆ, ''ಗ್ಲುಕೋಮೀಟರ್ ಅನ್ನುತ್ತಾರೆ. ನಿನ್ನ ರಕ್ತದಲ್ಲಿರುವ ಸಕ್ಕರೆ ಪ್ರಮಾಣ ಅಳೆಯುತ್ತದೆ.'' ''ಹೌದೆ? ಆಶ್ಚರ್ಯ!'' ಎನ್ನುತ್ತೇನೆ.

ಹೌದು, ಆಶ್ಚರ್ಯವೇ. ಹೊಸದಾಗಿ ಬರುವ ಜ್ಞಾನವೆಲ್ಲವೂ ಆಶ್ಚರ್ಯವೇ. ಇಲ್ಲಿಯತನಕ ತಿಳಿದಿರದ, ಹೊಸದಾಗಿ ನಮ್ಮ ಮನದಲ್ಲಿ ಬೆಳಕಿನಂತೆ ಮೂಡಿ ಬಂದ ಜ್ಞಾನ ಒಂದು ಅಚ್ಚರಿಯಲ್ಲದೆ ಮತ್ತೇನು? ಪ್ರತಿಯೊಂದು ಜ್ಞಾನವೂ ಅಷ್ಟೆ. ಅರಿವಿಗೆ ಮುನ್ನ ಏನೂ ಇಲ್ಲದ ಸ್ಥಿತಿ; ಆಮೇಲೆ 'ಏನೋ ಒಂದು ಇದೆ' ಎಂಬ ಮಬ್ಬುಮಬ್ಬಾದ, 'ಅದೊಂದು ಇದೆ' ಎಂಬ ಅರಿವನ್ನು ಕುರಿತು ಸೂಚನೆ ಮಾತ್ರ ಸಿಕ್ಕಿರುವ ಸ್ಥಿತಿ; ಕೊನೆಗೆ ಅರಿವು ಮೂಡಿದಾಗ ಎಲ್ಲವೂ ಬಯಲಾದ, ಮುಂಜಾನೆ ಬೆಳಕಾದಂತೆ ಎಲ್ಲವೂ ತಿಳಿಯಾದ ಒಂದು ಹರ್ಷದಾಯಕ ಕ್ಷಣ. ಕೆಲವೊಮ್ಮೆ ಸುಳಿವು, ಸೂಚನೆ ನೀಡುವ ಮಧ್ಯದ ಸ್ಥಿತಿ ಇರುವುದೇ ಇಲ್ಲ. ಧುತ್ತೆಂದು ಅರಿವು ಮಿಂಚಿನಂತೆ ಬಂದೆರಗುತ್ತದೆ. ಆಗ ನಮ್ಮ ಆಶ್ಚರ್ಯ, ಆನಂದಕ್ಕೆ ಮಿತಿಯಿಲ್ಲ. ಅನಿರೀಕ್ಷಿತವಲ್ಲವೆ ಇದು?

ನಮ್ಮ ಎಲ್ಲ ಜ್ಞಾನವೂ ಇದೇ ರೀತಿ ಹಲವು ಅರಿವುಗಳ ಸರಪಳಿ. ಎಲ್ಲಿ ಆರಂಭವಾಯಿತೋ, ಎಷ್ಟು ದೂರ ಕ್ರಮಿಸಿತೋ, ಎಲ್ಲಿ ಕೊನೆಯಾಗುವುದೋ ಹೇಳಲಾಗದ ರೈಲುಗಾಡಿಯಂಥ ಒಂದು ಪ್ರಯಾಣ — ನಮ್ಮ ಅರಿವಿನ ಗತಿ. ಬಾಲ್ಯದಲ್ಲಿ ಯಾವಾಗ ನಮ್ಮಲ್ಲಿ ಅರಿಯುವ ಪ್ರಕ್ರಿಯೆ ಆರಂಭವಾಯಿತು? ನಮ್ಮ ನೆನಪುಗಳು ಹಿಂದುಹಿಂದಕ್ಕೆ ಹೋದಷ್ಟೂ ಮಬ್ಬುಮಬ್ಬಾಗುತ್ತವೆ. ನಮ್ಮ ನೆನಪುಗಳಿಗೂ ದೂರ, ಇನ್ನೂ ಆಳದಲ್ಲಿ ಅರಿವಿನ ಪ್ರಕ್ರಿಯೆ ಆರಂಭವಾಗಿರಬೇಕು. ನಮ್ಮ ಮೆದುಳಿನ ಬೆಳವಣಿಗೆ, ಬೌದ್ಧಿಕ ಬೆಳವಣಿಗೆ ಯಾವಾಗ? ಬಾಲ್ಯದಲ್ಲಿ 'ಬುದ್ಧಿ ಬಂದಾಗಿನಿಂದ' ಎಂದು ನಾವು ಹೇಳುವ ಕಾಲ ಎಂದು ಉಂಟಾಗುವುದು? ಅದಕ್ಕೂ ಮೊದಲೇ ನಮ್ಮಲ್ಲಿ ಅರಿಯುವ ಪ್ರಕ್ರಿಯೆ ಉಂಟಾಗುತ್ತದೆ. ಇದೊಂದು ಅಚ್ಚರಿಯ ಸಂಗತಿ. ಏನಿದ್ದರೂ, ಬಾಲ್ಯದಿಂದಲೇ ನಾವು ಹಲವು ಬಗೆಯ ಜ್ಞಾನಗಳನ್ನು ಒಂದಕ್ಕೊಂದು ಜೋಡಿಸುತ್ತ ಬೆಳೆದಿರುವ ಪ್ರಕ್ರಿಯೆ ಅತ್ಯಂತ ಆಶ್ಚರ್ಯಕರವಾದದ್ದು. ವರ್ಷಗಳು ಕಳೆದಂತೆ ಈ 'ಅರಿವಿನ ರೈಲುಗಾಡಿ' ಉದ್ದವಾಗುತ್ತ ಹೋಗುತ್ತದೆ. ಒಂದೊಂದು ಬೋಗಿ (ಅಂದರೆ ಜ್ಞಾನದ ತುಣುಕು) ಸೇರಿದಾಗಲೂ ಇಡೀ ರೈಲುಗಾಡಿಯ ಒಟ್ಟು ಸ್ವರೂಪವೇ ಬದಲಾಗುತ್ತದೆ. ಪ್ರತಿಕ್ಷಣವೂ ನಾವು ಹೊಸತನ್ನು ಅರಿಯುತ್ತಿರುತ್ತೇವೆ, ಅದೇ ರೀತಿ ಪ್ರತಿಕ್ಷಣವೂ ನಮ್ಮ ಒಟ್ಟು ಜ್ಞಾನದ ಅಸ್ತಿತ್ವವೇ ಬದಲಾಗುತ್ತದೆ. ಅಂದರೆ ನಾವು ಪ್ರತಿಕ್ಷಣವೂ ಬದಲಾಗುತ್ತಿರುತ್ತೇವೆ.

ಇದು ಯಾವ ಸೀಮೆಯ ತರ್ಕ? ನಾವು ಪ್ರತಿಕ್ಷಣವೂ ಬದಲಾಗುತ್ತೇವೆ, ನಮ್ಮ ಅರಿವು ಪ್ರತಿಕ್ಷಣವೂ ಹೊಸದಾಗಿ, ನಿರಂತರ ಮಾರ್ಪಾಡುತ್ತದೆ ಎಂದಾದರೆ, ನಮ್ಮಲ್ಲಿ ಸ್ಥಿರತೆ ಎಂಬುದಿಲ್ಲವೆ? 'ನಾನು' ಎಂದು ಏನನ್ನು ಕರೆಯಬೇಕು? ಪ್ರತಿಕ್ಷಣವೂ ಬದಲಾಗುತ್ತಿರುವ, ಹಿಡಿತಕ್ಕೆ ಸಿಗಲಾರದ 'ನಾನು' ಎಂಬುದು ಇರುವುದಾದರೂ ಎಲ್ಲಿ? — ಇಂಥ ಗೊಂದಲದ ಪ್ರಶ್ನೆಗಳು ಏಳುತ್ತವೆ. ನಮಗೆ ಅರಿವಿಲ್ಲದೆ ನಮ್ಮ ಅರಿವು ವಿಸ್ತಾರವಾಗುತ್ತದೆ. ಅದೇ ರೀತಿ, ನಮ್ಮನ್ನು ನಾವು 'ನಾನು' ಎಂದು ಗುರುತಿಸಿಕೊಳ್ಳುವ ಅಸ್ತಿತ್ವವೂ ಬದಲಾಗುತ್ತದೆ, ಇಂಥ ಬದಲಾವಣೆಯನ್ನು ನಮಗರಿವಿಲ್ಲದೆಯೇ ಒಪ್ಪಿಕೊಳ್ಳುತ್ತೇವೆ. ಇದೇ ಅರಿವಿನ ಮಹತ್ವ — ಅರಿವಿಲ್ಲದೇ ಅರಿವು ವಿಸ್ತಾರವಾಗುವುದು.

ಅರಿವಿನ ಬಗೆಗಳು

ಜ್ಞಾನಕ್ಕೆ ಕೊನೆಯೆಂಬುದಿಲ್ಲ ಎನ್ನುತ್ತಾರೆ, ಕಲಿತಷ್ಟೂ ಮುಗಿಯುವುದಿಲ್ಲ ; ಜಗತ್ತಿನ ಜ್ಞಾನಸಾಗರ ಎಂದೂ ಬತ್ತಿಹೋಗದು,

ಅದು ವಿಸ್ತಾರವಾಗುತ್ತಾ ಹೋಗುತ್ತದೆ. ಆದರೆ ಎಲ್ಲ ಅರಿವೂ ಒಂದೇ ರೀತಿಯದೆ? ಎಲ್ಲ ಜ್ಞಾನ ಪ್ರಕಾರಗಳೂ ಸಮಾನವೆ? ಅಧ್ಯಯನದ ಹಾಗೂ ಶಿಕ್ಷಣದ ಅನುಕೂಲತೆಗಳಿಗೆ ತಕ್ಕಂತೆ ಒಟ್ಟು ಜ್ಞಾನವನ್ನು ವಿಜ್ಞಾನ, ಭೂಗೋಳ, ಚರಿತ್ರೆ, ಗಣಿತ ಮುಂತಾದ ಶಾಖೆಗಳಾಗಿ ವರ್ಗೀಕರಿಸಲಾಗಿದೆ, ನಿಜ. ಅದೇ ರೀತಿ ಶೈಕ್ಷಣಿಕ ಕ್ಷೇತ್ರಗಳ ಹೊರಗೆ ಕೂಡ ಅಸಂಖ್ಯಾತ ಜ್ಞಾನಶಾಖೆಗಳು ಇವೆ. ಇವುಗಳಷ್ಟೇ ಅಲ್ಲದೆ, ಯಾರೂ ಗಮನಿಸದ ರೀತಿಯಲ್ಲಿ ನಾವು ಪ್ರತಿಕ್ಷಣವೂ ನೋಡಿ, ಕೇಳಿ, ಅನುಭವಿಸಿ ಅರಿತುಕೊಳ್ಳುವ ಜ್ಞಾನಗಳು ಅನೇಕ. ಇವು ನಮ್ಮ ಅರಿವಿನ ಅಗಾಧ ಸಮುದ್ರದಲ್ಲಿ ಒಂದೊಂದೇ ಹನಿಯಾಗಿ ಸೇರಿಕೊಳ್ಳುತ್ತವೆ. ಇವೆಲ್ಲ ಬಗೆಗಳನ್ನು ಒಟ್ಟಾಗಿ ಸೇರಿಸಿ 'ಪ್ರಾಪಂಚಿಕ ಅರಿವು' ಎನ್ನಬಹುದು. ಇವನ್ನು ಮೀರಿದ ಒಂದು ಅರಿವಿದೆ. ಅದು ಎಲ್ಲ ಅರಿವುಗಳನ್ನೂ ಮೀರಿದ, ಪ್ರಪಂಚದ ಆಚೆಗಿನ, ನಮ್ಮ ಇಂದ್ರಿಯ-ಮನಸ್ಸು-ಮಾತು-ಬುದ್ಧಿ ಇವುಗಳಾಚೆಗೆ ಇರುವ ಅರಿವು. ಇದನ್ನು **ಅಧ್ಯಾತ್ಮ ಜ್ಞಾನ**ವೆನ್ನುತ್ತೇವೆ. ಇದನ್ನು 'ಪರಾ ವಿದ್ಯೆ' ಎಂದು ಮುಂಡಕೋಪನಿಷತ್ತು ಕರೆಯುತ್ತದೆ. ಈ ಅರಿವು ಲಭಿಸುವುದು ಉಳಿದ ಅರಿವುಗಳನ್ನು ಪಡೆಯುವಂತೆ, ಪುಸ್ತಕಗಳನ್ನು ಓದುವುದರಿಂದ ಅಥವಾ ಪಾಠ ಕೇಳುವುದರಿಂದ ಅಲ್ಲ. ಯಾರು ಅಂತಹ ಮಹತ್ತಾದ ವಿದ್ಯೆಯನ್ನು ಈಗಾಗಲೇ ಪಡೆದಿದ್ದಾನೋ ಅಂಥವನ ಮಾರ್ಗದರ್ಶನದಿಂದ, ಅವನ ಮಾತಿನಂತೆ ಇಡೀ ಜೀವನವನ್ನೇ ಶಿಸ್ತಿನ ಕ್ರಮಕ್ಕೆ ಒಳಪಡಿಸಿ ಸಾಧನೆ ಮಾಡುವುದರಿಂದ ಅತಿ ಶ್ರೇಷ್ಠವಾದ ಈ ಅರಿವಿಗೆ (ಇದು ಅತಿ ಶ್ರೇಷ್ಠವಾದ ವಿದ್ಯೆಯಾದದ್ದರಿಂದಲೇ ಇದನ್ನು 'ಪರಾ' ಅಂದರೆ ಹೆಚ್ಚಿನದು ಎನ್ನಲಾಗಿದೆ) ಕೊಡಬೇಕಾದ ಬೆಲೆ ಅದು — ಇಡೀ ಜೀವನವನ್ನೇ ಸಮರ್ಪಿಸುವುದು. ಹೀಗೆ ಪ್ರಾಪಂಚಿಕ ವಿದ್ಯೆ, ಅಧ್ಯಾತ್ಮ ವಿದ್ಯೆ ಎಂದು ಅರಿವಿನಲ್ಲಿ ಎರಡು ಬಗೆ ಎಂದು ಉಪನಿಷತ್ತು ಹೇಳಿದೆ; ಎಲ್ಲ ಜ್ಞಾನಶಾಖೆಗಳೂ, ಕೊನೆಗೆ ಸ್ವತಃ ತಾನೇ ಯಾವುದರ ಭಾಗವಾಗಿದೆಯೋ ಅಂತಹ ವೇದಗಳೂ 'ಅಪರಾ ವಿದ್ಯೆ'ಯಲ್ಲೇ ಸೇರುತ್ತದೆ ಎನ್ನುತ್ತದೆ ಉಪನಿಷತ್ತು. ಅಂದರೆ, 'ಪರಾ ವಿದ್ಯೆ'ಯೆಂಬುದು ವೇದಗಳಿಗೂ ಮೀರಿದ ಜ್ಞಾನ; ಅದು ಆಧ್ಯಾತ್ಮಿಕ ಅನುಭವ.

ಲೌಕಿಕ ಅರಿವಿನಾಚೆಗೆ

ಹಾಗಿದ್ದರೆ, ಲೌಕಿಕ ಅರಿವಿಗೆ ಏನೂ ಬೆಲೆಯಿಲ್ಲವೆ? ಆಧ್ಯಾತ್ಮಿಕ ಜ್ಞಾನದ ಮಹತ್ವವನ್ನು ಹೇಳುವ ಭರದಲ್ಲಿ ಲೌಕಿಕ ಜ್ಞಾನಗಳನ್ನು ನಮ್ಮವರು ಕಡೆಗಣಿಸಿದಂತಾಗಲಿಲ್ಲವೆ? ನಮ್ಮ ದೇಶ ವಿಜ್ಞಾನ-ತಂತ್ರಜ್ಞಾನಗಳಲ್ಲಿ ಉಳಿದ ದೇಶಗಳಿಗಿಂತ ಹಿಂದಿರುವ ಸಂದರ್ಭದಲ್ಲಿ ಇಂತಹ ವಿಚಾರಗಳು ಇನ್ನಷ್ಟು ಹಿನ್ನಡೆಗೆ ಕಾರಣವಾಗಲಾರವೆ?

ಈ ಪ್ರಶ್ನೆಗೆ ಉತ್ತರಿಸುವ ಮುನ್ನ ಲೌಕಿಕ-ಆಧ್ಯಾತ್ಮಿಕ ಎಂಬ ಈ ಎರಡು ಪ್ರಪಂಚಗಳು ಹೇಗಿವೆ, ಹೇಗೆ ಇವುಗಳನ್ನು ಗ್ರಹಿಸಬೇಕು ಎಂಬುದನ್ನು ಕುರಿತು ತುಸು ಚಿಂತಿಸೋಣ. ಈ ಬದುಕು ನಶ್ವರ, ಈ ಪ್ರಪಂಚ ನಿಸ್ಸಾರ, ಇದಕ್ಕೆ ಆಧಾರವಾದ ಪರತತ್ತ್ವವೇ ಎಲ್ಲದಕ್ಕಿಂತ ಮುಖ್ಯ ಹಾಗೂ ಅದನ್ನು ಕಂಡುಕೊಳ್ಳುವುದೇ ಧ್ಯೇಯವಾಗಬೇಕು — ಇದು ಭಾರತದಲ್ಲಿ ಹುಟ್ಟಿದ (ಹಿಂದೂ, ಬೌದ್ಧ, ಜೈನ) ಧರ್ಮಗಳಲ್ಲಿ ಕಂಡುಬರುವ ಸಮಾನ ಅಂಶ. ಆದರೆ ಇದು ಹೇಗೆ ಸಾಧ್ಯವಾಗುವುದು? ಪ್ರಪಂಚವನ್ನು ಕಡೆಗಣಿಸುವುದರಿಂದಲೆ? ಇದು ನಿಸ್ಸಾರವೆಂದು ಏನೂ ಮಾಡದೆ ಸುಮ್ಮನಿರುವುದರಿಂದಲೆ? ನಮ್ಮ ಪರಂಪರೆ ಎಲ್ಲೂ ಈ ಬಗೆಯ ಜಡತ್ವವನ್ನು ಬೋಧಿಸುವುದಿಲ್ಲ. ಬದಲಾಗಿ, ಈ ಪ್ರಪಂಚದಲ್ಲಿ ಪರಿಪೂರ್ಣವಾಗಿ ಬದುಕಬೇಕು; ಈ ಪ್ರಪಂಚದ ವಿಷಯವಾಗಿ ಎಷ್ಟು ಅಗತ್ಯವೋ ಅಷ್ಟನ್ನು ಅರಿತುಕೊಂಡು, ಅಲ್ಲಿಗೆ ನಿಲ್ಲದೆ, ಅದನ್ನು ಮೀರಿ ಹೋಗಬೇಕು — ಇದು ನಮ್ಮ ಶಾಸ್ತ್ರಗಳು ಸಾರುವ ಬೋಧನೆ.[೧] ಲೌಕಿಕ ಜೀವನದ ತಳಹದಿಯ ಮೇಲೆ ನಿಂತು, ದೃಢವಾದ ಮೆಟ್ಟಿಲನ್ನೇರಿ ಹೋಗಿ ಪಾರಮಾರ್ಥಿಕ ತತ್ತ್ವವನ್ನು ಹೊಂದಬೇಕು ಎಂಬುದನ್ನು ಎಲ್ಲ ಪರಂಪರೆಯ ತತ್ತ್ವಗಳೂ ಒತ್ತಿ ಹೇಳುತ್ತವೆ. ಈ ಹಿನ್ನೆಲೆಯಲ್ಲಿ, ಲೌಕಿಕ ಜೀವನಕ್ಕೆ ಅಗತ್ಯವಾದ ವಿವಿಧ ಲೌಕಿಕ ಜ್ಞಾನಗಳೂ ಅಷ್ಟೇ ಮುಖ್ಯ; ಆದರೆ ಅಲ್ಲೇ ನಿಲ್ಲಬಾರದು, ಅವುಗಳನ್ನು ಮೀರಿ ಪಾರಮಾರ್ಥಿಕ ಜ್ಞಾನವನ್ನು ಪಡೆಯಬೇಕು ಎಂಬುದು ಅತ್ಯಂತ ಪ್ರಧಾನವಾದ ವಿಚಾರ. ಅಂತಿಮ ಗುರಿ ಪರಮಾರ್ಥವೇ; ಲೋಕವನ್ನು ಮೀರಿದ ಆಧ್ಯಾತ್ಮಿಕ ಸತ್ಯಗಳೇ ಎಲ್ಲಕ್ಕಿಂತ ಮುಖ್ಯ. ಏಕೆಂದರೆ ಈ ಪ್ರಪಂಚಕ್ಕೂ ಎಲ್ಲ ಲೌಕಿಕ ಜ್ಞಾನಗಳಿಗೂ ಅದೇ ಮೂಲ; ಅದನ್ನು ಅರಿಯುವುದರಿಂದ ಮಾತ್ರ ಪರಿಪೂರ್ಣತೆಯನ್ನು ಹೊಂದಬಹುದು.

ಅರಿವಿನ ಮಿತಿ

ಇದರ ನಡುವೆ, ಅರಿವೇ ಮಿತಿಯಾಗುವ ಒಂದು ವಿಚಿತ್ರ ಸನ್ನಿವೇಶವನ್ನು ನಾವು ಗಮನಿಸಬೇಕು. ಎಲ್ಲ ಜ್ಞಾನವೂ ಒಂದಲ್ಲ ಒಂದು ರೀತಿಯ ವರ್ಗೀಕರಣವೆನ್ನುತ್ತಾರೆ. ಮೆದುಳಿನ ಒಂದೊಂದು ಜ್ಞಾನಕ್ಕೂ ಒಂದೊಂದು ವಿಭಾಗವಿರುತ್ತದೆ; ನಾವು ಗ್ರಹಿಸುವ ಜ್ಞಾನವನ್ನೆಲ್ಲ ಆಯಾ ವಿಭಾಗಗಳಿಗೆ ತುರುಕುತ್ತವೆ. ಒಂದು ವೇಳೆ ಅದಕ್ಕೆ ಸಂಬಂಧಿಸಿದ ವಿಭಾಗವೇ ಇಲ್ಲದಿದ್ದರೆ ಮೆದುಳು ಹೊಸ ವಿಭಾಗವನ್ನು ತೆರೆಯುತ್ತದೆ — ಇದು ಈಗಾಗಲೇ ಎಲ್ಲರೂ ತಿಳಿದಿರುವ ವಿಚಾರ. ಹೀಗೆ ಜ್ಞಾನದ ಭಂಡಾರ ಮನುಷ್ಯನ ಮನಸ್ಸಿನಲ್ಲಿ ವಿಸ್ತಾರವಾಗುತ್ತ ಹೋಗುವುದಲ್ಲವೆ? ಗ್ರಂಥಗಳು ಸಹಸ್ರ, ಲಕ್ಷ ಸಂಖ್ಯೆಯಲ್ಲಿ ಹೆಚ್ಚಾದಂತೆ ಗ್ರಂಥಾಲಯ ಬೆಳೆಯುವುದಲ್ಲವೆ? ಇಲ್ಲಿ ಮಿತಿ ಏನು ಬಂತು? ಪ್ರಶ್ನೆ ತಾರ್ಕಿಕವೇ. ಆದರೆ ಜ್ಞಾನವೂ ಒಂದು ಮಿತಿಯಾಗುವುದು ಒಂದು ವಿಭಿನ್ನ ಸಂದರ್ಭದಲ್ಲಿ, ವಿಭಿನ್ನ ದೃಷ್ಟಿಕೋನದಿಂದ.

---

೧ **'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ'** (ಈ ಲೋಕದಲ್ಲಿ ಕರ್ಮಗಳನ್ನು ಮಾಡುತ್ತಲೇ ನೂರು ವರ್ಷ ಜೀವಿಸಲು ಇಚ್ಛೆಪಡಬೇಕು) *(ಈಶ., ೨)*; **'ನ ಕರ್ಮಣಾಮನಾರಂಭಾತ್ ನೈಷ್ಕರ್ಮ್ಯಂ ಪುರುಷೋಽಶ್ನುತೇ'** (ಕರ್ಮಗಳನ್ನು ಆರಂಭಿಸಿದೆ ಇರುವುದರಿಂದ ಮನುಷ್ಯನು ನೈಷ್ಕರ್ಮ್ಯವನ್ನು ಹೊಂದುವುದಿಲ್ಲ.' *(ಗೀತಾ, ೩.೪)* **'ಈಸಬೇಕು ಇದ್ದು ಜೈಸಬೇಕು'** *(ಪುರಂದರದಾಸರು)*

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ‘‘ಹೊರಗಿನಿಂದ ಯಾವ ಜ್ಞಾನವೂ ಬರುವುದಿಲ್ಲ. ಅದೆಲ್ಲವೂ ಒಳಗೇ ಇರುವುದು.’’ *(ಕೃತಿಶ್ರೇಣಿ, ಸಂ.೧, ಪು. ೨೯)* ವೇದಾಂತ ತತ್ತ್ವಗಳ ಪ್ರಕಾರ ಮನುಷ್ಯನ ಮೂಲ ಸ್ವಭಾವವೇ ಪರಿಪೂರ್ಣತೆ. ಪರಬ್ರಹ್ಮ ವಸ್ತುವೇ ಅವನ ನೈಜಸ್ವರೂಪ. ಅವಿದ್ಯೆ, ಕಾಮ, ಕರ್ಮ ಇವುಗಳ ಕಾರಣದಿಂದ ಅವನು ತನ್ನ ನಿಜಸ್ವಭಾವವನ್ನು ಮರೆತು, ಜನ್ಮ ಜನ್ಮಾಂತರದ ಸಂಸಾರಚಕ್ರದಲ್ಲಿ ಬಂಧಿತನಾಗಿದ್ದಾನೆ. ಆದರೆ ಅವನ ಅಂತರಂಗದಲ್ಲಿ ಅಡಗಿರುವ ಚೈತನ್ಯವು ಪರಬ್ರಹ್ಮನ ಒಂದು ಕಿಡಿ; ಅದರಿಂದಲೇ ಅವನು ಎಲ್ಲವನ್ನೂ ಅರಿತುಕೊಳ್ಳ ಬಲ್ಲನು, ಎಲ್ಲ ಕ್ರಿಯೆಗಳನ್ನೂ ಮಾಡಬಲ್ಲನು. ಆದರೆ ಅವನು ತನ್ನ ನಿಜಸ್ವರೂಪವನ್ನು ಅರಿಯುವ ಬದಲು, ಪ್ರಪಂಚದಲ್ಲೇ ತನ್ನ ಜ್ಞಾನವನ್ನು ವಿಸ್ತರಿಸುತ್ತ ಹೋದರೆ, ಅವನು ಅಲ್ಲೇ ತೊಳಲಾಡುತ್ತಾನೆ. ನಿಜವಾದ ಅರಿವೆಂದರೆ ತನ್ನ ನೈಜಸ್ವರೂಪದ ಅರಿವು; ಅದೇ ಅಧ್ಯಾತ್ಮಜ್ಞಾನ ಅಥವಾ ಪರಾವಿದ್ಯೆ. ಪ್ರಾಪಂಚಿಕ ಜ್ಞಾನ ವಿಸ್ತಾರವಾಯಿತೆಂದರೆ, ತನ್ನ ನೈಜಸ್ವಭಾವದಿಂದ ದೂರ ಸರಿದಂತೆ. ಲೌಕಿಕ ಜ್ಞಾನ ಹೆಚ್ಚು ಹೆಚ್ಚು ನಮ್ಮಲ್ಲಿ ತುಂಬಿದಷ್ಟೂ ಆಂತರಿಕ ಜ್ಞಾನ ಕಡಿಮೆಯಾದಂತೆ. ಹೀಗಾಗಿ, ಉಳಿದೆಲ್ಲ ಅರಿವನ್ನೂ ತ್ಯಜಿಸಿ, ಆತ್ಮಜ್ಞಾನವೊಂದನ್ನು ಮಾತ್ರ ಉಳಿಸಿಕೊಳ್ಳುವುದು ಆಧ್ಯಾತ್ಮಿಕ ಸಾಧನೆ. ‘ಪ್ರತ್ಯಯ’ ಎಂದು ವೇದಾಂತದಲ್ಲೂ, ‘ವೃತ್ತಿ’ ಎಂದು ಯೋಗದಲ್ಲೂ ಕರೆಯುವ ಮಾನಸಿಕ ಆಲೋಚನೆಯ ಕ್ರಿಯೆಯನ್ನು ಒಂದು ಶಿಸ್ತಿಗೆ ಒಳಪಡಿಸಿ, ಅದನ್ನು ಒಂದೇ ಕಡೆಗೆ ಹರಿಯಬಿಟ್ಟು (ಇದಕ್ಕೆ ‘ಏಕಾಗ್ರತೆ’ ಎನ್ನುತ್ತೇವೆ) ಅದರಲ್ಲೇ ನಿರಂತರ ನೆಲೆಸುವುದು ಧ್ಯಾನ ಅಥವಾ ಯೋಗ. ಜಪಸಾಧನೆ, ಪೂಜೆ-ಪುನಶ್ಚರಣ, ಪ್ರಾರ್ಥನೆ, ಧ್ಯಾನಗಳ ಗುರಿ ಕೂಡ ಇದೇ; ‘ವೃತ್ತಿ’ ಅಥವಾ ಆಲೋಚನೆಗಳನ್ನು ಕಡಿಮೆ ಮಾಡಿ, ಅದನ್ನು ಒಂದೇ ಆಗಿಸುವುದು. ಹೀಗೆ, ಹಲವು ಜ್ಞಾನಗಳ ಮೂಲಕ ಹಲವೆಡೆ ಚೆದುರಿಹೋದ ಮನಸ್ಸನ್ನು ಒಂದೇ ಜ್ಞಾನದತ್ತ ಮರಳಿಸುವುದು; ಕೊನೆಗೆ ಆ ಒಂದು ಜ್ಞಾನವು ಪರಮಜ್ಞಾನವನ್ನು ಹೊಂದುವುದು — ಇದೇ ಎಲ್ಲ ಸಾಧನೆಗಳ ಗುರಿ.

ಈ ದೃಷ್ಟಿಕೋನದಲ್ಲಿ ಮಾತ್ರ ಅರಿವು — ಅಂದರೆ ಲೌಕಿಕ ಜ್ಞಾನ ಒಂದು ಮಿತಿಯಾಗುವುದು. ಇದನ್ನು ಮೀರಿ ಹೋಗಿ ಪಡೆಯುವ ಉನ್ನತ ಹಂತದ ಅರಿವು ಮಿತಿಯಾಗುವುದಿಲ್ಲ ; ಅದು ಅನಂತವಾಗುವುದು. ‘ಯಾವುದನ್ನು ಅರಿತರೆ ಉಳಿದೆಲ್ಲವನ್ನೂ ಅರಿಯಬಹುದೋ’ ಅಂತಹ ನಿಜವಾದ ವಿದ್ಯೆ ಅದು.

‘ಅರಿವೇ ಗುರು’

ಈ ಹಂತದಲ್ಲಿ ನಮಗೆ ಗುರುವಿನ ಮಹತ್ವ ಮುಖ್ಯವಾಗುತ್ತದೆ. ಈ ಲೋಕವನ್ನು ಮೀರಿದ, ಸಾಮಾನ್ಯರ ಗ್ರಹಿಕೆಯನ್ನು ಮೀರಿದ ಪಾರಮಾರ್ಥಿಕ ಜ್ಞಾನವನ್ನು ಪಡೆಯುವುದು ಹೇಗೆ? ಅದನ್ನು ಕಲಿಸಿಕೊಡಬಲ್ಲ ವ್ಯಕ್ತಿಗಳು ಇದ್ದಾರೆಯೆ? ಎಲ್ಲರೂ ಇದನ್ನು ಪಡೆಯಬಹುದೆ? ಕೆಲವೊಂದು ಆಧ್ಯಾತ್ಮಿಕ ಸಾಧನೆಗಳ ಮೂಲಕ ಈ ಜ್ಞಾನವನ್ನು ಎಲ್ಲರೂ ಪಡೆಯಬಹುದು. ಪರಾವಿದ್ಯೆ, ಯೋಗ, ಸಾಧನೆ ಎಂದೆಲ್ಲ ಶಾಸ್ತ್ರಗಳು ಕರೆದಿರುವುದು ಈ ವಿಧಿವಿಧಾನಗಳನ್ನೇ. ಹಲವು ಕಾಲಘಟ್ಟಗಳಲ್ಲಿ ಇಂತಹ ಸಾಧನೆಗಳ ಮೂಲಕ ಅಧ್ಯಾತ್ಮ ಜ್ಞಾನವನ್ನು ಪಡೆದ ಮಹಾತ್ಮರುಗಳು ಆಗಿ ಹೋಗಿದ್ದಾರೆ; ಈಗಲೂ ಪ್ರಪಂಚದಲ್ಲಿ ಅವರು ಇರಬಹುದು. ಅವರೇ ಇಂತಹ ಜ್ಞಾನವನ್ನು ನೀಡಬಲ್ಲ ಗುರುಗಳು. ಪ್ರತಿಯೊಂದು ಜ್ಞಾನವನ್ನು ಪಡೆಯಲು ಕೂಡ ವಿದ್ಯಾರ್ಥಿ ದೈಹಿಕವಾಗಿ, ಮಾನಸಿಕವಾಗಿ ಸ್ಥಿರನಾಗಬೇಕು — ಆಗ ಮಾತ್ರ ಅವನಿಗೆ ಅದಕ್ಕೆ ಪ್ರವೇಶ ದೊರಕುವುದು. ಅದೇ ರೀತಿ, ಅಧ್ಯಾತ್ಮಿಕ ಜ್ಞಾನವನ್ನು ಹೊಂದಲು ಒಬ್ಬ ವ್ಯಕ್ತಿ ಸಿದ್ಧನಾಗಬೇಕು. ಆಗ ತಾನಾಗಿಯೇ ಅವನು ಅಂತಹ ಜ್ಞಾನದತ್ತ, ಅದನ್ನು ಪಡೆದ ಗುರುವಿನತ್ತ ಆಕರ್ಷಿತನಾಗುವನು. ನಮ್ಮ ಆಧ್ಯಾತ್ಮಿಕ ಪರಂಪರೆ ಇದನ್ನು ಸ್ಪಷ್ಟವಾಗಿ ಹೇಳಿದೆ. ‘‘ದೈವಾನುಗ್ರಹದಿಂದ ಮಾತ್ರವೇ ಮನುಷ್ಯ ಜನ್ಮ, ಮೋಕ್ಷ ಪಡೆಯುವ ಇಚ್ಛೆ ಹಾಗು ಯೋಗ್ಯ ಗುರುವಿನ ಸಂಪರ್ಕ ದೊರಕುವುದು’’ ಎನ್ನುತ್ತಾರೆ ಶ್ರೀಶಂಕರರು.[೨]

ಇನ್ನೊಂದು ಹಂತದಲ್ಲಿ , ಸಾಧನೆಯಲ್ಲಿ ಮುಂದುವರಿದ ಸಾಧಕನ ಬಗ್ಗೆ ಹೇಳುತ್ತ ಶ್ರೀರಾಮಕೃಷ್ಣರು, ‘ಒಂದು ಹಂತದಲ್ಲಿ ಮನಸ್ಸೇ ಗುರುವಾಗುವುದು’ ಎನ್ನುತ್ತಾರೆ. ಆರಂಭದಲ್ಲಿ ಗುರುವಿನ ಮಾರ್ಗದರ್ಶನದಂತೆ ನಡೆಯುವ ಶಿಷ್ಯನು, ಮುಂದೆ ತನ್ನ ಅಂತರಂಗವೇ ತನಗೆ ದಾರಿ ತೋರುವುದನ್ನು ಕಾಣುತ್ತಾನೆ. ಆಗ ಅವನಿಗೆ ತನ್ನ ಮನಸ್ಸೇ ಗುರುವಾದಂತೆ, ತನ್ನ ಮನಸ್ಸೆಲ್ಲವೂ ಗುರುಸ್ಮರಣೆಯಿಂದ ಪವಿತ್ರವಾದಂತೆ ಭಾಸವಾಗುತ್ತದೆ. ಎಲ್ಲ ಉನ್ನತ ಜ್ಞಾನಕ್ಕೂ, ಆಧ್ಯಾತ್ಮಿಕ ಅನುಭವಗಳಿಗೂ ತನ್ನ ಮನಸ್ಸು ಒಲಿಯಬೇಕು. ತನ್ನ ಅಂತರಂಗದ ಕೀಲಿಕೈ ತನ್ನಲ್ಲೇ ಇದೆ — ಅದನ್ನು ತೆರೆಯದೆ ಏನೂ ದೊರಕದು ಎಂಬ ಮಾತೊಂದಿದೆ. ಇವೆಲ್ಲ ಸೂಚಿಸುವುದು ಅದೊಂದೇ ತತ್ತ್ವವನ್ನು - ‘ಎಲ್ಲ ಅರಿವೂ ನಿನ್ನಲ್ಲಿದೆ. ಅದನ್ನು ಅರಿತುಕೋ - ನಿನಗೆಲ್ಲವೂ ದೊರಕುವುದು.’ ಅಂತಹ ಜ್ಞಾನವನ್ನು ಅಂತಿಮವಾಗಿ ನೀನೇ ಕಂಡುಕೊಳ್ಳಬೇಕು. ಗುರು ದಾರಿ ತೋರಿಸುತ್ತಾನೆ; ನಡೆಯುವವನು ನೀನೇ. ಅಂತರಂಗದ ಅರಿವು ಪ್ರಕಾಶಗೊಂಡಾಗ ಶಿಷ್ಯನು ಅರಿತುಕೊಳ್ಳುತ್ತಾನೆ — ಈ ಅರಿವೇ ಗುರು ಎಂದು.

---

೨ ‘ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ’ — *ವಿವೇಕಚೂಡಾಮಣಿ, ೩.*

ಸೆಪ್ಟೆಂಬರ್ ತಿಂಗಳ ಕಾರ್ಯಕ್ರಮಗಳು

೨	ಭಾನುವಾರ	ಶ್ರೀಕೃಷ್ಣ ಜನ್ಮಾಷ್ಟಮಿ
೬	ಗುರುವಾರ	ಏಕಾದಶಿ
೮	ಶನಿವಾರ	ಸ್ವಾಮಿ ಅದ್ವೈತಾನಂದ ಜಯಂತಿ
೧೩	ಗುರುವಾರ	ಶ್ರೀ ವಿನಾಯಕ ಚತುರ್ಥಿ
೨೨	ಬುಧವಾರ	ಏಕಾದಶಿ

ಸಾಧನೆ ಮತ್ತು ಶ್ರಮ



❁ ಒಂದು ಸ್ವಲ್ಪ ಸಾಧನೆ ಮಾಡಲೇಬೇಕು. ಸಾಧನೆ ಮಾಡುತ್ತ ಮಾಡುತ್ತ ಮುಂದುವರಿದರೆ, ಕ್ರಮೇಣ ಆನಂದ ದೊರೆಯುತ್ತದೆ. ನೆಲದಲ್ಲಿ ಬಹಳ ಆಳದಲ್ಲಿ ಒಂದು ಗಡಿಗೆ ಹಣವನ್ನು ಹೂತಿಟ್ಟಿರುವುದಾದರೆ, ಅದು ಯಾರಿಗಾದರೂ ಬೇಕಾದರೆ, ಶ್ರಮವಹಿಸಿ ಅದನ್ನು ತೆಗೆಯಬೇಕು. ಅಗೆಯುವಾಗ ಬೆವರು ಸುರಿಯುತ್ತದೆ. ಬಹಳವಾಗಿ ಅಗೆದ ನಂತರ, ಯಾವಾಗ ಗುದ್ದಲಿಯ ಮೊನೆ ಆ ಗಡಿಗೆಗೆ ತಗುಲಿ ಹಣ 'ಧಣ ಧಣ' ಎಂದು ಶಬ್ದ ಮಾಡುವುದೊ ಆಗ ಒಡನೆಯೇ ಆನಂದ ಉಂಟಾಗುತ್ತದೆ. ಅದು ಎಷ್ಟೊಂದು ಹೆಚ್ಚಾಗಿ 'ಧಣ ಧಣ' ಎಂದು ಶಬ್ದ ಮಾಡುತ್ತದೆಯೊ ಅಷ್ಟೊಂದು ಹೆಚ್ಚಾಗಿ ಆನಂದ ಉಂಟಾಗುತ್ತದೆ.

❁ ಈ ಸಂಸಾರ ಒಂದು ಮುಳ್ಳುಗಿಡ. ಕೈ ಹಾಕಿತು ಅಂದರೆ ತರಚಿ ರಕ್ತ ಸುರಿಯಲಾರಂಭಿಸುತ್ತದೆ. ಒಂದು ಮುಳ್ಳುಗಿಡ ತೆಗೆದು ಕೊಂಡು ಬಂದು ಅದರ ಹತ್ತಿರ ಕುಳಿತುಕೊಂಡು ಜಪಿಸು: 'ಈ ಗಿಡ ಸುಟ್ಟುಹೋಯಿತು' ಎಂದು. ಅದಷ್ಟಕ್ಕೆ ಅದು ಸುಟ್ಟು ಹೋಗುತ್ತದೆಯೆ? ಜ್ಞಾನಾಗ್ನಿಯನ್ನು ಹೊತ್ತಿಸಿಕೊ. ಆ ಅಗ್ನಿಯಿಂದ ಅದನ್ನು ಸುಡು. ಆಗ ಮಾತ್ರವೇ ಅದು ಸುಟ್ಟು ಬೂದಿಯಾಗುತ್ತದೆ.

❁ ಸಾಧನೆಯ ಸಮಯದಲ್ಲಿ ಸ್ವಲ್ಪ ಹೆಚ್ಚು ಶ್ರಮ ತೆಗೆದುಕೊಳ್ಳಬೇಕು. ಆ ಬಳಿಕ ರಾಜರಸ್ತೆ. ನದಿ ಡೊಂಕಾಗಿ ಹರಿಯುವ ಜಾಗದಲ್ಲಿ ಸ್ವಲ್ಪ ಶ್ರಮ ತೆಗೆದುಕೊಂಡು ಮುಂದುವರಿದು, ಬಳಿಕ ಅನುಕೂಲವಾದ ಗಾಳಿ ದೊರೆತಾಗ ದೋಣಿಯನ್ನು ಸುಮ್ಮನೆ ತೇಲಿಬಿಡು.

❁ ಭಕ್ತ: ''ಮನೆಯ ಯಜಮಾನನೊಡನೆ ಪರಿಚಯ ಮಾಡಿಕೊಳ್ಳುವುದು ಹೇಗೆ ಎಂಬುದೇ ಪ್ರಶ್ನೆ.''

ಶ್ರೀರಾಮಕೃಷ್ಣರು: ''ಅದಕ್ಕಾಗೇ ಶ್ರಮಿಸಬೇಕು. ಭಗವಂತನಿದ್ದಾನೆ ಎಂದು ಸುಮ್ಮನೆ ಕೈಕಟ್ಟಿ ಕುಳಿತಿದ್ದರೆ ಆಗದು. ಹೇಗೋ ಆತನ ಹತ್ತಿರ ಹೋಗಬೇಕು. ಏಕಾಂತ ಸ್ಥಳದಲ್ಲಿ ಆತನನ್ನು ಕರೆ, ಆತನಿಗೆ ಪ್ರಾರ್ಥನೆಮಾಡು, 'ನನಗೆ ನಿನ್ನ ದರ್ಶನ ಕೊಡು' ಅಂತ ವ್ಯಾಕುಲನಾಗಿ ಅಳು. ಕಾಮ-ಕಾಂಚನಕ್ಕಾಗಿ ಹುಚ್ಚನ ಹಾಗೆ ಅಲೆಯಲು ಸಿದ್ಧನಾಗಿದ್ದೀಯೆ! ಈಗ ಭಗವಂತನಿಗಾಗಿ ಸ್ವಲ್ಪ ಹುಚ್ಚನಾಗು. ಜನ ಹೇಳಿಕೊಳ್ಳಲಿ, ಭಗವಂತನಿಗಾಗಿ ಆತ ಹುಚ್ಚನಾಗಿಬಿಟ್ಟ ಅಂತ. ಒಂದೆರಡು ದಿನಗಳ ಮಟ್ಟಿಗಾದರೂ ಎಲ್ಲವನ್ನೂ ತ್ಯಜಿಸಿ ಆತನನ್ನು ಏಕಾಂತದಲ್ಲಿ ಕರೆ.

❁ 'ಭಗವಂತನಿದ್ದಾನೆ' ಎಂದು ಕೇವಲ ಬಾಯಲ್ಲಿ ಹೇಳುತ್ತ ಕೈಕಟ್ಟಿ ಸುಮ್ಮನೆ ಕುಳಿತಿದ್ದರೆ ಏನಾಗುತ್ತದೆ? ಹಾಲದಾರಪುಕುರದಲ್ಲಿ ದೊಡ್ಡ ದೊಡ್ಡ ಮೀನುಗಳೇನೋ ಇವೆ. ಆದರೆ ಆ ಪುಷ್ಕರಣಿಯ ದಡದಲ್ಲಿ ಸುಮ್ಮನೆ ಕೈಕಟ್ಟಿ ಕುಳಿತಿದ್ದರೆ ಮೀನು ದೊರೆಯುವುದೆ? ಎರೆಯನ್ನು ತಯಾರುಮಾಡಿ ಅದನ್ನು ನೀರಿನಲ್ಲಿ ಬಿಸಾಡು. ಬಳಿಕ ಮೀನು ಆಳದ ನೀರಿನಲ್ಲಿ ಮೇಲಕ್ಕೆ ಬರುತ್ತದೆ, ನೀರು ಅಲುಗಲು ಆರಂಭಿಸುತ್ತದೆ. ಆಗ ನಿನಗೆ ಬಹಳ ಆನಂದವಾಗುತ್ತದೆ. ಬಹುಶಃ ಅವುಗಳಲ್ಲಿ ಒಂದು ಮೀನು ನೀರಿನ ಮೇಲಕ್ಕೆ ತಟಕ್ಕನೆ ಒಂದು ಸ್ವಲ್ಪ ಎದ್ದಾಗ ಅದರ ಆಕೃತಿ ನಿನಗೆ ಗೋಚರವಾಗಬಹುದು. ಆಗ ನಿನಗೆ ಆನಂದವಾಗುತ್ತದೆ.

❁ ಸಾಧನೆಮಾಡಿ ಆಧ್ಯಾತ್ಮಿಕ ಶಕ್ತಿಯನ್ನು ಸಂಪಾದಿಸಬೇಕು. ಹಾಗೆ ಮಾಡದೆ ಇದ್ದರೆ ಪ್ರಚಾರಕಾರ್ಯ ಸಾಧ್ಯವಿಲ್ಲ. 'ತನಗೇ ಮಲಗಲು ಸ್ಥಳವಿಲ್ಲ. ಶಂಕರನನ್ನು ಬೇರೆ ಕರೆಯುತ್ತಿದ್ದಾನೆ!' ಮಲಗಲು ತನಗೇ ಸ್ಥಳವಿಲ್ಲ. ಆದರೂ, 'ಓ! ಶಂಕರಾ ಬಾ; ನನ್ನೊಡನೆ ಮಲಗಿಕೋ' ಅಂತ ಕರೆಯೋದು ಬೇರೆ!

❁ ಮನಸ್ಸನ್ನೆಲ್ಲ ಏಕೀಕರಿಸಿ ಆತನ ಕಡೆಗೆ ತಿರುಗಿಸದಿದ್ದರೆ ಆತನ ದರ್ಶನ ಪಡೆಯಲಾಗುವುದೆ? ಭಾಗವತದಲ್ಲಿ ಶುಕದೇವನ ಸಂಬಂಧವಾಗಿ ಹೇಳಿದೆ – ಭರ್ಜಿ ಹಿಡಿದ ಸಿಪಾಯಿಯ ಹಾಗೆ; ದಾರಿಯಲ್ಲಿ ಹೋಗುತ್ತಿದ್ದಾನೆ, ಬೇರೆ ಯಾವ ಕಡೆಗೂ ದೃಷ್ಟಿಯಿಲ್ಲ. ಒಂದೇ ದೃಷ್ಟಿ, ಕೇವಲ ಭಗವಂತನ ಕಡೆಗೇ ದೃಷ್ಟಿ. ಯೋಗ ಎಂಬುದು ಇದೇನೇ.

❁ ಚಾತಕಪಕ್ಷಿ ಕೇವಲ ಮಳೆ ನೀರನ್ನು ಮಾತ್ರವೇ ಕುಡಿಯುತ್ತದೆ. ಗಂಗೆ, ಯಮುನೆ, ಗೋದಾವರಿ ಮತ್ತು ಉಳಿದ ನದಿಗಳಲ್ಲೆಲ್ಲಾ ನೀರು ತುಂಬಿದೆ. ಸಪ್ತಸಮುದ್ರಗಳೂ ತುಂಬಿ ತುಳುಕಾಡುತ್ತಿವೆ. ಆದರೂ ಅದು ಆ ನೀರನ್ನೆಲ್ಲ ಮುಟ್ಟದು. ಮಳೆ ಬೀಳಬೇಕು. ಅದು ಆ ನೀರನ್ನು ಕುಡಿಯಬೇಕು.

❁ ಭಗವಂತನ ಸಾಕ್ಷಾತ್ಕಾರ ದೊರೆಯಬೇಕಾದರೆ ತೀವ್ರ ವೈರಾಗ್ಯ ಅತ್ಯಂತ ಆವಶ್ಯಕ. ಯಾವುದು ಭಗವಂತನ ಸಾಕ್ಷಾತ್ಕಾರಕ್ಕೆ ತಡೆಯಾಗಿ ತೋರಿ ಬರುವುವೊ ಅವನ್ನೆಲ್ಲ ಒಡನೆಯೇ ತ್ಯಾಗಮಾಡಿಬಿಡಬೇಕು. ಮುಂದೆ ನೋಡೋಣ ಅಂತ ಸುಮ್ಮನೆ ಕೈಕಟ್ಟಿ ಕುಳಿತಿರಬಾರದು. ಕಾಮಕಾಂಚನವೇ ಭಗವಂತನ ಸಾಕ್ಷಾತ್ಕಾರಕ್ಕೆ ಅಡ್ಡಲಾಗಿ ಬಿದ್ದಿರುವ ತಡೆ. ಮನಸ್ಸನ್ನು ಅವುಗಳ ಕಡೆಯಿಂದ ಎಳೆದುಕೊಂಡು ಬಿಡಬೇಕು.

ಶ್ರೀರಾಮಕೃಷ್ಣ ವಚನವೇದದಿಂದ


ಸತ್ಸಂಗದಿಂದ ನಿಸ್ಸಂಗ

ಸ್ವಾಮಿ ನಿತ್ಯಸ್ಥಾನಂದ

ಆಧ್ಯಾತ್ಮಿಕ ಜೀವನಕ್ಕೆ ಸತ್ಸಂಗವೆಂಬುದು ಅತ್ಯಂತ ಮುಖ್ಯವೆಂಬುದರಲ್ಲಿ ಎರಡು ಮಾತಿಲ್ಲ. ಸತ್ಸಂಗವೆಂಬುದು ಹೇಗೆ ನಿಸ್ಸಂಗದತ್ತ ಸಾಧಕನ್ನು ಕರೆದೊಯ್ಯುವುದು ಎಂಬ ಅಂಶವನ್ನಿಲ್ಲಿ ಹಲವು ದೃಷ್ಟಿಕೋನಗಳಿಂದ ನಿರೂಪಿಸಲಾಗಿದೆ. ಲೇಖಕರು ಈ ಪತ್ರಿಕೆಯ ಮೊದಲ ಸಂಪಾದಕರಾಗಿದ್ದರು . ಪ್ರಸ್ತುತ ಅವರು ದಾವಣಗೆರೆ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.

‘**ಸತ್ಸಂಗತ್ವೇ ನಿಸ್ಸಂಗತ್ವಂ**’ ಎಂಬುದು ಶ್ರೀ ಶಂಕರಾಚಾರ್ಯರ ಪ್ರಸಿದ್ಧವಾದ ಹೇಳಿಕೆ. ಇದರ ಅರ್ಥ ಸತ್ಸಂಗದಿಂದ ನಿಸ್ಸಂಗವುಂಟಾಗುತ್ತದೆ ಎಂಬುದು. ಮನುಷ್ಯನು ಸಂಘಜೀವಿಯಾದುದರಿಂದ ಅವನು ಇತರರ ಸಂಗವನ್ನು ಬಯಸುವುದು ಸ್ವಾಭಾವಿಕ. ಆದರೆ ವ್ಯಕ್ತಿಯು ಯಾವ ಸಂಗವನ್ನೂ ಬಯಸದೆ ತಾನೇತಾನಾಗಿ, ಏಕಾಂಗಿಯಾಗಿ ಆತ್ಮನಿರ್ಭರನಾಗಿ ಇರುವ ಸ್ಥಿತಿಯನ್ನು ತಲುಪಬೇಕು. ಈ ಸ್ಥಿತಿಯೇ ನಿಃಸಂಗತ್ವದ ಸ್ಥಿತಿ. ಈ ಸ್ಥಿತಿಯನ್ನು ಸತ್ಸಂಗದ ಮೂಲಕ ತಲುಪಬೇಕು — ನದಿಯ ಮೂಲಕವೇ ನದಿಯಾಚೆಯನ್ನು ತಲುಪುವಂತೆ. ಕೇವಲ ಕರ್ಮತ್ಯಾಗದಿಂದ ನೈಷ್ಕರ್ಮ್ಯಸ್ಥಿತಿ ಉಂಟಾಗುವುದಿಲ್ಲ; ಅನಾಸಕ್ತಿ ಭಾವದಿಂದ ಕರ್ಮ ಮಾಡುತ್ತ ಹೋದರೆ ನೈಷ್ಕರ್ಮ್ಯಸ್ಥಿತಿ ಉಂಟಾಗುತ್ತದೆ, ಎಂಬುದು ಗೀತೆಯ ಅಭಿಪ್ರಾಯ. ಅದೇ ರೀತಿ ಕೇವಲ ಸಂಗತ್ಯಾಗದಿಂದ ನಿಸ್ಸಂಗತ್ವ ಉಂಟಾಗುವುದಿಲ್ಲ. ಕೇವಲ ನಿರ್ಜನ ಪ್ರದೇಶದಲ್ಲಿ ವಾಸಿಸುತ್ತಿದ್ದರೆ ನಿಸ್ಸಂಗವಾಗುವುದಿಲ್ಲ. ನಿರ್ಜನವಾಸಿಯು ಮನಸ್ಸಿನಲ್ಲಿಯೇ ಅನೇಕರ ಸಂಗವನ್ನು - ದುಸ್ಸಂಗವನ್ನು ಕೂಡ - ಮಾಡುತ್ತಿರಬಹುದು. ಆದರೆ ಜನರೊಡನೆ ವಾಸಿಸುವ ವ್ಯಕ್ತಿಯು ನಿಜವಾಗಿಯೂ ನಿಸ್ಸಂಗಿಯಾಗಿರಲು ಸಾಧ್ಯ — ಎಲ್ಲರೊಡನೆ ಬೆರೆತೂ ನಿಸ್ಸಂಗಿಯಾಗಿರಲು ಸಾಧ್ಯ. ಆದ್ದರಿಂದ ನಿಸ್ಸಂಗವೆಂದರೆ ಕೇವಲ ವಿಷಯಾಸಕ್ತಿ ಇಲ್ಲದಿರುವುದು ಎಂದಷ್ಟೇ ಅಲ್ಲ, ಭಾವನಾತ್ಮಕವಾಗಿಯೂ ಯಾರ ಸಂಗವನ್ನೂ ಬಯಸದೆ, ಅಂದರೆ ಯಾರ ಪ್ರೀತಿ, ಸಹಾನುಭೂತಿ, ಸಾಂತ್ವನ, ಮಾನ್ಯತೆ, ಪ್ರಶಂಸೆ ಇತ್ಯಾದಿಗಳನ್ನು ಬಯಸದೆ, ಯಾರ ಗಮನವನ್ನೂ ಸೆಳೆಯುವ ಪ್ರಯತ್ನವಿಲ್ಲದೆ ಇರುವ ಸ್ವತಂತ್ರ ಮನೋವೃತ್ತಿ. ಇದೇ ನಿಜವಾದ ನಿಸ್ಸಂಗ.

ಶ್ರೀರಾಮಕೃಷ್ಣರು ಸತ್ಸಂಗಕ್ಕೆ ಹೆಚ್ಚು ಮಹತ್ವವನ್ನು ನೀಡುತ್ತಿದ್ದರು. ಸತ್ಸಂಗವೆಂದರೇನು ಎಂಬುದನ್ನು ವಿಚಾರ ಮಾಡೋಣ. ಎಲ್ಲರೂ ಸಂಗವನ್ನು ಬಯಸುತ್ತಾರೆ. ಬ್ರಹ್ಮನಿಗೂ ಒಂಟಿಯಾಗಿರಲಾಗದೆ ಜಗತ್ತನ್ನು ಸೃಷ್ಟಿಸಿದನೆಂದು ಶಾಸ್ತ್ರ ಹೇಳುತ್ತದೆ. ಒಂದು ಹಡಗು ಅಪಘಾತಕ್ಕೆ ಒಳಗಾಗಿ ಮುಳುಗಿಹೋಯಿತು. ಅದರಲ್ಲಿದ್ದ ಮೂವರು ಸ್ನೇಹಿತರು ಈಜಿಕೊಂಡು ಹತ್ತಿರದ ಒಂದು ದ್ವೀಪವನ್ನು ಸೇರಿದರು. ಅದು ಸಂಪೂರ್ಣ ನಿರ್ಜನಪ್ರದೇಶ, ಯಾವುದೇ ಪ್ರಾಣಿಗಳ ಸುಳಿವೂ ಇರಲಿಲ್ಲ. ಆ ಮೂವರಲ್ಲಿ ಇಬ್ಬರಿಗೆ ತುಂಬ ತಳಮಳವುಂಟಾಯಿತು. ಇಂತಹ ನಿರ್ಜನಪ್ರದೇಶದಲ್ಲಿ ಹೇಗೆ ಕಾಲ ಕಳೆಯುವುದು ಎಂದು ಆತಂಕಕ್ಕೊಳಗಾದರು. ಆದರೆ ಮೂರನೆಯವನು ಏಕಾಂತಪ್ರಿಯ, ಈ ನಿರ್ಜನಪ್ರದೇಶವನ್ನು ನೋಡಿ ಸಂತೋಷದಿಂದ ಕುಣಿದಾಡಿದನು. ತಾನು ಇಲ್ಲೇ ಇದ್ದುಬಿಡುತ್ತೇನೆ ಎಂದು ಅವನು ಭಾವಿಸಿದನು. ಹೀಗೆ ಮೂವರು ಅಲ್ಲಿ ಓಡಾಡುತ್ತಿರುವಾಗ ದೂರದಲ್ಲಿ ಒಂದು ಬಾಟ್ಲಿ ಕಾಣಿಸಿತು. ಅದನ್ನು ನೋಡಿದಾಗ ಅದು ಜನವಸತಿಯ ಸೂಚಕವಿರಬಹು



ದೆನಿಸಿತು. ಆ ಬಾಟ್ಲಿಯನ್ನು ಕೈಗೆತ್ತಿಕೊಂಡು ಅದರ ಮುಚ್ಚಳವನ್ನು ತೆಗೆದರು. ಕೂಡಲೆ 'ಬುಸ್' ಎಂದು ಬಾಟ್ಲಿಯಿಂದ ಒಂದು ಅನಿಲ ಹೊರಹೊಮ್ಮಿತು.

ಅದು ಒಂದು ಭಯಂಕರ ಭೂತಾಕಾರವನ್ನು ಪಡೆಯಿತು. ಈ ಮೂವರು ಭಯಾಶ್ಚರ್ಯಗಳಿಂದ ನೋಡುತ್ತಿರಲು ಆ ಭೂತ ಹೇಳತೊಡಗಿತು: ''ಭಯಪಡಬೇಡಿ. ನನ್ನನ್ನು ಯಾರೋ ಈ ಬಾಟ್ಲಿಯಲ್ಲಿ ಬಂಧಿಸಿಟ್ಟಿದ್ದರು. ನೀವು ನನಗೆ ಬಿಡುಗಡೆಯನ್ನು ಕೊಟ್ಟಿರಿ. ನೀವು ಮಾಡಿದ ಉಪಕಾರಕ್ಕೆ ನಾನು ಪ್ರತ್ಯುಪಕಾರ ಮಾಡಬೇಕು(ನಾನು ಮನುಷ್ಯರಂತಲ್ಲದೆ ಇರುವುದರಿಂದ). ನಿಮಗೇನು ವರಬೇಕು ಕೇಳಿ.'' ಮೊದಲನೆಯವನು ಹೇಳಿದ: ''ನಾನು ಈ ದ್ವೀಪದಲ್ಲಿ ಇರಲಾರೆ. ಕೂಡಲೆ ನನ್ನನ್ನು ಮೈಸೂರಿಗೆ ಬಿಟ್ಟುಬಿಡು.'' ಭೂತ ಒಂದೇ ಕ್ಷಣದಲ್ಲಿ ಅವನನ್ನು ಮೈಸೂರಿಗೆ ಕರೆದುಕೊಂಡುಹೋಗಿ ಬಿಟ್ಟಿತು. ಎರಡನೆಯವನು ತಾನು ಬೆಂಗಳೂರಿನವನೆಂದು ಅಲ್ಲಿಗೆ ಹೊರಟುಹೋದನು. ತಾನು ಏಕಾಂತ ಪ್ರಿಯ, ಇಲ್ಲಿಯೇ ಇದ್ದುಬಿಡುತ್ತೇನೆ ಎಂದು ಕೊಚ್ಚಿಕೊಳ್ಳುತ್ತಿದ್ದ ಮೂರನೆಯವನಿಗೆ ತಾನೊಬ್ಬನೇ ಇಲ್ಲಿರುವುದು ಅಸಾಧ್ಯವೆಂದು ಈಗ ಅನಿಸತೊಡಗಿತು. ಅವನು ಭೂತವನ್ನು, ''ಆ ಇಬ್ಬರನ್ನೂ ಪುನಃ ಹಿಂತಿರುಗಿ ಕರೆದುಕೊಂಡು ಬಾ'' ಎಂದು ಕೇಳಿಕೊಂಡನು. ಸಂಪೂರ್ಣ ನಿರ್ಜನಪ್ರದೇಶದಲ್ಲಿರುವಾಗಲೇ ನಮಗೆ ತಿಳಿದು ಬರುತ್ತದೆ, ನಾವೆಷ್ಟು ಸಂಗವನ್ನು ಬಯಸುತ್ತೇವೆ ಎಂದು.

ನಾವು ಮೂರು ರೀತಿಯ ಸತ್ಸಂಗವನ್ನು ಗುರುತಿಸಬಹುದು – ಸತ್ಯವಸ್ತುವಿನ ಸಂಗ, ಸಜ್ಜನರ ಸಂಗ ಮತ್ತು ಸದ್ಭಾವನೆಗಳ ಸಂಗ.

೧) ಸದ್ವಸ್ತುವಿನ ಸಂಗ : ಸದ್ವಸ್ತು ಯಾವುದೆಂದರೆ ಭಗವಂತ. ಆದ್ದರಿಂದ ಭಗವತ್ಸಾನ್ನಿಧ್ಯದಲ್ಲಿರುವುದೇ ಸದ್ವಸ್ತುವಿನ ಸಂಗ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಸ್ವಾಮಿ ಯತೀಶ್ವರಾನಂದರ ವಾಣಿಯನ್ನು ಆಲಿಸೋಣ: ''ಆಧ್ಯಾತ್ಮಿಕ ಜೀವನದಲ್ಲಿ ಏನಾದರೂ ಸಾಧಿಸಬೇಕಿದ್ದರೆ, ಬೆಳಗ್ಗೆ ಮತ್ತು ಸಂಜೆ ಒಂದೆರಡು ಗಂಟೆ ಧ್ಯಾನ ಮಾಡಿದರೆ ಸಾಲದು. ಈ ಧ್ಯಾನ ಭಾವವನ್ನು ದಿನವಿಡೀ ಉಳಿಸಿಕೊಳ್ಳಬೇಕು. ಜೀವನದ ದೈನಂದಿನ ಕರ್ತವ್ಯಗಳನ್ನು ನಿರ್ವಹಿಸುವಾಗಲೂ ಆಧ್ಯಾತ್ಮಿಕ ಅಂತಃಸ್ರೋತ ಹರಿಯುತ್ತಿರಬೇಕು. ಅಶುದ್ಧ ಭಾವನೆ ಏಳುವುದನ್ನು ಅದು ತಡೆಯುತ್ತದೆ. ಅಲ್ಲದೆ ನಾವು ಧ್ಯಾನಕ್ಕೆ ಕುಳಿತಾಗ ಬೇಗ ಮನಸ್ಸು ಏಕಾಗ್ರಗೊಳ್ಳಲು ಸಹಾಯಕ ವಾಗುತ್ತದೆ. ನಿತ್ಯ ಧ್ಯಾನದೊಂದಿಗೆ ಭಗವತ್ಸನ್ನಿಧಿಯ ಚಿಂತನೆ ನಡೆಯುತ್ತಿರಬೇಕು. ಇದನ್ನೇ ಸರಿಯಾಗಿ ಮಾಡಿದರೆ ಅದೇ ಒಂದು ತೀವ್ರ ಆಧ್ಯಾತ್ಮಿಕ ಸಾಧನೆಯಾಗುತ್ತದೆ.'' *(ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ, ಪು. ೩೬೯)* ಅವರು ಮುಂದುವರಿದು ಹೇಳುತ್ತಾರೆ: ''ನಾವು ಭಗವಂತನನ್ನು ಯಾವಾಗಲೂ ಸ್ಮರಿಸುತ್ತಿರಬೇಕು. ಇದನ್ನು ಮಾಡುವ ಒಂದೇ ಒಂದು ವಿಧಾನವೆಂದರೆ ನಾವು ಮಾಡುವ, ಯೋಚಿಸುವ ಎಲ್ಲವನ್ನೂ ಭಗವಂತನಿಗೆ ಸಂಬಂಧಿಸುವುದು.'' *(ಅದೇ.)*

ಸ್ವಾಮಿ ಯತೀಶ್ವರಾನಂದರು ಹೇಳುವಂತೆ, ನಾವು ಎಷ್ಟು ಆಧ್ಯಾತ್ಮಿಕರು ಎಂಬುದನ್ನು ನಿರ್ಣಯಿಸಲು ದಿನದ ವೇಳೆ ಎಷ್ಟು ಬಾರಿ ಭಗವದ್ವಿಷಯ ಮನಸ್ಸಿಗೆ ಬರುತ್ತದೆ, ಮತ್ತು ಅದು ಯಾವ ರೀತಿಯದಾಗಿರುತ್ತದೆ ಎಂಬುದನ್ನು ನೋಡಬೇಕು. ದಿನದಲ್ಲಿ ಒಂದೆರಡು ಬಾರಿ ಧ್ಯಾನಕ್ಕೆ ಕುಳಿತುಕೊಂಡರೆ ಸಾಲದು, ಕೆಲಸದ ವೇಳೆಯಲ್ಲಿಯೂ ಭಗವದ್ಭಾವನೆ ಪುಟಿಯುತ್ತಿರಬೇಕು, ಇದೇ ನಿಜವಾದ ಆಧ್ಯಾತ್ಮಿಕ ಜೀವನ ಎಂದು ಅವರು ಹೇಳುತ್ತಾರೆ.

ರಮಣ ಮಹರ್ಷಿಗಳ ಜೀವನಕ್ಕೆ ಸಂಬಂಧಿಸಿದ ಕಥೆ ತುಂಬ ಸ್ವಾರಸ್ಯಕರವಾಗಿದೆ. ಒಬ್ಬ ಯುವಕನು ಒಂದು ಧ್ಯಾನ ಮಾಡುವುದು ಹೇಗೆ ಎಂದು ರಮಣಮಹರ್ಷಿಗಳನ್ನು ಕೇಳಿದನು. ಅದೇ ಸಂದರ್ಭದಲ್ಲಿಯೇ ಒಬ್ಬ ಭಕ್ತನು ಅನೇಕ ಮಸಾಲೆ ದೋಸೆಗಳನ್ನು ತಂದು ಅವರಿಗೆ ಅರ್ಪಿಸಿದನು. ಅವರು ಅವನ್ನು ನೆರೆದಿರುವ ಭಕ್ತರಿಗೆ ಹಂಚಬೇಕೆಂದು ತಿಳಿಸಿದರು. ಆ ಯುವಕನಿಗೂ ಒಂದು ದೋಸೆಯನ್ನು ಕೊಡಲಾಯಿತು. ಅವನು ಅದನ್ನು ತಿನ್ನುವುದಕ್ಕೆ ರಮಣರು ಒಂದು ಶರತ್ತನ್ನು ಒಡ್ಡಿದರು. ಅದೇನೆಂದರೆ, ಅವನು ದೋಸೆಯನ್ನು ತಿನ್ನುತ್ತಿರಬೇಕು, ಮತ್ತು ಅವರು 'ಹೂಂ' ಎಂದಾಕ್ಷಣ ಅವನು ತಿನ್ನುವುದನ್ನು ನಿಲ್ಲಿಸಿಬಿಡಬೇಕು. ಆದರೆ ಅಷ್ಟು ಹೊತ್ತಿಗೆ ದೋಸೆ ತಿನ್ನುವುದು ಮುಗಿದಿರಬೇಕು. ಅವನು ಒಪ್ಪಿ ದೋಸೆ ತಿನ್ನಲು ಪ್ರಾರಂಭಿಸಿದ. ಅವರು 'ಹೂಂ' ಎಂದಾಕ್ಷಣ ಕೊನೆಯ ಒಂದು ಚೂರು ದೋಸೆಯನ್ನು ಬಾಯಿಗೆ ಹಾಕಿ ಮುಗಿಸಿಬಿಟ್ಟ. ರಮಣ ಮಹರ್ಷಿಗಳು ಭೇಷ್ ಎಂದು ಪ್ರಶಂಸಿಸಿ ಕೇಳಿದರು, ''ದೋಸೆ ಹೇಗಿತ್ತು?'' ಎಂದು. ಅವನು ಹೇಳಿದ: ''ನನ್ನ ಗಮನವೆಲ್ಲ ನಿಮ್ಮ ತುಟಿಯ ಕಡೆಗೇ ಇತ್ತು. ಯಾವಾಗ 'ಹೂಂ' ಎನ್ನಲು ನಿಮ್ಮ ತುಟಿಯಲ್ಲಿ ಚಲನೆಯುಂಟಾಗುವುದೊ ಅದರ ಕಡೆಗೇ ಗಮನ. ದೋಸೆಯ ಕಡೆಗಾಗಲಿ, ಅದರ ರುಚಿಯ ಕಡೆಗಾಗಲಿ ಗಮನವೇ ಇರಲಿಲ್ಲ.'' ಆಗ ರಮಣರು ಮುಗುಳ್ನಗುತ್ತ ಹೇಳಿದರು: ''ಧ್ಯಾನವೆಂದರೆ ಇದೇಯಪ್ಪ. ಎಲ್ಲ ಕೆಲಸಗಳನ್ನು ಮಾಡುತ್ತಿರು. ಆದರೆ ನಿನ್ನ ಗಮನವೆಲ್ಲ ಭಗವಂತನ ಕಡೆಗಿರಲಿ.''

ಸಜ್ಜನರ ಸಂಗ: ಶ್ರೀರಾಮಕೃಷ್ಣರು ಹೇಳುವಂತೆ ಸಾಧುಸಂಗದಿಂದ ಭಗವದ್ವ್ಯಾಕುಲತೆ ಮತ್ತು ವೈರಾಗ್ಯಗಳು ಉಂಟಾಗುತ್ತವೆ. ''ಹಾಗಾದರೆ ದಾರಿಯೇನು?'' ಎಂಬ ಪ್ರಶ್ನೆಗೆ ಅವರು ಉತ್ತರಿಸುತ್ತಾರೆ: ''ಪ್ರಾರ್ಥನೆ ಮತ್ತು ಸಾಧುಸಂಗ. ನಿಮಗೆ ಖಾಯಿಲೆಯಾದರೆ ವೈದ್ಯನ ಸಹಾಯ ಬೇಕೇಬೇಕು. ಯಾವಾಗಲೋ ಒಂದು ದಿನ ಸಾಧುಸಂಗ ಮಾಡಿದರೆ ಸಾಲದು. ನೀವು ಯಾವಾಗಲೂ ಅದನ್ನು ಅರಸಬೇಕು. ಏಕೆಂದರೆ ರೋಗ ದೀರ್ಘಕಾಲದಿಂದ ಇದೆ. ಮತ್ತೆ ವೈದ್ಯನೊಡನೆ ನೀವು ವಾಸಿಸದಿದ್ದರೆ ನಾಡಿ ನೋಡುವುದು ಹೇಗೆಂಬುದು ತಿಳಿಯುವುದಿಲ್ಲ. ಅವನೊಡನೆ ಬಹಳ ಕಾಲ ಓಡಾಡುತ್ತಿದ್ದರೆ ಆಗ ತಿಳಿಯುತ್ತದೆ, ಯಾವುದು ಕಫದ ನಾಡಿ, ಯಾವುದು ಪಿತ್ತದ ನಾಡಿ ಎಂದು.'' ಭಕ್ತನು, ''ಸಾಧುಸಂಗದಿಂದ ಏನು ಲಾಭ?'' ಎಂದು ಕೇಳಿದಾಗ ಶ್ರೀರಾಮ

ಕೃಷ್ಣರು ಹೇಳುತ್ತಾರೆ: ''ಅದು ಭಗವದ್ ವ್ಯಾಕುಲತೆಯನ್ನು ಉಂಟುಮಾಡುವುದು. ಅದು ಭಗವತ್ ಪ್ರೇಮವನ್ನು ಹುಟ್ಟಿಸುವುದು. ವ್ಯಾಕುಲತೆ ಇಲ್ಲದೆ ಆಧ್ಯಾತ್ಮಿಕ ಜೀವನದಲ್ಲಿ ಏನನ್ನೂ ಸಾಧಿಸಲಾಗುವುದಿಲ್ಲ. ನಿರಂತರವಾಗಿ ಸಾಧುಸಂಗದಲ್ಲಿರುವುದರಿಂದ ಜೀವ ಭಗವಂತನಿಗಾಗಿ ತವಕಿಸುವುದು... ಸಾಧುಸಂಗದಿಂದ ಇನ್ನೊಂದು ಪ್ರಯೋಜನವಿದೆ. ಸತ್ಯಾಸತ್ಯ ವಿವೇಚನೆಯನ್ನು ಬೆಳೆಸಿಕೊಳ್ಳಲು ಅದು ಸಹಾಯಕವಾಗುವುದು. ದೇವರು ಮಾತ್ರ ಸತ್ಯ ; ಅವನೇ ಶಾಶ್ವತ ವಸ್ತು ಮತ್ತು ಪ್ರಪಂಚ ಅವಸ್ತು, ಕ್ಷಣಿಕ.'' *('ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ'ದಲ್ಲಿ ಉದ್ಧೃತ, ಪು. ೧೨೧)* ಸಹ ಪ್ರಯಾಣಿಕರು ಪರಸ್ಪರ ಸಹಕರಿಸುವಂತೆ ಸತ್ಪುರುಷರೊಡನೆ ಬೆರೆಯುವುದರಿಂದ, ಮಾತನಾಡುವುದರಿಂದ ಆಧ್ಯಾತ್ಮಿಕ ಜೀವನಕ್ಕೆ ಹೆಚ್ಚು ಪ್ರೇರಣೆ ದೊರೆಯುತ್ತದೆ. ದಿನನಿತ್ಯ ವ್ಯಾವಹಾರಿಕ ಜೀವನದಲ್ಲಿ ತೊಡಗಿರುವುದರಿಂದ ಮನಸ್ಸು ಆಧ್ಯಾತ್ಮಿಕ ಆದರ್ಶದಿಂದ ದೂರವಾಗುವ ಸಂದರ್ಭವಿರುತ್ತದೆ. ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿರುವ ಸಜ್ಜನರ ಸಂಗದಿಂದ ಮನಸ್ಸು ಭಗವನ್ಮುಖವಾಗುತ್ತದೆ. ನಿಜವಾದ ಆಧ್ಯಾತ್ಮಿಕ ಸಾಧಕರ ಒಂದು ಮುಖ್ಯ ಲಕ್ಷಣವೇನೆಂದರೆ ಅವರು ಯಾವಾಗಲೂ ಸಜ್ಜನರ ಸಂಗವನ್ನು ಬಯಸುತ್ತಾರೆ. ನಾವು ಎಂಥವರ ಸಹವಾಸವನ್ನು ಬಯಸುತ್ತೇವೆ ಎಂಬುದನ್ನಾಧರಿಸಿ ನಾವೆಂಥವರು ಎಂಬುದನ್ನು ನಿರ್ಧರಿಸಬಹುದು.

ಕೆಲವು ಸಂದರ್ಭಗಳಲ್ಲಿ ಕಾರ್ಯನಿಮಿತ್ತವಾಗಿ ಪ್ರಾಪಂಚಿಕ ವ್ಯಕ್ತಿಗಳೊಡನೆ ಬೆರೆಯಬೇಕಾಗಬಹುದು. ನಾವು ಎಚ್ಚರಿಕೆಯಿಂದಿರದಿದ್ದರೆ ಕ್ರಮೇಣ ಅವರೊಡನೆ ನಿಕಟ ಸಂಬಂಧವುಂಟಾಗಿ ನಮಗೇ ತಿಳಿಯದಂತೆ ಕ್ರಮೇಣ ಅವರ ಸ್ವಭಾವ ನಮ್ಮನ್ನೂ ಪ್ರವೇಶಿಸಿ ಬಿಡುತ್ತದೆ. ಆದ್ದರಿಂದಲೇ ''**ದುಃಸಂಗಃ ಸರ್ವಥೈವ ತ್ಯಾಜ್ಯಃ**'' ಎಂದು ಹೇಳಿರುವುದು. ದುಷ್ಟರನ್ನು ನಿರಂತರವಾಗಿ ಖಂಡಿಸುವುದರ ಮೂಲಕವೂ ದುಃಸಂಗವನ್ನು ಮಾಡಿದಂತಾಗುತ್ತದೆ. ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ: ''ಸಾಧಕನು ಯಾರೆಂದವ ರೊಡನೆ ಬೆರೆಯಬಾರದು ನಿಜ, ಆದರೆ ಯಾರನ್ನೂ ಖಂಡಿಸುವುದು ಸರಿಯಲ್ಲ. ಅಶುದ್ಧರನ್ನು ಖಂಡಿಸುತ್ತ ತನ್ನ ದೊಡ್ಡಸ್ತಿಕೆಯನ್ನು ತೋರಿಸಿಕೊಳ್ಳಬೇಕಾಗಿಲ್ಲ. 'ನಾನು ನಿಮಗಿಂತ ಪವಿತ್ರ' ಎಂಬ ಭಾವನೆ ತೀರ ಕೆಟ್ಟದ್ದು. ಇದರಿಂದ ಒಂದು ರೀತಿಯ ಮೊಂಡು ಧೈರ್ಯ ಬಂದು ಅಜಾಗರೂಕರಾಗುತ್ತೇವೆ... ನಾವು ಕೆಟ್ಟವರ ಸಂಗದಲ್ಲಿ ಇರಬೇಕಾದ ಪರಿಸ್ಥಿತಿ ಬಂದಾಗ ಏನು ಮಾಡುವುದು? ತಿರಸ್ಕಾರವನ್ನೂ ತೋರಿಸಬೇಡಿ ಅಥವಾ ಉದಾಸೀನರೂ ಆಗಬೇಡಿ. ತುಂಬ ಎಚ್ಚರಿಕೆಯಿಂದಿದ್ದು ಬಲವಾದ ಮಾನಸಿಕ ತಡೆಯನ್ನು ನಿರ್ಮಿಸಿ. ಆಂತರಿಕ ಕವಚದ ಮೂಲಕ ನಿಮ್ಮನ್ನು ರಕ್ಷಿಸಿಕೊಳ್ಳಿ. ಬಿಚ್ಚು ಮನಸ್ಸಿನಿಂದ ಆತ್ಮವಿಶ್ಲೇಷಣೆ ಮಾಡಿ. ಕೆಟ್ಟ ಸಂಸ್ಕಾರ ಬಲವಾಗಿ ಬೇರುಬಿಡುವುದಕ್ಕೆ ಮುಂಚೆ ಅದನ್ನು ದೂರವಿರಿಸಿ. ನೈಜ ಆಧಾತ್ಮಿಕ ಸಾಧಕನು ಯಾವಾಗಲೂ ವಿಚಾರ ಮಾಡುತ್ತಾನೆ. ಅದೊಂದು ಅಭ್ಯಾಸವಾಗುತ್ತದೆ ಅವನಿಗೆ. ನೀವು ಯಾವಾಗಲೂ ದೇವರೆಡೆಗೆ ಓಡುವ ಭಾವದಲ್ಲಿ ಇರಬೇಕು. ಕಾಂಗರೂ ಮರಿಯಂತಿರಿ. ಅದಕ್ಕೆ ಸ್ವಲ್ಪ ಅಪಾಯ ಸುಳಿದರೆ ಸಾಕು ಕೂಡಲೇ ತಾಯಿಯ ಮಡಿಲಿಗೆ ನೆಗೆಯುತ್ತದೆ. ಹಾಗೆಯೇ ನಾವು ಅಪಾಯ ಕಂಡಕೂಡಲೇ ದೇವರನ್ನು ಆಶ್ರಯಿಸಬೇಕು.'' *(ಅದೇ, ಪು. ೧೨೫)*

''ಸ್ವರ್ಗದಲ್ಲಿ ಮೂರ್ಖರೊಡನೆ ಇರುವುದಕ್ಕಿಂತ ಕಾಡುಮೇಡುಗಳಲ್ಲಿ ಪ್ರಾಣಿಗಳೊಡನೆ ಇರುವುದು ಲೇಸು'' ಎಂದು ಒಂದು ಸಂಸ್ಕೃತ ಶ್ಲೋಕ ಹೇಳುತ್ತದೆ. ಒಬ್ಬ ಯುವ ಸಾಹಸಿ ಇದ್ದ. ಅವನು ಒಂದು ದಿನ ಕಾಡಿನಲ್ಲಿ ಹೋಗುತ್ತಿರುವಾಗ ಅವನ ಸಾಹಸವನ್ನು ಮೆರೆಯುವುದಕ್ಕೆ ಒಂದು ಅವಕಾಶ ದೊರೆಯಿತು. ಒಂದು ಕರಡಿ ಹೆಬ್ಬಾವಿನ ಬಾಯಿಗೆ ಸಿಕ್ಕಿಹಾಕಿಕೊಂಡಿದ್ದು ಹೊರಬರಲು ಹೆಣಗಾಡುತ್ತಿತ್ತು. ಈ ಸಾಹಸಪ್ರಿಯನು ಕೂಡಲೇ ಕಾರ್ಯೋನ್ಮುಖನಾದ. ತನ್ನ ಎಲ್ಲಾ ಶಕ್ತಿಯನ್ನೂ ಉಪಯೋಗಿಸಿ ಕರಡಿಯನ್ನು ಎಳೆದು ಹೆಬ್ಬಾವಿನ ಮೃತ್ಯುಮುಖದಿಂದ ತಪ್ಪಿಸಿದ. ಈಗ ಕರಡಿಗೆ ಇವನ ಮೇಲೆ ಅಪಾರ ಕೃತಜ್ಞತೆಯುಂಟಾಗಿ ಇವನನ್ನೇ ಹಿಂಬಾಲಿಸತೊಡಗಿತು. ಅವನ ದಾಸಾನುದಾಸನಂತೆ ಅವನ ಸೇವಾತತ್ಪರವಾಯಿತು. ಅವನೂ ಅದರ ನಿಷ್ಠೆಯನ್ನು ಕಂಡು ಅದನ್ನು ತನ್ನ ಸಂಗಾತಿಯನ್ನಾಗಿ ಮಾಡಿಕೊಂಡ. ಅದನ್ನು ಪ್ರೀತಿಯಿಂದ ಜಾಂಬವಂತ ಎಂದು ಕರೆಯುತ್ತಿದ್ದ. ಹಿರಿಯರೊಬ್ಬರು ಈ ಯುವಕನು ಕರಡಿಯ ಸಹವಾಸದಲ್ಲಿರುವುದನ್ನು ಕಂಡು ಅವನಿಗೆ ಎಚ್ಚರಿಕೆ ನೀಡಿದರು: ''ನೋಡಪ್ಪ, ಈ ರೀತಿ ಪ್ರಾಣಿಗಳ ಸಹವಾಸ ಒಳ್ಳೆಯದಲ್ಲ. ಅವಕ್ಕೆ ಎಷ್ಟಾದರೂ ತಿಳಿವಳಿಕೆ ಇರುವುದಿಲ್ಲ. ಯಾವ ಸಂದರ್ಭದಲ್ಲಿ ಏನಾಗಬಹುದೆಂದು ಹೇಳಲಾಗುವುದಿಲ್ಲ. ಅದರಿಂದ ದೂರವಿರು.'' ಯುವಕನಿಗೆ ಹಿರಿಯರ ಈ ಕಿವಿಮಾತು ಕಿವಿಯೊಳಗೆ ಹೋಗಲೇ ಇಲ್ಲ. ಒಂದು ದಿನ ಮಧ್ಯಾಹ್ನ ಊಟದ ನಂತರ ದಣಿದು ನಿದ್ರಿಸುತ್ತಿದ್ದ. ಕರಡಿ ಅವನನ್ನು ಕಾಯುತ್ತ ಕುಳಿತಿತ್ತು. ಕೆಲವು ನೊಣ ಅವನ ಮೈಮೇಲೆ ಅಡ್ಡಾಡತೊಡಗಿದವು. ಕರಡಿ ಅವನ್ನು ಎಷ್ಟೇ ಓಡಿಸಿದರೂ ಮತ್ತೆ ಅವು ಅವನ ಮೈರುಚಿಯನ್ನು ಸವಿಯಲು ಬರುತ್ತಿದ್ದವು. ಈಗ ಕರಡಿಗೆ ತಾಳ್ಮೆ ಮೀರಿತು. ಈ ನೊಣಗಳನ್ನು ಮೃತ್ಯುವಿಗೆ ಬಲಿಕೊಡಬೇಕು ಎಂದು ನಿರ್ಧರಿಸಿ ಒಂದು ದೊಡ್ಡ ಕಲ್ಲನ್ನು ತಂದು ಅವನ ಮೇಲೆ ಕುಳಿತಿದ್ದ ನೊಣಗಳ ಮೇಲೆ ಜೋರಾಗಿ ಅಪ್ಪಳಿಸಿತು. ನೊಣಗಳೇನೊ ತಪ್ಪಿಸಿಕೊಂಡವು, ಮೃತ್ಯುವಿಗೆ ಬಲಿಯಾದವನು ಯುವಕ. *(ಜಲಾಲುದ್ದೀನ್ ರೂಮಿ ಹೇಳಿದ ಕಥೆ)*

ಸದ್ಭಾವನೆಗಳ ಸಂಗ: ಇದು ತುಂಬ ಮುಖ್ಯವಾದದು. ನಮ್ಮ ಅಂತರಂಗದಲ್ಲಿ ಸದ್ಭಾವನೆಗಳನ್ನು ಭಾವಿಸುತ್ತಿರುವುದು ಅತಿ ಮುಖ್ಯವಾದ ಸತ್ಸಂಗ. ನಿಜವಾಗಿಯೂ ನಮ್ಮ ಅಂತರಂಗದ ಸಂಗವೇ ಬಹಿರಂಗದ ಸಂಗವನ್ನು ನಿರ್ಧರಿಸುವುದು. ಸಜ್ಜನರ ಸದ್ಗುಣಗಳನ್ನು ಮೆಲುಕು ಹಾಕುವುದರ ಮೂಲಕ ಸತ್ಸಂಗವನ್ನೇ

ಮಾಡಿದಂತಾಗುತ್ತದೆ. ಹಾಗೆಯೇ ದುರ್ಜನರ ದುರ್ಗುಣಗಳನ್ನು ಚಿಂತಿಸುವುದರ ಮತ್ತು ಇತರರೊಡನೆ ಚರ್ಚಿಸುವುದರ ಮೂಲಕವೂ ದುಃಸಂಗವನ್ನೇ ಮಾಡಿದಂತಾಗುತ್ತದೆ. ಈ ದೃಷ್ಟಿಯಿಂದಲೇ ಶ್ರೀಮಾತೆ ಶಾರದಾದೇವಿಯವರು ಇತರರ ದೋಷವನ್ನು ನೋಡಬಾರದೆಂದು ಉಪದೇಶಿಸಿರುವುದು. ಸಜ್ಜನರಲ್ಲಿಯೂ ಕೆದಕಿ ಕೆದಕಿ ದುರ್ಗುಣಗಳನ್ನು ಕಂಡುಹಿಡಿಯುವ ಅಪೂರ್ವ ಸಾಮರ್ಥ್ಯವುಳ್ಳ ಕೆಲವರು ಇರುತ್ತಾರೆ. ಅವರು ಆಧ್ಯಾತ್ಮಿಕ ಸಾಧಕರಾಗಿದ್ದರೂ ಈ ಸ್ವಭಾವವೇ ಅವರ ಆಧ್ಯಾತ್ಮಿಕ ಪ್ರಗತಿಗೆ ತಡೆಯಾಗುತ್ತದೆ. ಇನ್ನು ಕೆಲವು ಒಳ್ಳೆಯ ವ್ಯಕ್ತಿಗಳು ದುಷ್ಟರನ್ನು ದೂಷಿಸುತ್ತ ತಮ್ಮ ನೆಮ್ಮದಿಯನ್ನು ಕಳೆದುಕೊಳ್ಳುತ್ತಾರೆ. ಆದರೆ ದುಷ್ಟರು ತಮ್ಮ ದುಷ್ಟತನವನ್ನೇ ಮೆರೆಯುತ್ತ ಬಹುಶಃ ನೆಮ್ಮದಿಯಿಂದಿರುತ್ತಾರೆ.

ನಾವು ನಿಷೇಧಾತ್ಮಕ ಭಾವನೆಗಳನ್ನು ತೀವ್ರವಾಗಿ ಚಿಂತಿಸಿದರೆ ಅವು ನಮ್ಮ ಸುತ್ತ ನಿಷೇಧಾತ್ಮಕ ಸ್ಪಂದನಗಳನ್ನು ಸೃಷ್ಟಿಸುತ್ತವೆ. ಅನೇಕರ ದುಶ್ಚಿಂತನೆಗಳಿಂದ ಹೊರಗಿನ ವಾತಾವರಣದಲ್ಲಿಯೂ ನಿಷೇಧಾತ್ಮಕ ಸ್ಪಂದನಗಳೇ ಅಧಿಕವಾಗಿ ಕೆಲವು ದುಷ್ಟವ್ಯಕ್ತಿಗಳಿಗೆ ದುಷ್ಕೃತ್ಯವೆಸಗಲು ಪ್ರೇರಣೆ ನೀಡುತ್ತವೆ. ಇದರಿಂದಾಗಿಯೇ ಹಿಂಸಾಚಾರ, ಅತ್ಯಾಚಾರ, ದೌರ್ಜನ್ಯಗಳು ಸಮಾಜದಲ್ಲಿ ಜರಗುತ್ತವೆ. ಇದೇ ಸಚ್ಚಿಂತನೆಗಳಿಗೂ ಅನ್ವಯಿಸುತ್ತದೆ. ಸಚ್ಚಿಂತನೆಗಳ ಮೂಲಕ ಸಮಾಜದಲ್ಲಿ ಸತ್‌ಸ್ಪಂದನಗಳನ್ನು ಅಧಿಕಗೊಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ. ದೂರದಲ್ಲೆಲ್ಲೋ ಒಂದು ಅತ್ಯಂತ ಅಹಿತಕರ ಘಟನೆ ಸಂಭವಿಸಿದರೆ ನಾವು ಅದಕ್ಕೆ ಜವಾಬ್ದಾರರಲ್ಲ ಎಂದು ಭಾವಿಸಬಾರದು, ಪರೋಕ್ಷವಾಗಿ ನಮ್ಮ ಜವಾಬ್ದಾರಿಯ ಪಾಲೂ ಅದರಲ್ಲಿರುತ್ತದೆ ಎಂದು ಲೇಖಕರೊಬ್ಬರು ಅಭಿಪ್ರಾಯಪಡುತ್ತಾರೆ. ಏಕೆಂದರೆ ವಿಶ್ವಸ್ಪಂದನದ ತೀವ್ರತೆಯನ್ನು (global vibrational frequency) ಅದು ಒಳಿತಾಗಿರಲಿ ಕೆಡುಕಾಗಿರಲಿ — ಅದನ್ನು ಅಧಿಕಗೊಳಿಸುವ ಅಥವಾ ಕಡಿಮೆಗೊಳಿಸುವ ಪ್ರಕ್ರಿಯೆ ವ್ಯಕ್ತಿ-ವ್ಯಕ್ತಿಗಳ ಸ್ಪಂದನಗಳಿಂದ ಉಂಟಾಗುತ್ತದೆ. ವಿಶ್ವಸ್ಪಂದನವು ವ್ಯಕ್ತಿಸ್ಪಂದನಗಳ ಮೊತ್ತ. ಹಾಗಾಗಿ ಸಮಾಜದಲ್ಲಿ ನಡೆಯುವ ಒಳಿತು ಕೆಡಕುಗಳೆರಡಕ್ಕೂ ಪ್ರತಿಯೊಬ್ಬ ವ್ಯಕ್ತಿಯೂ ಜವಾಬ್ದಾರಿ — ಎಂದು ಅವರು ಅಭಿಪ್ರಾಯಪಡುತ್ತಾರೆ.

ಸ್ವಾಮಿ ವಿವೇಕಾನಂದರ ಪ್ರಕಾರ, ನಾವು ಒಳ್ಳೆಯ ಅಥವಾ ಕೆಟ್ಟ ಆಲೋಚನೆಗಳನ್ನು ಮಾಡಿದರೆ ಅವುಗಳ ತೀವ್ರತೆಗನುಗುಣವಾಗಿ ಹೊರಗಿನ ಒಳ್ಳೆಯ ಅಥವಾ ಕೆಟ್ಟ ಸ್ಪಂದನಗಳನ್ನು ಒಳಗೆ ಸೆಳೆದುಕೊಳ್ಳುತ್ತೇವೆ. ಇದರಿಂದಾಗಿ ನಾವು ಹೆಚ್ಚು ಒಳ್ಳೆಯವರೊ ಕೆಟ್ಟವರೊ ಆಗುತ್ತೇವೆ. ಆದ್ದರಿಂದ ನಾವು ಎಂತಹ ಆಲೋಚನೆಗಳನ್ನು ಪೋಷಿಸುತ್ತೇವೆ ಎಂಬುದರ ಬಗ್ಗೆ ಎಚ್ಚರಿಕೆಯಿಂದಿರಬೇಕು ಎಂದು ಅವರು ಎಚ್ಚರಿಕೆ ನೀಡುತ್ತಾರೆ. ಆದ್ದರಿಂದ ಸತ್ಸಂಗ ಬಹುಮುಖ್ಯವಾದುದು. ಈ ಆಂತರಿಕ ಸತ್ಸಂಗಕ್ಕೆ ಪ್ರೇರಕವೂ ಪೋಷಕವೂ ಆದುದು ಬಾಹ್ಯ ಸತ್ಸಂಗ.

ಶ್ರೀರಾಮಕೃಷ್ಣ ಶಾರದಾಶ್ರಮ

ಪೊನ್ನಂಪೇಟೆ –571 216, ಕೊಡಗು ಜಿಲ್ಲೆ. ಫೋನ್: 08274–298244, 249555

srksevaponnampet@gmail.com Web: www.rkmponnampet.org

ಆಧ್ಯಾತ್ಮಿಕ ಶಿಬಿರ

21–10–2018 ರಿಂದ 23–10–2018

ಪೊನ್ನಂಪೇಟೆಯಲ್ಲಿ ನಿರ್ಮಾಣವಾಗಿರುವ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರದ **9ನೇ** ವಾರ್ಷಿಕೋತ್ಸವದ ಪ್ರಯುಕ್ತ, **2018 ಅಕ್ಟೋಬರ್ 21 ರಿಂದ 23 ರವರೆಗೆ,** ಆಶ್ರಮದಲ್ಲಿ 3 ದಿನಗಳ ಆಧ್ಯಾತ್ಮಿಕ ಶಿಬಿರವನ್ನು ಆಯೋಜಿಸಲಾಗಿದೆ. ರಾಮಕೃಷ್ಣ ಮಠದ ಹಿರಿಯ ಯತಿಗಳಾದ ಸ್ವಾಮಿ ಜಗದಾತ್ಮಾನಂದಜಿ, ರಾಘವೇಶಾನಂದಜಿ, ನಿತ್ಯಸ್ಥಾನಂದಜಿ, ಆತ್ಮಜ್ಞಾನಂದಜಿ ಮತ್ತಿತರರು ಈ ಶಿಬಿರದಲ್ಲಿ ಭಕ್ತರಿಗೆ ಮಾರ್ಗದರ್ಶನ ನೀಡಲಿದ್ದಾರೆ. ಶಿಬಿರದಲ್ಲಿ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳೂ ಆಯೋಜಿತವಾಗಿವೆ.

ನೋಂದಣಿ ಶುಲ್ಕ : *ವಸತಿ ರಹಿತ :* **ರೂ. 800/–** *ವಸತಿ ಸಹಿತ :* **ರೂ. 1500/–**

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 15.10.2018

(ಅರ್ಜಿಯಲ್ಲಿ ಹೆಸರು, ವಯಸ್ಸು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನು ನೀಡಬೇಕು. ನಿಗದಿತ ಅರ್ಜಿಗಾಗಿ ಆಶ್ರಮದ ವೆಬ್‌ಸೈಟ್ ನೋಡಿ.)

ವಿ.ಸೂ: ಎಲ್ಲ ಕಾರ್ಯಕ್ರಮಗಳೂ ಆಶ್ರಮದಲ್ಲೇ ನಡೆಯುತ್ತವೆ. ಗೋಣಿಕೊಪ್ಪಲು ಕೂರ್ಗ್ ಪಬ್ಲಿಕ್ ಸ್ಕೂಲ್‌ನಲ್ಲಿ ಭಕ್ತರಿಗೆ ಅನುಕೂಲವಾಗುವಂತೆ ವಸತಿ ವ್ಯವಸ್ಥೆ ಮಾಡಲಾಗಿದೆ. 21.10.2018 ರಂದು 5.30ಕ್ಕೆ ಬೆಂಗಳೂರಿನಿಂದ ಪೊನ್ನಂಪೇಟೆಗೆ ಬಸ್ ವ್ಯವಸ್ಥೆ ಮಾಡಲಾಗಿದೆ. ಬಸ್ ಬುಕಿಂಗ್‌ಗಾಗಿ ಸ್ವಯಂಸೇವಕರಾದ ಶ್ರೀ ಕೆ.ವಿ. ಸುದರ್ಶನ್ ಕುಮಾರ್/ ರಾಜಣ್ಣ ಅವರನ್ನು ಸಂಪರ್ಕಿಸಿ: ಫೋ.ನಂ. 9845005273/ 8867725723

ಭಕ್ತಾದಿಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದಿವ್ಯತ್ರಯರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

RTGSಗಾಗಿ ಬ್ಯಾಂಕ್ ವಿವರಗಳು:
Sri Ramakrishna Sharadashrama, Ponnampet.
Corporation Bank, SB. A/c.no.520101041841472.
IFSC Code : CORP0000032 (ಪತ್ರ ಅಥವಾ ಇ-ಮೇಲ್ ಮೂಲಕ ವಿವರಗಳನ್ನು ತಿಳಿಸಿರಿ.)

ಭಗವತ್ಸೇವೆಯಲ್ಲಿ ತಮ್ಮ,
ಸ್ವಾಮಿ ಬೋಧಸ್ವರೂಪಾನಂದ
ಅಧ್ಯಕ್ಷರು

ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಭಾಗ ೨೦

ಶ್ರೀಮಾತೆ : ನಾನಾ ಭಾವಗಳಲ್ಲಿ

॥ ೨೦ ॥

ದೈವೀ ಸಂಕಲ್ಪದಂತೆ, ದುರದೃಷ್ಟವಶಾತ್ ಶ್ರೀಮಾತೆಯವರ ಒಬ್ಬ ಶಿಷ್ಯನು[೧] ಶಾಶ್ವತವಾಗಿ ರಾಮಕೃಷ್ಣ ಸಂಘವನ್ನು ಬಿಟ್ಟು ಹೋಗಬೇಕಾಗಿ ಬಂತು. ಬೀಳ್ಕೊಡುವಾಗ ಶ್ರೀಮಾತೆಯವರೂ ಅಳುತ್ತಿದ್ದರು, ಶಿಷ್ಯನೂ ಅಳುತ್ತಿದ್ದ. ಹೀಗೆ ಸ್ವಲ್ಪ ಹೊತ್ತು ಕಳೆದ ನಂತರ, ಯಾರೋ ಬರುವ ಸಾಧ್ಯತೆಯನ್ನರಿತ ಶ್ರೀಮಾತೆ, ಸೆರಗಿನ ತುದಿಯಿಂದ ಕಣ್ಣುಗಳನ್ನು ಒರೆಸಿಕೊಂಡರು. ಶಿಷ್ಯನಿಗೂ ಬಚ್ಚಲು ಮನೆಯಲ್ಲಿ ಕಣ್ಣುಗಳನ್ನು ಒರೆಸಿಕೊಂಡು ಬರಲು ಹೇಳಿದರು. ಅನಂತರ ಹೇಳಿದರು, ''ಬಾ ಮಗೂ, ನಿನಗೆ ಎಲ್ಲಿ ಇರಬೇಕಾಗುವುದೋ, ಅಲ್ಲೇ ಹೋಗಿ ಇರು. ಇದನ್ನು ತಿಳಿ, ನಾನು ನಿನ್ನ ಬಳಿಯೇ ಯಾವಾಗಲೂ ಇದ್ದೇನೆ ಅಂತ. ಇದು (ತಮ್ಮ ದೇಹವನ್ನು ತೋರಿಸಿ) ಹೋದ ಮೇಲೂ ಹಾಗೆಯೇ. ನಗುತ್ತ, ನಲಿಯುತ್ತ, ಅಳುತ್ತ ಜೀವನ ಮಾಡು. ನಿನಗೇನೂ ಭಯವಿಲ್ಲ.'' ಶಿಷ್ಯ ಹೊರಡುವಾಗ, ಶ್ರೀಮಾತೆ ಕಿಟಕಿಯ ಬಳಿ ನಿಂತು, ಎಷ್ಟು ದೂರದವರೆಗೆ ಅವನು ಕಾಣಿಸುತ್ತಿದ್ದನೋ ಅಲ್ಲಿಯ ತನಕವೂ ಅವನನ್ನೇ ನೋಡುತ್ತ ನಿಂತರು. ಅನಂತರ ಶಿಷ್ಯನಿಗೆ ತಿಳಿದು ಬಂತು, ಅಂದು ಶ್ರೀಮಾತೆ ಊಟ ಮಾಡಲಿಲ್ಲ ; ಇಡೀ ದಿನ ಅವರು ಅಳುತ್ತಿದ್ದರು ಎಂದು.

॥ ೨೧ ॥

ಶ್ರೀಮಾತೆಯವರ ದೇಹದಲ್ಲಿ ಸೀತಾಳೆಸಿಡುಬಿನ (small-pox) ಗುಳ್ಳೆಗಳು ಹಣ್ಣಾಗತೊಡಗಿದಾಗ, ಸೇವಕನು ಬೇವಿನ ಕಡ್ಡಿಯ ಮೂಲಕ ಅವುಗಳನ್ನು ಒತ್ತಿ, ಅನಂತರ ಅವುಗಳ ಕೀವನ್ನು ಹೊರಹಾಕಿ ಒರೆಸುತ್ತಿದ್ದ. ಅದನ್ನು ನೋಡಿದ ಡಾಕ್ಟರ್ ಕಾಂಜಿಲಾಲ್ ಶರತ್ ಮಹಾರಾಜರ ಅನುಮತಿಯಂತೆ ಸೇವಕನಿಗೆ ಇಂಜೆಕ್ಷನ್ ಹಾಕಿಸಿಕೊಳ್ಳಲು ಹೇಳಿದರು. ಅದಕ್ಕೆ ಒಪ್ಪದೆ ಸೇವಕ ಹೇಳಿದ: ''ಶ್ರೀಮಾತೆಯವರ ಸೇವೆ ಮಾಡುವುದಕ್ಕೆ ಇಂಜೆಕ್ಷನ್, ಔಷಧಿ ಏನೂ ಬೇಕಾಗುವುದಿಲ್ಲ.'' ಡಾಕ್ಟರ್ ಅದನ್ನು ಕೇಳದೆ ಬಲವಂತ ಮಾಡತೊಡಗಿದ. ಅಷ್ಟು ಸುಲಭವಾಗಿ ಅವನು ಬಿಡಲಾರನೆಂದು ತಿಳಿದ ಸೇವಕ, ಅಲ್ಲಿಂದ ಪಲಾಯನ ಮಾಡಿದ. ಡಾಕ್ಟರ್ ಅವನ ಹಿಂದೆಯೇ ಓಡತೊಡಗಿದ. ಅವನು ಹಲವು ಬಾರಿ ಓಡಿ, ಗಿರೀಶ ಚಂದ್ರನ ಮನೆಯ ಮುಂಬಾಗಿಲ ಮೂಲಕ ಒಳಹೊಕ್ಕು, ಕಿಟಕಿಯ ಮೂಲಕ ಹೊರಕ್ಕೆ ಓಡಿದ. ಆಗ ಗಿರೀಶಚಂದ್ರ ಮೇಲಂತಸ್ತಿನಲ್ಲಿ ಕುಳಿತಿದ್ದ. ಅವನು ಸೇವಕನನ್ನು ನೋಡಲಿಲ್ಲ. ಆದರೆ ಡಾಕ್ಟರ್ ಓಡುತ್ತಿದ್ದುದನ್ನು ಕಂಡು ಅವನನ್ನು ತನ್ನತ್ತ ಕರೆದ. ಎಲ್ಲ ಕಥೆಯನ್ನು ಕೇಳಿದ ನಂತರ ಗಿರೀಶ, ''ನೀನು ಅವನನ್ನು ಹಿಡಿಯಬಲ್ಲೆಯಾ? ಅವನು ಈಗಾಗಲೇ ಕಿಟಕಿ ಹಾರಿ ಓಡಿಹೋದ!'' ಎಂದ. ಡಾಕ್ಟರ್ ಶ್ರೀಮಾತೆಯವರ ಬಳಿಗೆ ಮರಳಿಬಂದು ದೂರಿದಾಗ ಅವರು ನಗುತ್ತ, ''ಸನ್ನಿವೇಶ ಭಾರೀ ಬಲವಾಗಿದೆ, ಗುರುಶಿಷ್ಯರು ಬೇರೆಯಾಗಿ ಕಾಣದೆ ಹೋಗಿದೆ!'' ಎಂದರು.

(ಮೂಲ ಬಂಗಾಳಿ: **'ಓ ಬಡೋ ಶಕ್ತ ಠಾಯಿ, ಗುರು-ಶಿಷ್ಯ ದೇಖಾ ನಾಯಿ'** - ಸಾಧನೆಯ ಅಂತಿಮ ಹಂತದಲ್ಲಿ ಗುರು-ಶಿಷ್ಯರು ಒಂದಾಗಿ ಬಿಡುತ್ತಾರೆ, ಭೇದವಿಲ್ಲ ಎಂಬರ್ಥದ ಗಾದೆ. ಅದನ್ನಿಲ್ಲಿ ಶ್ರೀಮಾತೆ ತಮಾಷೆಯಾಗಿ ಹೇಳಿದ್ದಾರೆ.)

॥ ೨೨ ॥

ಒಬ್ಬ ಭಕ್ತ ಒಂದು ಪುಸ್ತಕ ಬರೆಯಹೊರಟಿದ್ದ. ಒಂದು ಅಧ್ಯಾಯವನ್ನು ಬರೆದ ಮೇಲೆ ಅವನಿಗೆ ಕೆಲಸದ ಒತ್ತಡದಿಂದಾಗಿ ಮುಂದುವರೆಸಲಾಗಲಿಲ್ಲ. ಜಯರಾಮಬಾಟಿಗೆ ಹೋಗಿ ನಿಶ್ಚಿಂತೆಯಿಂದ ಅದನ್ನು ಬರೆದು ಮುಗಿಸುವುದಾಗಿ ಅವನು ಭಾವಿಸಿದ. ಅಲ್ಲಿ ಒಂದು ದಿನ ಅವರು ಇಲ್ಲದಿದ್ದಾಗ, ಒಬ್ಬಳು ಭಕ್ತೆ ಅವನ ಕೋಣೆಯನ್ನು ಸ್ವಚ್ಛಗೊಳಿಸುತ್ತಿದ್ದವಳು, ಆ ಬರಹವನ್ನು ಕಂಡಳು. ಅದನ್ನು ಆಕೆ ಶ್ರೀಮಾತೆಯವರ ಬಳಿಗೆ ತೆಗೆದುಕೊಂಡು ಹೋಗಿ, ಅವರಿಗೆ ಓದಿ ಹೇಳಿದಳು. ಊಟಮಾಡುವಾಗ ಶ್ರೀಮಾತೆ ಭಕ್ತನಿಗೆ, ''ನೀನು ತುಂಬ ಚೆನ್ನಾಗಿ ಬರೆಯುತ್ತೀಯಾ. ಪುಸ್ತಕವನ್ನು ಬರೆದು ಮುಗಿಸು'' ಎಂದರು. ಅವರ ಆಶೀರ್ವಾದ ಪಡೆದ ಭಕ್ತನಿಗೆ ಆನಂದವಾಯಿತು. ಅವನು ಅಲ್ಲೇ ಆ ಪುಸ್ತಕವನ್ನು ಬರೆದು ಮುಗಿಸಿದನು.

॥ ೨೩ ॥

ಒಬ್ಬಾಕೆ ಸೇವಕಿಯ[೧] ವಿಷಯವಾಗಿ ಶ್ರೀಮಾತೆ ಹೇಳುತ್ತಿದ್ದುದನ್ನು ಕೇಳಿದ್ದೇನೆ: ''ಅವಳೇನು ಕಡಿಮೆಯೆ? ನಾನೂ ಅವಳಿಗೆ ಹೆದರಿ ನಡೆದುಕೊಳ್ಳಬೇಕಾಗುತ್ತದೆ.''

---

೧ ವಿಶ್ವಾಸಾರ್ಹವಾದ ಮೂಲಗಳಿಂದ ನಮಗೆ ತಿಳಿದು ಬಂದಿದೆ, ಆ ಶಿಷ್ಯ ಸ್ವಯಂ ಲೇಖಕರೇ (ಆಶುತೋಷ ಮಿತ್ರ) ಎಂದು. *(- ಸಂ.)*

೧ ವಿಶ್ವಾಸಾರ್ಹವಾದ ಮೂಲಗಳಿಂದ ತಿಳಿದಿರುವುದೇನೆಂದರೆ, ಆಕೆ ಸರಳಾ (ಮುಂದೆ ಪ್ರವ್ರಾಜಿಕಾ ಭಾರತೀಪ್ರಾಣಾ) ಎಂದು. *(- ಸಂ.)*

॥ ೨೪ ॥

ಶ್ರೀಮಾತೆ ಎಲ್ಲಿಗೆ ಹೋದರೂ, ತಾವು ಠಾಕೂರರ ಭಾವಚಿತ್ರದೊಂದಿಗೆ ಒಂದು ಸಣ್ಣ ಪೆಟ್ಟಿಗೆಯನ್ನು ಒಯ್ಯುತ್ತಿದ್ದರು. ಅದರಲ್ಲಿ ಸಿಂಹವಾಹಿನಿಯ ಮಣ್ಣು ಇರುತ್ತಿತ್ತು. ಪ್ರತಿದಿನ ಪೂಜೆಯ ನಂತರ ಅವರು ಅದನ್ನು ಒಂದಿಷ್ಟು ತಿನ್ನುತ್ತಿದ್ದರು.

॥ ೨೫ ॥

ಶ್ರೀಮಾತೆ ತುಂಬ ಬೆಳಿಗ್ಗೆಯೇ ಎದ್ದುಬಿಡುತ್ತಿದ್ದರು. ಬಟ್ಟೆ ಒಗೆದು ಬಂದು, ಜಪಮಾಲೆ ಹಿಡಿದು ಜಪಕ್ಕೆ ಕುಳಿತುಕೊಳ್ಳುತ್ತಿದ್ದರು. ಎಂಟು, ಒಂಬತ್ತು ಗಂಟೆಯ ಹೊತ್ತಿಗೆ ಶ್ರೀರಾಮಕೃಷ್ಣರ ಪೂಜೆ ಮಾಡುತ್ತಿದ್ದರು. ಪೂಜೆ ಮುಗಿದ ನಂತರ ಕಲ್ಲುಸಕ್ಕರೆಯ ಪಾನೀಯ ಕುಡಿಯುತ್ತಿದ್ದರು. ಮಧ್ಯಾಹ್ನ ಊಟವಾದ ನಂತರ ಸಾಧಾರಣವಾಗಿ ವಿಶ್ರಾಂತಿ ಪಡೆಯುತ್ತಿದ್ದರು. ಸಾಯಂಕಾಲ ನಾಲ್ಕು ಗಂಟೆಯ ಹೊತ್ತಿಗೆ ಮತ್ತೆ ಬಟ್ಟೆ ಒಗೆದು ಬಂದು, ಮಾಲೆ ಹಿಡಿದು ಜಪಕ್ಕೆ ಕುಳಿತುಬಿಡುತ್ತಿದ್ದರು. ರಾತ್ರಿ ಊಟದವರೆಗೂ ಅವರು ಜಪ ಮಾಡುತ್ತಿದ್ದರು. ನಡುವೆ ಸೂರ್ಯಾಸ್ತವಾದರೆ, ಒಂದು ಬಾರಿ ಸಂಧ್ಯಾರತಿ ಮಾಡುತ್ತಿದ್ದರು. ಪ್ರತಿದಿನ ನಾಲ್ಕು ಸಲ ಗುಲ[೩]ದಿಂದ ಹಲ್ಲು ಉಜ್ಜುತ್ತಿದ್ದರು. ಬೆಳಿಗ್ಗೆ ಬಟ್ಟೆ ತೊಳೆಯಲು ಹೋದಾಗ, ಮಧ್ಯಾಹ್ನ ಊಟವಾದ ಮೇಲೆ, ಸಾಯಂಕಾಲ ಬಟ್ಟೆ ತೊಳೆಯುವಾಗ ಹಾಗೂ ಕೊನೆಯಲ್ಲಿ ರಾತ್ರಿ ಊಟವಾದ ಮೇಲೆ. ಮತಿಹಾರಿಯ ಒಣಗಿದ ಹೊಗೆಸೊಪ್ಪು ಹಾಗೂ ನೆಲ್ಲುಹುಲ್ಲಿನ ಪುಡಿಯ ಬೂದಿಯನ್ನು ಮಿಶ್ರಣ ಮಾಡಿ ಗುಲವನ್ನು ತಯಾರಿಸುತ್ತಿದ್ದರು. ಗೋಲಾಪ್ ಮಾ ಕೈಯಿಂದ ತಯಾರಿಸಿದ ಗುಲವನ್ನು ಅವರು ತುಂಬ ಇಷ್ಟಪಡುತ್ತಿದ್ದರು.

॥ ೨೬ ॥

ಆಗ ನಾನು ಕಲ್ಕತ್ತೆಯಲ್ಲಿದ್ದೆ. ಜಯರಾಮಬಾಟಿಯಲ್ಲಿದ್ದ ಶ್ರೀಮಾತೆಯವರ ಪತ್ರದಿಂದ ನನಗೆ ತಿಳಿಯಿತು, ಮೂರು ಮಂದಿ ಶಿಷ್ಯಂದಿರು ಅವರ ಬಳಿ ದೀಕ್ಷೆ ಹಾಗೂ ಸಂನ್ಯಾಸ ಸ್ವೀಕಾರ ಮಾಡಿ, ಅಲ್ಲಿಂದ ಕಾಲುನಡಿಗೆಯಲ್ಲೇ ಕಾಶೀಯಾತ್ರೆಗೆ ಹೊರಟಿದ್ದಾರೆ ಎಂಬುದಾಗಿ. ಅವರು ಮೊದಲು ಬೇಲೂರು ಮಠಕ್ಕೆ ಬಂದಿರಲಿಲ್ಲ; ನೇರ ಶ್ರೀಮಾತೆಯವರ ಬಳಿಗೆ ಹೋಗಿ, ಅನಂತರ ಬೇಲೂರು ಮಠಕ್ಕೆ ಹೋಗಿದ್ದರು. ಅವರಲ್ಲಿ ಒಬ್ಬರು ನನ್ನನ್ನು ಬಹಳ ಪ್ರೀತಿಸುತ್ತಿದ್ದರು. ಅವರ ಹೆಸರು ಸ್ವಾಮಿ ಶಾಂತಾನಂದ (ಖಗೇನ್).[೪]

॥ ೨೭ ॥

ಸ್ವಾಮೀಜಿಯವರು ವ್ಯವಸ್ಥೆ ಮಾಡಿದ ಪ್ರಕಾರ ಶ್ರೀಮಾತೆಯವರ ಸಂಸಾರ ನಿರ್ವಹಣೆಗೆ ಪ್ರತಿ ತಿಂಗಳೂ ಇಪ್ಪತ್ತೈದು ರೂಪಾಯಿ ಬೇಲೂರು ಮಠದಿಂದ ಬರುತ್ತಿತ್ತು. ಯೋಗಿನ್ ಮಹಾರಾಜರ ವ್ಯವಸ್ಥೆಯಿಂದ ಗಿರೀಶಚಂದ್ರ, ಹಾಗೂ ಇನ್ನೂ ಒಂದೆರಡು ಜನ ಪ್ರತಿ ತಿಂಗಳೂ ಅಷ್ಟಿಷ್ಟು ಸಹಾಯ ಮಾಡುತ್ತಿದ್ದರು. ಅನಂತರ ಶರತ್ ಮಹಾರಾಜರ ವ್ಯವಸ್ಥೆಯಂತೆ ಮಿಸೆಸ್ ಓಲೇಬುಲ್[೫] ಪ್ರತಿ ತಿಂಗಳೂ ಸಹಾಯ ಮಾಡುತ್ತಿದ್ದಳು. ಇದಲ್ಲದೆ ಶ್ರೀಮಾತೆ ಜಯರಾಂಬಾಟಿಯಲ್ಲಿರುತ್ತಿದ್ದರೆ ನಮಗೆ ತಿಳಿದಿರುವಂತೆ ಈ ಕೆಳಗಿನ ಭಕ್ತರು ಅವರಿಗೆ ನಿಯಮಿತವಾಗಿ ಹಣ ಕಳುಹಿಸಿಕೊಡುತ್ತಿದ್ದರು:

ಮಾಸ್ಟರ್ ಮಹಾಶಯ	೧೦ ರೂಪಾಯಿ
ಲಲಿತ್	೧೦ ರೂಪಾಯಿ
ಸುಪ್ರಸಿದ್ಧ ಬ್ಯಾರಿಸ್ಟರ್ ಎನ್.ಎನ್. ಬ್ಯಾನರ್ಜಿಯ ತಾಯಿ	೧೦ ರೂಪಾಯಿ
ಸ್ವಾಮಿ ತ್ರಿಗುಣಾತೀತಾನಂದ	೫ ರೂಪಾಯಿ

॥ ೨೮ ॥

ಶ್ರೀಮಾತೆ ಕಲ್ಕತ್ತೆಯ ವಿವಿಧ ಸ್ಥಳಗಳಿಗೆ ಹೋಗುತ್ತಿದ್ದರು, ಆದರೆ ದಕ್ಷಿಣೇಶ್ವರಕ್ಕೆ ಹೋಗಲು ಎಂದೂ ಬಯಸುತ್ತಿರಲಿಲ್ಲ — ಇದನ್ನು ನಾವು ಗಮನಿಸಿದ್ದೇವೆ.

॥ ೨೯ ॥

ಪುರಿಯಲ್ಲಿ ಪುರುಷೋತ್ತಮನ ದರ್ಶನ ಮಾಡುವಾಗ ಶ್ರೀಮಾತೆ ಒಬ್ಬ ಶಿಷ್ಯನ ಹಣೆಯನ್ನು ರತ್ನವೇದಿಕೆಗೆ ಸ್ಪರ್ಶ ಮಾಡಿಸಿ ಹೇಳಿದರು, "ಗುರು, ಇಷ್ಟದೇವತೆ ಇವರನ್ನು ಒಂದೇ ಕಡೆ ನೋಡಬೇಕು — ನೋಡು."

॥ ೩೦ ॥

ಕಲ್ಕತ್ತೆಯ ಹೊಸ ಮನೆಯಲ್ಲಿ ಒಂದು ದಿನ ಶ್ರೀಮಾತೆಯವರ ಪಾಯಿಖಾನೆಯನ್ನು ಅವರ ಸೇವಕನು ಸ್ವಚ್ಛಗೊಳಿಸುತ್ತಿದ್ದುದನ್ನು ನೋಡಿ, ಗೋಲಾಪ್ ಮಾ ತಮ್ಮ ತಲೆಗೂದಲಿನಿಂದಲೇ ಪ್ಯಾನನ್ನು ಸ್ವಚ್ಛಗೊಳಿಸಿದರು.

॥ ೩೧ ॥

ಶ್ರೀಮಾತೆ ಆಡುತ್ತಿದ್ದ ಭಾಷೆ ಸಾಮಾನ್ಯವಾಗಿ ಎರಡು ರೀತಿ ಇರುತ್ತಿತ್ತು. ನಮ್ಮೊಂದಿಗೆ ಕಲ್ಕತ್ತೆಯ ಭಾಷೆಯಲ್ಲಿ , ಹಾಗೂ ಹಳ್ಳಿಯಲ್ಲಿ ಸಾಮಾನ್ಯರ ಜೊತೆಗೆ ಮಾತನಾಡುವಾಗಲೋ, ತಮ್ಮ ಬಂಧುಗಳೊಂದಿಗೆ ಮಾತನಾಡುವಾಗಲೋ ಹಳ್ಳಿಯ ಭಾಷೆಯಲ್ಲಿ ಮಾತನಾಡುತ್ತಿದ್ದರು. ಹಾಗಿದ್ದರೂ ಅವರ ಪ್ರಾದೇಶಿಕ ಭಾಷೆ ಸಂಪೂರ್ಣವಾಗಿ ಶುದ್ಧವಾಗಿರಲಿಲ್ಲ , ಕಲ್ಕತ್ತೆಯ ಭಾಷೆಯೂ ಅದರೊಂದಿಗೆ ಮಿಶ್ರಿತವಾಗಿರುತ್ತಿತ್ತು.

---

೩ ಹೊಗೆಸೊಪ್ಪನ್ನು ಹುಡಿ ಮಾಡಿ, ಗುಳಿಗೆ ಮಾಡಿಟ್ಟುಕೊಂಡು, ಅದನ್ನು ಹಲ್ಲು ಉಜ್ಜಲು ಬಳಸುವುದು. ಗುಳಿಗೆಯೇ 'ಗುಲ'. *(- ಸಂ.)*

೪ ಉಳಿದ ಇಬ್ಬರು - ಸ್ವಾಮಿ ವಿಶುದ್ಧಾನಂದ (ಜಿತೇನ್ ಮಹಾರಾಜ್) ಹಾಗೂ ಸ್ವಾಮಿ ಗಿರಿಜಾನಂದ (ಗಿರಿಜಾ ಮಹಾರಾಜ್) *(**'ಶ್ರೀ ಮಾ ಸಾರದಾ ದೇವಿ'**, ಸ್ವಾಮಿ ಗಂಭೀರಾನಂದ, ೧೯೮೪, ಪು.೩೬೨)* *(- ಸಂ.)*

೫ ಮಿಸೆಸ್ ಓಲೆಬುಲ್ ಬದುಕಿದ್ದಷ್ಟು ದಿನವೂ ಶ್ರೀಮಾತೆಯವರ ಸೇವೆಗಾಗಿ ಪ್ರತಿ ತಿಂಗಳೂ ಅರವತ್ತು ರೂಪಾಯಿ ಕಳುಹಿಸುತ್ತಿದ್ದಳು. *(- ಸಂ.)*

|| ೩೨ ||

ಒಬ್ಬ ಸೇವಕ ಯಾವುದೋ ಒಂದು ನಿರ್ಜನ ಪ್ರದೇಶದಲ್ಲಿ ತಪಸ್ಸು ಮಾಡುವ ಬಯಕೆಯನ್ನು ಹೇಳಿಕೊಂಡು ಶ್ರೀಮಾತೆಯವರ ಅನುಮತಿ ಕೋರಿದಾಗ ಅವರೆಂದರು: ''ಲಾಟು ಪಂಚವಟಿಯಲ್ಲಿ ಕುಳಿತು ತಪಸ್ಸು ಮಾಡುತ್ತಿದ್ದ. ಠಾಕುರ್ ಝಾವುತಲಾಗೆ ಹೋಗು ವಾಗ ಅದನ್ನು ನೋಡಿ 'ಇಕೋ, ನೀನು ಯಾರನ್ನು ಕುರಿತು ಧ್ಯಾನ ಮಾಡುತ್ತಿದ್ದೀಯೋ, ಆಕೆ ಪಾತ್ರೆ ತೊಳೆಯುತ್ತಿದ್ದಾಳೆ, ಹಾಗೂ ಅಡುಗೆ ಮಾಡುತ್ತಾ ಸಾಯುತ್ತಿದ್ದಾಳೆ. ಅದರ ಕಡೆಗೆ ಗಮನ ಕೊಟ್ಟಿದ್ದೀಯಾ?' ಎಂದರು. ಅಂದಿನಿಂದ ಲಾಟು ನಹಬತ್‌ನಲ್ಲಿ ನನ್ನ ಪಾತ್ರೆ ತೊಳೆಯುತ್ತಿದ್ದ, ಬೇಳೆಕಾಳು ಅರೆಯುತ್ತಿದ್ದ, ಮೈದಾ ನಾದುತ್ತಿದ್ದ. ಆದ್ದರಿಂದ ನಿನಗೆ ಯಾವಾಗ ಹೋಗಬೇಕು ಅನ್ನಿಸಿತೋ, ಆಗ ಹೋಗಿ ಬಾ, ವಿಷ್ಣುಪುರಕ್ಕೆ ಹೋಗಿ ಲಾಲ್‌ಬಾಂಧ್‌ನಲ್ಲಿ ಇರು. ಅಲ್ಲಿ ಮೃಣ್ಮಯಿಯ ಅರ್ಚಕ ವೃದ್ಧ ಬ್ರಾಹ್ಮಣನಿದ್ದಾನೆ — ಅವನ ಬಳಿ ನನ್ನ ಹೆಸರು ಹೇಳು — ಅವನು ತುಂಬ ಆದರದಿಂದ ನಿನ್ನನ್ನು ಇರಿಸಿಕೊಳ್ಳುವನು. ಅನಂತರ ನಾನು ಹಳ್ಳಿಗೆ ಹೋಗುವಾಗ ಅಲ್ಲಿಗೆ ಹೋಗುತ್ತೇನೆ.''

|| ೩೩ ||

ಈ ಮೃಣ್ಮಯೀ ದೇವಿ ಪ್ರಕಟವಾದ ವಿಷಯವಾಗಿ ಶ್ರೀಮಾತೆಯವರಿಂದ ಕೇಳಿದ ಸಂಗತಿಯನ್ನೆಲ್ಲ ನೀಡುತ್ತೇನೆ: ''ಆ ಅರ್ಚಕ ಬ್ರಾಹ್ಮಣನ ಅವಸ್ಥೆ ಬಹಳ ದಯನೀಯವಾಗಿತ್ತು. ಒಂದು ದಿನ ಮೃಣ್ಮಯಿ ಕನಸಿನಲ್ಲಿ ಬಂದು, 'ನಾನು ಲಾಲ್‌ಬಾಂಧಿನ ನೀರಿನಲ್ಲಿದ್ದೇನೆ. ನನ್ನನ್ನೆತ್ತಿ ನನ್ನ ಸೇವೆ ಮಾಡು' ಎಂದು ಹೇಳಿದಳು. ಆ ಬ್ರಾಹ್ಮಣ ಅಲ್ಲಿಗೆ ಹೋಗಿ ನೋಡಿದಾಗ, ದೇವಿಯು ಅರ್ಧಭಾಗ ನೀರಿನಲ್ಲಿ ಮುಳುಗಿದ್ದಳು. ಆತ ಆಕೆಯನ್ನು ಅಲ್ಲಿಂದ ಎತ್ತಿ ತಂದು, ಲಾಲ್‌ಬಾಂಧಿನ ಘಾಟ್‌ನಲ್ಲೇ ಪ್ರತಿಷ್ಠೆ ಮಾಡಿ, ಅವಳ ಪೂಜೆ ಮಾಡಲು ಆರಂಭಿಸಿದ. ತಾಯಿಯ ಕೃಪೆಯಿಂದ ಆ ಬ್ರಾಹ್ಮಣನ ಅವಸ್ಥೆ ಕೂಡ ಉತ್ತಮಗೊಂಡಿತೆಂದೇ ಹೇಳಬೇಕು.''

|| ೩೪ ||

ಠಾಕೂರರ ಪೂಜೆಯಾದ ಮೇಲೆ ಶ್ರೀಮಾತೆ ತಮ್ಮ ಅಂತರಂಗದಲ್ಲೇ ತುಸು ಹೊತ್ತು ಮೌನವಾಗಿದ್ದುಕೊಂಡು, ಪಕ್ಕದಲ್ಲಿದ್ದ ಹೊಸ ಬ್ರಹ್ಮಚಾರಿಯನ್ನು ಕೇಳಿದರು, ''ನೀನು ಠಾಕೂರರನ್ನು ನೋಡಿದ್ದೀಯಾ? ಶ್ಯಾಮಾಪುಕುರದಲ್ಲಿ?'' ಬ್ರಹ್ಮಚಾರಿ ಹೇಳಿದ, ''ಆಗ ನನಗೆ ಐದು ವರ್ಷ ವಯಸ್ಸು. ಊರಿನ ಹೆಂಗಸರೆಲ್ಲ ಅವರನ್ನು ನೋಡಲು ಹೋಗಿದ್ದರು. ಅವರೊಂದಿಗೆ ನನ್ನ ತಾಯಿ ನನ್ನನ್ನು ಎತ್ತಿಕೊಂಡು ಹೋಗಿದ್ದಳು. ನಿಮಗೆ ಹೇಗೆ ಗೊತ್ತಾಯಿತು?''

ಶ್ರೀಮಾತೆ — ''ನಿನಗೆ ಲಾಡು ಕೊಡುವುದಕ್ಕಾಗಿ ಠಾಕೂರ್ ಸಿಕ್ಕ[೬]ದ ಕಡೆಗೆ ಸನ್ನೆ ಮಾಡಿದರೇನು? ಯಾರು ಕೊಟ್ಟರು, ನಿನಗೆ ನೆನಪಿದೆಯೆ?''

ಬ್ರಹ್ಮಚಾರಿ — ''ಹೌದು, ಒಬ್ಬಾಕೆ ಹೆಂಗಸು ತಂದುಕೊಟ್ಟಿದ್ದಳು.''

ಶ್ರೀಮಾತೆ — ''ಅದು ನಾನು.''

''ನೀವೆ!'' ಬ್ರಹ್ಮಚಾರಿ ಸ್ತಂಭೀಭೂತನಾದ.

ಶ್ರೀಮಾತೆ— ''ಇನ್ನೊಂದು ಬಾರಿ ಅವರನ್ನು ನೋಡಿದ್ದೆಯಾ?''

''ಹೌದು, ಅದು ಠಾಕೂರರ ದೇಹತ್ಯಾಗವಾದ ಮೇಲೆ, ಹಲವು ಸಮಯದ ಬಳಿಕ, ಪುರೀ ದೇವಾಲಯದಲ್ಲಿ.''

ಶ್ರೀಮಾತೆ— ''ನೀನು ಅವರನ್ನು ಕೈ ಸನ್ನೆ ಮಾಡಿ ಕರೆದಿದ್ದೆಯಾ?''

''ಆಗ ಅವರು ಕರೆದಿದ್ದರು, ನಾನೂ ಕರೆದಿದ್ದೆ.''

ಶ್ರೀಮಾತೆ— ''ಮಂದಿರದಲ್ಲಿ ಗದ್ದಲ ಕೇಳಿಬಂತು, ಹುಡುಗನಿಗೆ ದರ್ಶನವಾಗಿಬಿಟ್ಟಿದೆ ಅಂತ.''

''ನಿಮಗೆ ಇದೆಲ್ಲ ಹೇಗೆ ಗೊತ್ತಾಯಿತು?''

ಶ್ರೀಮಾತೆ - ''ನಾನು ಅಲ್ಲಿದ್ದೆ.''

ಬ್ರಹ್ಮಚಾರಿ ಮೈಮರೆತು ಶ್ರೀಮಾತೆಯವರ ಪಾದಗಳ ಮೇಲೆ ಇನ್ನೇನು, ಬೀಳಬೇಕೆಂದಿದ್ದ. ಅದಕ್ಕೆ ಅವಕಾಶ ನೀಡದೆ, ಶ್ರೀಮಾತೆ ಅವನಿಗೆ ದೀಕ್ಷೆ ನೀಡಿದರು. ಅನಂತರ ಅವನ ಕೆನ್ನೆಯ ಮೇಲೆ ಕೈಯಿಂದ ಸ್ಪರ್ಶ ಮಾಡುವ ಮೂಲಕ ಚುಂಬಿಸಿದರು.

|| ೩೫ ||

ಕೆಲವು ವರ್ಷಗಳ ನಂತರ ನಾವು ಈ ಘಟನೆಯ ಬಗ್ಗೆ ಪ್ರಸ್ತಾಪವೆತ್ತಿ , ಶ್ರೀಮಾತೆಯವರನ್ನು ಕೇಳಿದಾಗ ಹೀಗೆ ತಿಳಿದು ಬಂತು: ದೀಕ್ಷೆಗಾಗಿ ಬಂದವನನ್ನು ನೋಡಿದ ಕೂಡಲೇ ಅವರಿಗೆ ಅವನ ಹಿಂದಿನ ಜೀವನ ತಿಳಿಯುತ್ತಿತ್ತು; ಅದರೊಂದಿಗೆ ಅವನ ಪಾಲಿಗೆ ಮಂಗಳಕರವಾದ ಇಷ್ಟಮಂತ್ರ ಯಾವುದೋ ಅದು ಅವರಿಗೆ ಕಾಣಿಸುತ್ತಿತ್ತು ಎಂದು.

|| ೩೬ ||

ಹಿಂದಿನ ರಾತ್ರಿ ಶ್ರೀಮಾತೆ 'ಚೈತನ್ಯಲೀಲಾ' ನಾಟಕವನ್ನು ನೋಡಿ ಬಂದಿದ್ದರು. ಗಿರೀಶಚಂದ್ರ ವ್ಯವಸ್ಥೆ ಮಾಡಿದ್ದ— ಅದರಿಂದ ಶ್ರೀಮಾತೆ ಕುಳಿತುಕೊಳ್ಳಲು ರೇಲ್ ಬಾಕ್ಸನ್ನು ಬಿಟ್ಟುಕೊಡಲಾಯಿತು. ಬಹಳ ದಿನಗಳ ನಂತರ ಅಂದಿನ ರಾತ್ರಿಯ ಸಲುವಾಗಿ 'ಚೈತನ್ಯ ಲೀಲಾ' ನಾಟಕವನ್ನು ಆಡುವ ವ್ಯವಸ್ಥೆಯಾಗಿತ್ತು. 'ಜಗಾಯ್' ಪಾತ್ರವನ್ನು ಅರ್ಧೇಂದುಶೇಖರ ಆಡಿದ್ದ; 'ಮಾಧಾಯ್' ಪಾತ್ರವನ್ನು ಗಿರೀಶಚಂದ್ರನೇ ಆಡಿದ. ರಂಗಮಂಟಪದಲ್ಲಿ ಅವಕಾಶ ಪಡೆದಿದ್ದರೂ, ಭೂಷಣ ಎಂಬ ನಟಿ ಶ್ರೀಮಾತೆಗಾಗಿ ವೇತನವಿಲ್ಲದೆ 'ನಿಮಾಯ್'ಯ ರೂಪದಲ್ಲಿ ಕಾಣಿಸಿಕೊಂಡಳು. ಸುಶೀಲಾ 'ನಿತಾಯ್'ಯ ರೂಪದಲ್ಲಿ ಕಾಣಿಸಿಕೊಂಡಳು. ಅಭಿನಯಕ್ಕೆ ಮೊದಲು ಅವರಿಬ್ಬರೂ ಶ್ರೀಮಾತೆಗೆ ಪ್ರಣಾಮ ಮಾಡಿದ್ದರು. ಈ ವಿಷಯವಾಗಿ ಚರ್ಚೆಮಾಡುತ್ತ ಶ್ರೀಮಾತೆ ಹೇಳಿದರು, ''ಹುಡುಗಿಯನ್ನು

---

೬ ಸಿಕ್ಕ — ಹಗ್ಗದಿಂದ ಚಾವಣಿಗೆ ತೂಗುಹಾಕುತ್ತಾರೆ. ತಳದಲ್ಲಿ ಮಡಕೆ ಇತ್ಯಾದಿಗಳನ್ನಿಟ್ಟು, ಅದರಲ್ಲಿ ಆಹಾರ ಪದಾರ್ಥಗಳನ್ನು ಇಡುತ್ತಾರೆ.

(ಭೂಷಣ) ನೋಡಿದೆ, ಆಕೆ ಭಕಿಯುಳ್ಳವಳು. ಭಕ್ತಿಯಿಲ್ಲದಿದ್ದರೆ ಅದು ಸಾಧ್ಯವೆ? ನಿಮಾಯ್ ಅಂದರೆ ನಿಜವಾಗಿಯೂ ನಿಮಾಯ್ — ಆಕೆ ಹುಡುಗಿ ಅಂತ ಯಾರು ಹೇಳಿಯಾರು?'' ಅನಂತರ ಜಗಾಯ್-ಮಾಧಾಯ್ ವಿಷಯ ಬಂದಾಗ ಹೇಳಿದರು, ''ಅವರ ಹಾಗೆ ಭಕ್ತರು ಯಾರಿದ್ದಾರೆ? ರಾವಣನಂತೆ ಭಕ್ತರು ಯಾರಿದ್ದಾರೆ? ಹಿರಣ್ಯಕಶಿಪುವಿನಂತೆ ಭಕ್ತರು ಯಾರು? ಇದೇ ಗಿರೀಶಬಾಬು ಠಾಕೂರರಿಗೆ ಏನೆಲ್ಲ ಬಯ್ಯುತ್ತಿದ್ದ; ಆದರೂ ಅವನಂಥ ಭಕ್ತರು ಯಾರಿದ್ದಾರೆ? ಅವರೆಲ್ಲ ಈ ಭಾವದಿಂದಲೇ ಬಂದಿದ್ದಾರೆ. ಭಕ್ತನಾಗುವುದೇನು ಸಣ್ಣ ಸಂಗತಿಯೆ? ಸುಮ್ಮನೆ ಭಕ್ತಿಯುಂಟಾಗುವುದೆ?'' ಮತ್ತೆ ಅವರು ಲಕ್ಷ್ಮೀದೀದಿಯ ಕಡೆಗೆ ತಿರುಗಿ ಹೇಳಿದರು, ''ಲಕ್ಷ್ಮಿ, ಅದೇನು? ಮುಕ್ತಿ ನೀಡಲು ಕಾತರನಲ್ಲ —?'' ಲಕ್ಷ್ಮೀದೀದಿ ಸ್ವರವೆತ್ತಿ ಹಾಡಿದಳು:

> ''(ನಾ) ಮುಕ್ತಿಯನೀಯಲು ಹಿಂಜರಿಯೆ;
> ಭಕ್ತಿಯ ನೀಡಲು ಹಿಂಜರಿವೆ ॥''

॥ ೩೭ ॥

ಶ್ರೀಮಾತೆ ಕೆಂಪು ಅಥವಾ ಕಪ್ಪು ಬಣ್ಣದ ತೆಳು ಅಂಚಿನ ಸೀರೆಯನ್ನು ಧರಿಸುತ್ತಿದ್ದುದನ್ನು ಪದೇ ಪದೇ ಕಂಡಿದ್ದೇವೆ. ಹೆಚ್ಚಿನ ಮಂದಿ ಭಕ್ತರು ಕೆಂಪು ತೆಳ್ಳನೆಯ ಅಂಚಿನ ಸೀರೆಯನ್ನೇ ನೀಡುತ್ತಿದ್ದರು. ಕೆಲವರು ಮಾತ್ರ ಕಪ್ಪಂಚಿನದನ್ನು ಕೊಡುತ್ತಿದ್ದರು. ಅವರ ಕೈಯಲ್ಲಿ ಎರಡು 'ಹೋಗ್ಲಾಪಾಕಾ[2] ಬಳೆ' ಹಾಗೂ ಕೊರಳಲ್ಲಿ ಚಿನ್ನದ ಕಟ್ಟು ಹಾಕಿಸಿದ, ಸಣ್ಣ ಸಣ್ಣ ರುದ್ರಾಕ್ಷಿಯ ಮಾಲೆ ಇರುತ್ತಿತ್ತು. ಆ ಮಾಲೆಯಲ್ಲಿ ೧೦೮ ಸಣ್ಣ ರುದ್ರಾಕ್ಷಿ ಮಣಿಗಳು ಇರುತ್ತಿದ್ದವು. ಅದನ್ನು ಯೋಗೇನ್ ಮಹಾರಾಜರ ಕಾಲದಲ್ಲಿ ಮಾಡಿಸಲಾಗಿತ್ತು. ನಮ್ಮ ಕಾಲದಲ್ಲಿ ಈ ರುದ್ರಾಕ್ಷಿಗಳು ಕಳೆದುಹೋಗಿ, ಒಂದೆಡೆ ಖಾಲಿಯಾಗಿತ್ತು. ಹೊಸ ರುದ್ರಾಕ್ಷಿಯ ಮಣಿಗಳನ್ನು ತಂದು, ಚಿನ್ನದ ಹೊಸ ಕಟ್ಟು ಹಾಕಿಸಿ, ಪೋಣಿಸಿ ಕೊಡಲಾಯಿತು. ಶ್ರೀಮಾತೆಗೆ ವಾತವಿದ್ದುದರಿಂದ, ಅವರ ಎರಡೂ ಪಾದಗಳ ನಡುವಿನ ಬೆರಳುಗಳಲ್ಲಿ ಲೋಹದ ತಂತಿಯ ಕಾಲುಂಗುರವಿರುತ್ತಿತ್ತು.

॥ ೩೮ ॥

ಶ್ರೀಮಾತೆ ವಾತದ ಕಾರಣದಿಂದ ಪ್ರತಿದಿನ ಸ್ನಾನ ಮಾಡದೆ, ದಿನ ಬಿಟ್ಟು ದಿನ ಮಾಡುತ್ತಿದ್ದರು. ಕಲ್ಕತ್ತೆಯಲ್ಲಿದ್ದರೆ ಗಂಗಾಸ್ನಾನ, ಜಯರಾಮಬಾಟಿಯಲ್ಲಿದ್ದರೆ 'ದೊಡ್ಡಕೆರೆ' (ಬಡೋ ಪುಕುರ್) ಯಲ್ಲಿ ಸ್ನಾನ ಮಾಡುತ್ತಿದ್ದರು. ಶ್ರೀಮಾತೆ ಊಟ ಮಾಡುವಾಗ ಅವರ ಬಳಿಯಲ್ಲಿ ನಾವು ಯಾರಾದರೂ ಕುಳಿತಿದ್ದರೆ, ಆಗ ಅವರು ಏನನ್ನು ತಿನ್ನುತ್ತಿದ್ದರೋ ಅದನ್ನೇ ಪ್ರಸಾದವಾಗಿ ನೀಡುತ್ತಿದ್ದರು. ತಾಂಬೂಲ ತಿನ್ನಲು ಕುಳಿತಿದ್ದರೆ, ಅದರ ಪ್ರಸಾದ ಕೊಡುತ್ತಿರಲಿಲ್ಲ. ತಾವೇ ಒಂದು ತಾಂಬೂಲವನ್ನು ತಂದು ಕೊಡುತ್ತಿದ್ದರು, ಅಥವಾ ಇತರರ ಮೂಲಕ ತಾಂಬೂಲವನ್ನು ತರಿಸಿ, ತಮ್ಮ ಕೈಯಿಂದಲೇ ಕೊಡಿಸುತ್ತಿದ್ದರು.

॥ ೩೯ ॥

'ಹರಿಯ ತಾಯಿ' ಎಂಬ ಒಬ್ಬಾಕೆ ಮಧ್ಯವಯಸ್ಸಿನ ವಿಧವೆ ಪ್ರತಿದಿನವೂ ಶ್ರೀಮಾತೆಯವರ ಬಳಿಗೆ ಬರುತ್ತಿದ್ದಳು. ಒಂದು ದಿನ ಮಧ್ಯಾಹ್ನ ಆಕೆ ತನ್ನ ಸಂಸಾರದ ಮನೋವ್ಯಥೆಯನ್ನೆಲ್ಲ ಶ್ರೀಮಾತೆಗೆ ನೆನಪಿಸಿ, ಇತರ ಮಾತುಗಳನ್ನಾಡುತ್ತಾ ಹೇಳಿದಳು: ''ಏನು ಮಾಡಲಮ್ಮಾ? ಅದು ಬಿಟ್ಟು ಹೋಗುವುದಿಲ್ಲ. ಇಲ್ಲಿ ನೋಡಿ, ನೀವು ರಾಧುವನ್ನು ಬಿಡಬಲ್ಲಿರಾ? ಅವಳನ್ನು ಬಿಟ್ಟು ಬದುಕಬಲ್ಲಿರಾ?''

ಶ್ರೀಮಾತೆ ಒಂದು ಅಸಾಧಾರಣ ನಗುವನ್ನು ಚೆಲ್ಲಿ ಉತ್ತರಿಸಿದರು: ''ನನ್ನ ವಿಷಯ ಬಿಟ್ಟುಬಿಡು, ಹರಿಯ ತಾಯಿ!'' ಶ್ರೀಮಾತೆಯವರ ಆ ನಗು ಹಾಗೂ ಆ ಮಾತು ನಮ್ಮ ಹೃದಯದಲ್ಲಿ ಒಂದು ಹೊಸ ಮುದ್ರೆಯನ್ನು ಒತ್ತಿದಂತಾಗಿ, ಆಗ ನಾವು ಅವರನ್ನು ಏನೂ ಕೇಳದೆ ಸುಮ್ಮನಿದ್ದೆವು. ಅವರು ರಾತ್ರಿ ಊಟ ಮಾಡಿದ ನಂತರ ಆ ವಿಷಯವಾಗಿ ಒತ್ತಾಯಿಸಿ ಕೇಳಿದೆವು. ಆಗ ಅವರು ಕಾಯಲು ಹೇಳಿ, ಬಚ್ಚಲು ಮನೆಗೆ ಹೋದರು. ಮರಳಿ ಬಂದು ಕೈ, ಕಾಲು, ಒರೆಸಿಕೊಂಡು, ಹಾಸಿಗೆಯ ಮೇಲೆ ಕುಳಿತು ಹೇಳತೊಡಗಿದರು: ''ಅವರಿಗೆ ಏನು ತಿಳಿದೀತು? ನೋಡು — ನನಗೆ ರಾಧಿಯ ಮೇಲೆ ಮೋಹವಂತೆ! ಯಾರ ಮನೆಯಲ್ಲಿ ಹುಟ್ಟಿದ್ದೇವೋ ಅವರನ್ನು ನೋಡಿಕೊಳ್ಳಬೇಕು. ಅವರನ್ನು ತಾಯಿ ಅನ್ನು, ತಂದೆ ಅನ್ನು, ತಮ್ಮ ಅನ್ನು, ತಮ್ಮನ ಮಕ್ಕಳು ಅನ್ನು, ಅಪ್ಪ ಅನ್ನು — ಮಾಡಲೇಬೇಕು. ಯಾರೂ ಋಣವನ್ನು ಇಟ್ಟುಕೊಳ್ಳಬಾರದು. ಹೀಗಲ್ಲದಿದ್ದರೆ, ರಾಧಿ ಇತ್ಯಾದಿ ಇವರೆಲ್ಲ ನನಗೆ ಯಾರಂತೆ? ಠಾಕೂರ್ ಅವರ ತಾಯಿಯ ಸೇವೆಯನ್ನು ಎಷ್ಟೊಂದು ಮಾಡಿದ್ದಾರೆ, ರಾಮಲಾಲನನ್ನು ಕಾಳೀಮಂದಿರಕ್ಕೆ ಕಳುಹಿಸಿಕೊಟ್ಟು!'' ಈ ಮಾತಿನಿಂದ ಹೊಸ ಬೆಳಕು ಹರಿದಂತಾಗಿ ನಾನು ಕೇಳಿದೆ: ''ಹಾಗಿದ್ದರೆ ನಿಮ್ಮವರೇ ಆಗಿರುವ ಮಂದಿ ಯಾರೆಲ್ಲ?'' ಅದಕ್ಕೆ ಶ್ರೀಮಾತೆ, ''ಕಥಾಮೃತದಲ್ಲಿ 'ಸಾಂಗೋಪಾಂಗ' ವೆಂಬುದನ್ನು ಓದಿದ್ದೀಯಲ್ಲವೆ? ಠಾಕೂರರ ಮಂದಿ ಅನ್ನು, ನನ್ನ ಮಂದಿ ಅನ್ನು — ಆ ಗಂಡು, ಹೆಣ್ಣು ಮಕ್ಕಳೇ ನನ್ನ ಜನರು.'' ನಾನು ಕೇಳಿದೆ, ''ಹಾಗೇನು, ಅಮ್ಮಾ?'' ಅವರು ಹೇಳಿದರು, ''ಏಕೆ? ಅರ್ಥವಾಗಲಿಲ್ಲವೆ? ಅಲ್ಲಿ (ನನ್ನತ್ತ ತೋರಿಸಿ) ಏನಿದೆ?'' ಎಂದರು. ನಾನಂದೆ, ''ನೀವು.'' ಅದಕ್ಕೆ ಅವರು, ''ಇಲ್ಲೂ (ತಮ್ಮತ್ತ ತೋರಿಸಿ) ನೀವೇ — ಇದರಲ್ಲಿ ಮಾಯೆಯೇನೂ ಇಲ್ಲ; ಇದೇ ದೊಡ್ಡ ಸಂಬಂಧ, ಈ ಸಂಬಂಧದಿಂದಲೇ ಮತ್ತೆ ಮತ್ತೆ ಬಂದು ಹೋಗಬೇಕು. ತಿಳಿಯಿತೆ?'' ''ಹೌದಮ್ಮಾ.'' ''ಹೋಗು, ಈಗ ಮಲಗಿಕೋ. ಬರೆಯುತ್ತೀ ತಾನೆ?'' ''ಈಗಲೇ ಹೋಗಿ ಬರೆಯುತ್ತೇನೆ.'' ಶ್ರೀಮಾತೆ — ''ನೋಡುತ್ತೀಯೆ, ಜಗತ್ತಿನಲ್ಲಿ ಇನ್ನಾರೂ ನಿನ್ನವರು ಅಂತ ಇಲ್ಲ. ಆಗ ನಿನಗೆ ಚೆನ್ನಾಗಿ ತಿಳಿದೀತು, ಇದೆಂಥ ಸಂಬಂಧ ಅಂತ!''

(ಮುಂದುವರಿಯುವುದು)

---

೨ ನೀರಿನಲ್ಲಿ ಬೆಳೆಯುವ ಆನೆಜೊಂಡು (bulrush) ಹುಲ್ಲಿಗೆ 'ಹೋಗ್ಲಾ' ಎನ್ನುತ್ತಾರೆ. ಹೆಚ್ಚಾಗಿ ಗುಡಿಸಲು ನಿರ್ಮಾಣಕ್ಕೆ ಈ ಹುಲ್ಲನ್ನು ಬಳಸಲಾಗುತ್ತದೆ. ಈ ಹುಲ್ಲಿನಂತೆ ಕುಸುರಿಯಿರುವ ಬಳೆಗೆ ಬಂಗಾಳಿಯಲ್ಲಿ 'ಹೋಗ್ಲಾಪಾಕಾ' ಬಳೆ ಎನ್ನುತ್ತಾರೆ. *(-ಅನು.)*

ಮಾತಾಪಿತರ ಮಹಾಲಯದಲ್ಲಿ....

ನಾರಾಯಣಿ ದಾಮೋದರ್

ನಮಗೆ ಜನ್ಮವಿತ್ತು, ವಿದ್ಯಾಬುದ್ಧಿಯ ಬೆಳವಣಿಗೆಗೆ ಕಾರಣರಾದ, ಪರಂಪರೆಯ ಜ್ಞಾನವನ್ನು ನೀಡಿದ ಹೆತ್ತವರ ವಿಷಯವಾಗಿ ಇತ್ತೀಚೆಗೆ ಆಧುನಿಕ ಸಮಾಜದಲ್ಲಿ ಅಶ್ರದ್ಧೆ ಕಂಡುಬರುತ್ತಿದೆ. ನಮ್ಮ ಸಂಸ್ಕೃತಿಯ ಮಹೋಚ್ಚ ಪ್ರತಿನಿಧಿಗಳಿಬ್ಬರ ಜೀವನದ ಮೂಲಕ, ತಾಯಿತಂದೆಯರಿಗೆ ನಮ್ಮ ಸಂಸ್ಕೃತಿ ತೋರಿಸುವ ಸ್ಥಾನವೆಂತಹದು ಎಂಬುದನ್ನು ವಿವರಿಸಿರುವ ಲೇಖಕಿ, ಮಂಗಳೂರು ಆಕಾಶವಾಣಿಯಲ್ಲಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿದ್ದಾರೆ. ಸಂಗೀತ, ಹರಿಕಥೆ, ಸಾಹಿತ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಅಪಾರ ಅನುಭವ ಹೊಂದಿರುವ ಅವರು ಎರಡು ಪೌರಾಣಿಕ ಕಥಾಸಂಕಲನಗಳನ್ನು ರಚಿಸಿ ಪ್ರಕಟಿಸಿದ್ದಾರೆ.



ಒಡಲ ಭಾವ – ಮಡಿಲ ಭಾವಗಳು ಎಲ್ಲ ಜೀವಿಗಳಲ್ಲಿಯೂ ಸಮಾನವಾಗಿದ್ದು – ಸ್ವಂತ ಅನುಭವಕ್ಕೆ ಮಾತ್ರ ದಕ್ಕುವ ವಿಶಿಷ್ಟ ಅನುಭೂತಿ. ಆದರೆ ಭಾರತೀಯರು – ಮಾತೆಗೆ ಮಿಗಿಲಾದ ದೇವರಿಲ್ಲ ಎನ್ನುವ ಸುಸಂಸ್ಕೃತ ಮಾತೃಭಾವ ಬಂದಿಗಳು. ಒಂದು ಜೀವನವು ತನ್ನ ಹರಿವಿನ ಯಾವುದೇ ಮುಖ್ಯ ಘಟ್ಟವನ್ನು ತಲುಪಿದಾಗ ತಮ್ಮ ಜನ್ಮದಾತರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವ ಸತ್ಸಂಪ್ರದಾಯವೂ ಇದೆ. ಮಾತ್ರವಲ್ಲದೆ ಯಾವ ಆಧ್ಯಾತ್ಮಿಕ ಸಾಧಕರೂ ಮಾತೆಯ ಸೆಳೆತದಿಂದ ಮುಕ್ತವಾಗಿಲ್ಲ. ಅದ್ವೈತಾಚಾರ್ಯರಾದ ಶ್ರೀ ಶಂಕರಾಚಾರ್ಯರು, ಆಧುನಿಕ ದಾರ್ಶನಿಕ ಸಂತ ಶ್ರೀ ರಾಮಕೃಷ್ಣ ಪರಮಹಂಸರೂ ತಮ್ಮ ಮಾತಾಪಿತೃಭಾವದಲ್ಲಿ ಮಿಂದೆದ್ದವರೇ. ಕರುಳ ಭಾವವು ಜೀವ ಸಂಕುಲವನ್ನು – ಸದೇಹಿಯಾಗಿಯೂ ವಿದೇಹಿಯಾಗಿಯೂ, ಸಾಕಾರವಾಗಿಯೂ ನಿರಾಕಾರವಾಗಿಯೂ – ಆವರಿಸಿಕೊಂಡಿರುವ ನಂಟು.

ನಮ್ಮನ್ನು ಹೆತ್ತವರು – ನಮ್ಮ ಕಣ್ಣಿಗೆ ಕಾಣುವ ಸಂರಕ್ಷಕ ಶಕ್ತಿ. ಧ್ವನಿ, ಚಿತ್ರ, ಬರಹ ಮುಂತಾದ ಯಾವುದೇ ಪ್ರಕಟ ಮಾಧ್ಯಮದಲ್ಲಿಯೂ ಅಂತಃಕರಣವನ್ನು ಲೀಲಾಜಾಲವಾಗಿ ಮುಟ್ಟುವ ಅಭಿವ್ಯಕ್ತಿ – ಮಾತಾಪಿತೃಭಾವ. ಶ್ರುತಿಯಲ್ಲಿ – ಕಾಣಿಸದ ಪರಬ್ರಹ್ಮವನ್ನು ಗುರುತಿಸಲು ಅಸ್ಥೂಲಂ, ಅನಣು, ಅಹ್ರಸ್ವಂ, ಅದೀರ್ಘಂ, ಅಶಬ್ದಂ, ಅಸ್ಪರ್ಶಂ, ಅರೂಪಂ, ಅರಸಂ, ಅಗಂಧಂ ಎಂದು ವರ್ಣಿಸುತ್ತ – ಅದಲ್ಲ, ಇದಲ್ಲ ಎಂಬ ನೇತ್ಯಾತ್ಮಕ ಮಾರ್ಗದಲ್ಲಿ ಸೃಷ್ಟಿಕರ್ತೃ ಬ್ರಹ್ಮನ ಗುರುತು ಪತ್ರವನ್ನು ಕಟ್ಟಿಡುವ ಶಾಬ್ದಿಕ ಹೆಣಗಾಟ ನಡೆದಿದೆ. ಈ ವಿಶ್ವದಲ್ಲಿ ಉಚ್ಛಿಷ್ಟವಾಗದ ವಸ್ತುವೊಂದು ಇದ್ದರೆ – ಅದು – ಅನಿಶ್ಚಯದ ವೈಶ್ವಿಕ ಬ್ರಹ್ಮ; ಇನ್ನಿಲ್ಲದಷ್ಟು ಉಚ್ಛಿಷ್ಟವಾದ ವಸ್ತುವೊಂದಿದ್ದರೆ – ಅದು – ಬ್ರಹ್ಮರೂಪೀ ಸಾಕ್ಷಾತ್ ಮಾತಾಪಿತರು. ಅಣುವನ್ನು ಮಹತ್ತಾಗಿಸಬಲ್ಲ ಸೃಷ್ಟಿ ಸೇತುವೆಯ ಈ ಎರಡು ಕೊಂಡಿಗಳ ನಡುವೆ ಅಸಂಖ್ಯ ಬದುಕುಗಳು ಹೊರಳುತ್ತವೆ. ಒಂದೆಡೆ ಸಕಲ ಬ್ರಹ್ಮಾಂಡದ ಸೃಷ್ಟಿಕರ್ತ ಮತ್ತು ಇನ್ನೊಂದೆಡೆ ಸಾಂಸಾರಿಕ ಮಾತಾಪಿತರು. ಈ ಎರಡು ಧ್ರುವಗಳ ನಡುವೆ – ಭೂಮಿಯ ಸಮಸ್ತ ಭಾವ ಚಲನೆಯು ಬಂಧಿಸಲ್ಪಟ್ಟಿದೆ. ಕಂಡವರು ಹೇಳಲಾರರು; ಕಾಣದವರಿಗೆ ಗೊತ್ತಿಲ್ಲ ಎಂಬಂತಹ – ಮನೋ ಬುದ್ಧಿಗಳಿಗೆ ಅತೀತವಾದ ಪರಮಾತ್ಮವೆಂಬ ಬ್ರಹ್ಮವಸ್ತುವಿಗೆ – ಅಸ್ಥೂಲ, ಅನಣು... ಮುಂತಾದ ನಿರಾಕರಣೆಯ ಸೂತ್ರವು ಅನಿವಾರ್ಯ. ಆದರೆ ಈ ಭೂಮಿಯ ಭಾವ ವಲಯದಲ್ಲಿ ಸಹಜೀವಿಗಳಾಗಿರುವ ಜೀವ ಭಾವದ ಮಾತಾಪಿತರು ಸ್ಪರ್ಶ, ಶಬ್ದ, ರಸ, ಗಂಧ, ರೂಪಗಳಿಗೆ ಅಷ್ಟಿಷ್ಟು ದಕ್ಕುವಂಥವರು. ಆದ್ದರಿಂದಲೇ ಮಾತಾಪಿತರ ಭಾವಾ

ರ್ಣವವು ವರ್ಣನೆಗೆ ನಿಲುಕುವಂತಹುದು. ಮಾತಾಪಿತರನ್ನು ಸಾಕ್ಷಾತ್ ದೈವ ಎಂದೂ – ಮುಟ್ಟಿ ಅರ್ಥೈಸಲಾಗಿದೆ. ನಮ್ಮ ಜನ್ಮದಾತರ ಅನುಭವವು ಅವರ ಕಾಯವಳಿದ ಮೇಲೂ ಚಿತ್ತವೃತ್ತಿಯಿಂದ ಮಾಸುವುದಿಲ್ಲ.

ದೇಹಭಾವವನ್ನು ವಿಧೇಯವಾಗಿ ಅನುಸರಿಸುವ ದೇಹಧಾರೀ ಮಾತಾಪಿತರು – ಭೂಮಿಯ ಕರ್ಮನಿಷ್ಠ ಬದುಕಿಗೆ ಜೋತು ಬಿದ್ದು ಸಾಂಸಾರಿಕ ನಿಯಮಗಳ ಚೌಕಟ್ಟಿಗೆ ಬದ್ಧರಾಗಿಯೇ ಸಂಸಾರದ ನೊಗಕ್ಕೆ ಹೆಗಲು ಕೊಡುತ್ತಾರೆ. ಸಂಸಾರದ ಎಲ್ಲ ದುಃಖಗಳಿಗೂ ಕಾರಣವಾದ ಮಮತೆಯನ್ನು ತಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಮುಗ್ಧವಾಗಿ ಅಪ್ಪಿಕೊಳ್ಳುತ್ತಾರೆ; ಬಹುತೇಕ ಬಾಹ್ಯ ವಸ್ತುಗಳನ್ನೇ ನೆಚ್ಚಿಕೊಂಡು, ಸಂಸಾರದ ಬಂಡಿಯನ್ನು ಏಕಮನಸ್ಸಿನಿಂದ ಎಳೆಯುತ್ತ, ಪೋಷಿಸುತ್ತ ಬದುಕನ್ನು ಹಿಂಡುತ್ತಾರೆ. ರೆಕ್ಕೆ ಬಲಿತೊಡನೆ ಹಾರಿಹೋಗುವ ಸಂತಾನ ಸದಸ್ಯರಿಂದ ತುಂಬಿರುವ ಈ ಸಂಸಾರದ ಗೂಡಿನಲ್ಲಿ ಜೊತೆಯಾಗಿದ್ದು – ಹೊಸ ಪಥಿಕರಿಗೆ ಧರ್ಮಾರ್ಥವಾಗಿ ಗುಟುಕು ನೀಡುವವರೇ ಈ ಮಮತಾಮಯಿಗಳು. ಮನೆ ಎಂದರೆ – ಬಂದು ಹೋಗುವ ಪಥಿಕರಿಗೆ ಧರ್ಮಾರ್ಥವಾಗಿ ನೀರು ಹಂಚುವ ಮತ್ತು ಸ್ವತಃ ದಣಿವಾರಿಸಿಕೊಳ್ಳುವ ಅರವಟ್ಟಿಗೆ. ಸಂಸಾರಕ್ಕೆ ಆಗಮಿಸುವ ಹೊಸ ಪಥಿಕರು ಕಿರು ಅವಧಿಯವರೆಗೆ ಹೆತ್ತವರ ಜೊತೆಗಿದ್ದರೂ ತಮ್ಮ ಬಾಯಾರಿಕೆಯು ತಣಿದ ಕೂಡಲೇ ಹಿಂದೆ ತಿರುಗಿ ನೋಡದೆ ಕೈಕೊಡವಿಕೊಂಡು ಮುನ್ನಡೆಯುವುದು ಈ ಸಂಸಾರದ ನೀತಿ ಎಂಬುದನ್ನು ತಿಳಿದೂ – ಮಮತೆಯ ಮೋಹಕ್ಕೆ ಕಟ್ಟುಬಿದ್ದು, ಬ್ರಹ್ಮಸೃಷ್ಟಿಯ ಪರಾವರ್ತಿತ ಕೊಂಡಿಯು ಮುರಿಯದಂತೆ ಸೃಷ್ಟಿಗೆ ನಿರಂತರವಾಗಿ ಮೋಹದ ಉಸಿರು ನೀಡುತ್ತಿರುವವರೇ ಮಾತಾಪಿತರು; ಮಾಯಾವಿಗಳು! ಇವರೇ ನಮ್ಮ ಕಣ್ಣಿಗೆ ಕಾಣುವ – ಪ್ರಜಾಪಿತರು.

ದ್ವೇಷವಾಗಲೀ ಮೋಹವಾಗಲೀ ಎರಡೂ ರಕ್ತಪಿಪಾಸುಗಳೇ. ಒಂದು ತಾಮಸ; ಇನ್ನೊಂದು ಸಾತ್ವಿಕ – ಅಷ್ಟೇ ವ್ಯತ್ಯಾಸ. ಆದ್ದರಿಂದ ಒಂದು ಆರಕ್ತ; ಇನ್ನೊಂದು ಅನುರಕ್ತ. ದ್ವೇಷದಷ್ಟೇ ಮಮತೆಯೂ ಪೀಡಿಸಬಲ್ಲದು; ಹೋಗುತ್ತ ಬರುತ್ತ ನಯವಾಗಿ ಕೊಯ್ಯಬಲ್ಲದು. ಒಂದು ಬಹಿರಂಗವಾದರೆ ಇನ್ನೊಂದು ಮುಸುಕಿನ ಗುದ್ದು ! ಹೀಗಿದ್ದೂ ಮಮತಾಭಾವ ಎಂಬುದು ಭೂಮಿಯನ್ನು ಆವರಿಸಿರುವ – ಮೀರಲಾಗದಂತಹ ಮಾಯೆ. ಮನುಷ್ಯರು ಮಾಡುವ ಎಲ್ಲ ಮಮತಾಮಯ ಕಾರ್ಯಗಳೂ ಕೊನೆಗೆ ದುಃಖದಲ್ಲಿಯೇ ಪರ್ಯವಸಾನವಾಗುತ್ತದೆ. ಇದನ್ನು ತಿಳಿದವರೂ ಸಂಸಾರಕ್ಕೆ ಒಡ್ಡಿಕೊಳ್ಳುತ್ತ ಸೃಷ್ಟಿಗೆ ವಿಧೇಯರಾಗಿರುವುದೇ ಈ ಸೃಷ್ಟಿ ರಹಸ್ಯದ ಜಿಡುಕು; ಒಗಟು. ಹಾಗೆಂದು ಸಂಸಾರ ಸುಖ ಎಂಬುದು ಸಾಪೇಕ್ಷ; ಅದನ್ನು ತ್ಯಜಿಸು ಎನ್ನಲಾಗದು. ಇಚ್ಛಿಸಿದರೂ – ಎಲ್ಲರಿಗೂ ತ್ಯಜಿಸಲಾಗದ ಪಾಶವಿದು. ಇದೂ ಸೃಷ್ಟಿಯ ನಿಯಮವೇ ಆಗಿದೆ.

ಜನಿಸಿದಾಗಲೇ ಆತ್ಮಜ್ಞಾನ ಸಿದ್ಧರಾಗಿದ್ದ ಶುಕ ಮಹರ್ಷಿಗಳು ಲೋಕವ್ಯಾಪಾರಕ್ಕೆ ವಿಮುಖರಾಗಿ, ಪರಿವ್ರಾಜಕರಾಗಿ ಹೊರಟಾಗ ಮಹಾಜ್ಞಾನಿಯಾಗಿದ್ದ ತಂದೆ ವೇದವ್ಯಾಸರು 'ಮಗೂ, ಮಗೂ' ಎಂದು ಕೂಗುತ್ತ ಅವರ ಹಿಂದೆ ಧಾವಿಸಿ ಹೋದರಂತೆ ! ಪುತ್ರಮೋಹ ! ಮಹರ್ಷಿಯಾಗಿದ್ದ ಮಹಾಜ್ಞಾನಿಗೂ ಪುತ್ರಮೋಹ! ಬ್ರಹ್ಮರ್ಷಿ ವಸಿಷ್ಠರು ಪುತ್ರನಾದ ಶಕ್ತಿಯ ಮರಣದಿಂದ ವಿಹ್ವಲರಾಗಿ ಆತ್ಮಹತ್ಯೆಗೂ ಎಳಸಿದ್ದರು ! ದೇಹಪ್ರಜ್ಞೆ ಮತ್ತು ಮೋಹಪ್ರಜ್ಞೆಯಿಂದ ಮುಕ್ತರಾಗುವುದು ಎಂತಹ ಜ್ಞಾನಿಗೂ ಸುಲಭದ ಮಾತಲ್ಲ. ಆದರೆ ತಾತ್ತ್ವಿಕ ನೆಲೆಯಲ್ಲಿ ಯೋಚಿಸಬಲ್ಲ ಜ್ಞಾನಿಗಳಾದವರು ಈ ಬದುಕು ತಮ್ಮ ಮುಂದೊಡ್ಡುವ ಯಾವುದೇ ಆಘಾತದಿಂದ ಕುಸಿಯದೆ, ಅದನ್ನು ಜೀರ್ಣಿಸಿಕೊಂಡು ನಿಭಾಯಿಸಬಲ್ಲರು. ಅಂತಹ ಜ್ಞಾನಿಗಳನ್ನು ಜ್ಞಾನವೇ ಆಧರಿಸುತ್ತದೆ. ಆದರೆ ಪೂರ್ವಸಂಸ್ಕಾರವಿಲ್ಲದ ಸಾಮಾನ್ಯರಿಗೆ ಮಾತ್ರ – ಬದುಕಿನ ಯಾವುದೇ ಆಘಾತಗಳಿಂದಲೂ ಹೊರಬರುವುದು ಕಠಿಣವಾಗಿ ಬಿಡುತ್ತದೆ. ಇಲ್ಲಿ ಯಾವುದೇ ಮೀಸಲಾತಿಯೂ ಉಪಯೋಗಕ್ಕೆ ಬರುವುದಿಲ್ಲ. ಪರಿಹಾರಧನವೂ ಉಪಕರಿಸುವುದಿಲ್ಲ. ಏಕಾಗ್ರ, ತಪಸ್ಸಿನಿಂದ ವಿಮುಖವಾಗಿರುವ ಸಾಮಾನ್ಯ ಸಂಸಾರಸ್ಥರನ್ನು ಜ್ಞಾನದ ಹಾದಿಯು ಆಕರ್ಷಿಸುವುದೂ ಇಲ್ಲ ; ಜ್ಞಾನಕ್ಕೆ ಒಳಮಾರ್ಗಗಳೂ ಇಲ್ಲ ; ದುರ್ಗಮವಾದ ಹಾದಿಯಿದು. ಒಬ್ಬರ ಬೆನ್ನನ್ನು ಇನ್ನೊಬ್ಬರು ತುರಿಸುವಂತಹ ಹಾಸ್ಯ, ಚುಟುಕು, ಕುಟುಕುಗಳಂತಹ ಸಾಂಸಾರಿಕ ದೊಂಬರಾಟಗಳೆಲ್ಲವೂ ಜ್ಞಾನಶಾಖೆಗಳೆ? ಕಾಲಹರಣದ ತೇರನೆಳೆಯುವ ಯಾವುದೇ ಪುಡಿ ಉತ್ಸವಗಳಿಗೆ ಸಿದ್ಧಜ್ಞಾನವು ಒಲಿಯುವುದಿಲ್ಲ. ಆದ್ದರಿಂದಲೇ ಶುಕ ಮಹರ್ಷಿಗಳಂತಹ – ಶುದ್ಧ ಜ್ಞಾನನಿಧಿಗಳನ್ನು ತುರಿಕೆಯ ಸಂಸಾರವು ಆಕರ್ಷಿಸಲಿಲ್ಲ. ಹಾಗಿದ್ದರೆ ಸಾಮಾನ್ಯರ ಪಾಡೇನು ?

ಮಾತಾಪಿತರ ಈ ಮಹಾಲಯದಲ್ಲಿ ಬಹುಪಾಲು ಸಂಸಾರಗಳೆಲ್ಲವೂ ಪಾಚಿ ಕಟ್ಟಿದ ನೀರಿನಂತೆ; ಜೀವದ್ರವವೇ ಮರೆಯಾದಂತೆ ಗೋಚರಿಸುತ್ತವೆ. ನಿಧಾನವಾಗಿ ಪಾಚಿ ಸರಿಸಿ ನೀರನ್ನು ಎತ್ತಿದರೆ ಮಾತ್ರ ತಿಳಿನೀರು ಸಿಕ್ಕೀತು. ಅವಸರಿಸಿದರೆ ನೀರು ಬಗ್ಗಡವಾಗುವುದು ನಿಸ್ಸಂಶಯ. ಅವಸರದ ಬದುಕಿನಲ್ಲಿ ದಿನವೂ ಕದಡುವ ಅಂತಹ ಕಲುಷಿತ ನೀರನ್ನೇ ಸೇವಿಸುತ್ತ ಮನೋವಾಕ್ಕಾಯಗಳನ್ನು ಸದೃಢಗೊಳಿಸುವುದಾದರೂ ಹೇಗೆ? ಆದ್ದರಿಂದ ಪಾಚಿಯು ಕದಡದಂತೆ ಎಚ್ಚರದಿಂದ ಅದನ್ನು ಬದಿಗೆ ಸರಿಸಿ, ತಿಳಿನೀರನ್ನು ಸಂಗ್ರಹಿಸುವ ಶ್ರಮವು ಯಾವುದೇ ಸಂಸಾರದಲ್ಲಿ ಅನಿವಾರ್ಯ. ಬುದ್ಧಿ ಕಲಕಬಾರದು; ಕುಲುಕಬಾರದು; ತುಳುಕಲೂ ಬಾರದು. ಹದವಿಲ್ಲದ ವೇಗಕ್ಕೆ ಒಲಿಯದ ಮತ್ತು ಹದವರಿತ ಸಂಯಮಕ್ಕೆ ಒಲಿಯುವ ಸೂತ್ರವಿದು. ಆದ್ದರಿಂದಲೇ – ಪುಣ್ಯಫಲಭರಿತ ಶುಕವೃಕ್ಷಗಳು ಆಧುನಿಕ Smart Cityಗಳಲ್ಲಿ ಕಾಣುವಂತಹುದಲ್ಲ.

ಪ್ರಾರಬ್ಧದಿಂದ ಬಸವಳಿದು ಬಾಯಾರಿ, ಪುನರಪಿ ಜನ್ಮ ತಳೆದು ಭೂಮಿಗೆ ಆಗಮಿಸುವ ಚಿತ್ತುಚಿತ್ತಾದ ಜೀವವೃಕ್ಷದ ಬೀಜಗಳು, ನಿಗದಿತ ಅರವಟ್ಟಿಗೆಯಲ್ಲಿ ಬಂದು ಬಿದ್ದು ಅಲ್ಲೇ ಚಿಗುರಿದಾಗ, ಜೀವವೃಕ್ಷದ ಬೇರಿಗೆ ನೀರೂಡಿಸಿ ಬೇಲಿಯೊಳಗೆ ಸುರಕ್ಷಿತವಾಗಿ ಲಾಲಿಸಿ ಪಾಲಿಸುವವರು ಮಾತಾಪಿತರು. ಅವರು ಕಾಲ

ಕಾಲಕ್ಕೆ ಬೌದ್ಧಿಕ ಪುಷ್ಟಿಯನ್ನೂ ನೀಡಬಲ್ಲವರಾದರೆ ಜೀವಸಸಿಯು ಹೆಮ್ಮರವಾದೀತು. ಫಲಪುಷ್ಪಭರಿತವಾಗಿ ಹೊಸ ಪಥಿಕರಿಗೆ ನೆರಳನ್ನೂ ನೀಡೀತು. ಹೊಸ ಜನ್ಮ ಪಡೆದ ಪಥಿಕರಿಗೆ ಕೈಮರವಾಗಿ, ಪಥ ತಪ್ಪದಂತೆ ರಕ್ಷಣೆಯೂ ಸಿಕ್ಕೀತು.

ಸಂಸಾರದಲ್ಲಿ ಬಿದ್ದ ಉದ್ದೇಶವು ಜೀವಿಗಳಿಗೆ ಮರವೆಯಾಗದಂತೆ ಕಾಪಾಡಬಲ್ಲವರು – ಮಾತಾಪಿತರು. ತಮ್ಮ ನಡೆನುಡಿಯ ಮೂಲಕವೇ ದೇಹಜೀವಭಾವದ ಸ್ಥೂಲ ಕಲ್ಪನೆಯನ್ನು ತಮ್ಮ ಸಂತಾನದಲ್ಲಿ ಮೂಡಿಸಬೇಕಾದವರೂ ಹೆತ್ತವರೇ. ಆದರೆ ದುರ್ದೈವವೆಂದರೆ, ಇಂದಿನ ಎಷ್ಟೋ ಅರವಟ್ಟಿಗೆಗಳು ಬತ್ತಿ ಹೋಗಿವೆ. ಅಲ್ಲಿ ನೆಲವೇ ಕಿತ್ತು ಹೋಗಿದೆ. ಗೋಡೆಗಳು ಬಿರುಕು ಬಿಟ್ಟಿವೆ.. ತಿಂದುಣ್ಣುವ ಸ್ಪರ್ಧೆಯಲ್ಲದೆ ಅಂತಹ ಸಂಸಾರಗಳಲ್ಲಿ ಯಾವುದೇ ಪಥ ದರ್ಶನವಾಗುವುದಿಲ್ಲ ; ತಾವೇ ದಿಕ್ಕುಗೆಟ್ಟು ನಿಂತಿರುವ ನತದೃಷ್ಟ ಹೆತ್ತವರು, ಸಹಜೀವಿಗಳ ಭೌತಿಕ ಆವಶ್ಯಕತೆಗಳನ್ನಷ್ಟೇ ಯಾಂತ್ರಿಕವಾಗಿ ಅಷ್ಟಿಷ್ಟು ಪೂರೈಸುತ್ತಿರುತ್ತಾರೆ. ಇತ್ತ, ಬಾಯಾರಿ ಬಂದ ಹಲವು ಹುಟ್ಟುಗಳಿಗೆ ಆಯಾ ಸಂಚಿತ ಸಂಸ್ಕಾರದಿಂದಾಗಿ, ಉದ್ದೇಶಿತ ಗುರಿಯಾಗಲೀ ಸತ್ಪಥದ ಗೊಡವೆಯಾಗಲೀ ಸೊಗಸುವುದಿಲ್ಲ. ಇಂತಹ ವೈರುಧ್ಯ ಸಂಧಿಯ – ಮಾತಾಪಿತ ಮತ್ತು ಸಂತಾನಗಳ ಮಾಯಾಪರದೆಯನ್ನು ಹರಿಸಲು ನೆರವಿಗೆ ಬರುವುದೇ – ಸಚ್ಚಿಂತನೆ ಮತ್ತು ಸತ್ಸಂಗ.

ಅರ್ಥಮನರ್ಥಂ ಭಾವಯ ನಿತ್ಯಂ ನಾಸ್ತಿ ತತಃ ಸುಖಲೇಶಃ ಸತ್ಯಮ್ ।
ಪುತ್ರಾದಪಿ ಧನಭಾಜಾಂ ಭೀತಿಃ ಸರ್ವತ್ರೈಷಾ ವಿಹಿತಾ ರೀತಿಃ ॥

‘ಹಣವು ಎಂದೆಂದಿಗೂ ಅನರ್ಥವನ್ನುಂಟುಮಾಡುವುದು. ಹಣದಿಂದ ಸುಖವೆಂಬುದು ಇಲ್ಲವೇ ಇಲ್ಲ. ಇದು ನಿಜ. ಧನಿಕನಿಗೆ ಮಗನಿಂದಲೂ ಭಯವುಂಟು. ಇದು ಸರ್ವತ್ರ ಇರುವ ರೀತಿ ಎಂಬುದನ್ನು ತಿಳಿದುಕೋ..’ ಶ್ರೀಶಂಕರಾಚಾರ್ಯರ **ಮೋಹಮುದ್ಗರ** ಎಂಬ ಸ್ತೋತ್ರ ಸಾಹಿತ್ಯದ ಭಾಗವಿದು. ‘ಭಜ ಗೋವಿಂದಂ ಮೂಢಮತೇ’ ಎಂದು ಆರಂಭವಾಗುವ ಈ ಸ್ತೋತ್ರವು ಮೌಢ್ಯ ದಿಂದ ಆವೃತವಾದ ಜೀವಿಗಳಿಗೆ ಮಾರ್ಗದರ್ಶಕ ಕೈಪಿಡಿಯಂತಿದೆ. ಈ ಸ್ತೋತ್ರದಲ್ಲಿ – ಗುರುಗಳು, ಮಾತಾಪಿತರು ತಮ್ಮ ಸಂತಾನಕ್ಕೆ ತೋರಬೇಕಾದ ಮಾರ್ಗದರ್ಶನವಿದೆ. **ಬ್ರಹ್ಮ ಸತ್ಯ – ಜಗನ್ಮಿಥ್ಯಾ** ಎಂಬ ವಾಣಿಯ ಸೂಕ್ಷ್ಮ, ಅವಿದ್ಯೆ ಮುಂತಾದ ಭವಪಾಶಗಳಿಂದ ಮುಕ್ತವಾಗುವ ದಿಗ್ದರ್ಶನವಿದೆ. ಜನರ ಜೀವನವನ್ನು ಸುಖಸಂಪದ್ಭರಿತ – ಸದ್ಗುಣಪೂರಿತವಾಗಿಸಿಕೊಳ್ಳಬೇಕು ಎನ್ನುವ ಕಳಕಳಿಯೂ ಇದೆ.

ಇಂತಹ ಸ್ವಸ್ಥ ಸುಖಚಿಂತನೆಯನ್ನು ಊಡಿಸಬಲ್ಲ ಮಾತಾಪಿತರು ಮತ್ತು ಇಂತಹ ಸಚ್ಚಿಂತನೆಯ ಪ್ರಭಾವಕ್ಕೊಳಗಾಗುವ ಸಂತಾನಗಳು ಯಾವುದೇ ಸ್ವಸ್ಥ ಸಮಾಜದ ಶಾಶ್ವತ ಸಂಪತ್ತುಗಳಾಗುತ್ತವೆ. ಇಂದಿಗೂ ಈ ಸಂಪತ್ತು ಭಾರತದ ನೆಲದಲ್ಲಿದೆ.

ಬಾಲ ಸಂನ್ಯಾಸತ್ವ ಸ್ವೀಕರಿಸಿ, ಅನೇಕ ಮಹತ್ಕಾರ್ಯಗಳನ್ನು ಸಾಧಿಸಿ, ಕೇವಲ ೩೨ ವರ್ಷ ಬದುಕಿದ್ದರೂ ತಮ್ಮ ಅಲ್ಪ ಆಯುರ್ಮಾನದಲ್ಲಿ ಭಾರತದ ಉದ್ದಗಲಕ್ಕೂ ಸಂಚರಿಸಿ ಜನರು ತಮ್ಮನ್ನು ತಾವೇ ತಿದ್ದಿಕೊಳ್ಳುವಂತೆ, ತನ್ಮೂಲಕ ಸನ್ಮಾರ್ಗಾವಲಂಬಿಗಳಾಗುವಂತೆ ಜನರನ್ನು ಉದ್ದೀಪಿಸಿದವರು – ಆದಿ ಶಂಕರಾಚಾರ್ಯರು. ಸುಮಾರು ೧೨೫೦ ವರ್ಷಗಳ ಹಿಂದೆ – ಅಧ್ಯಾತ್ಮ ಪಥದ ಕಠಿಣ ಆಯ್ಕೆಯಾದ ಜ್ಞಾನ ಮಾರ್ಗದಲ್ಲಿ – ಯಶೋದುಂದುಭಿ ಮೊಳಗಿಸಿದ ಅದ್ವೈತಾಚಾರ್ಯರಿವರು. ಜಟಿಲ ವಿಷಯಗಳನ್ನೂ ಲಾಲಿತ್ಯಪೂರ್ಣವಾಗಿ, ಹೃತ್ಪೂರ್ವಕವಾಗಿ, ಮೃದುಮಧುರವಾದ ಮಾತುಗಳಲ್ಲಿ ತಿಳಿ ಹೇಳಿದ ಜ್ಞಾನನಿಧಿ ಇವರು. ಮನಸ್ಸು–ಬುದ್ಧಿಯ ಅಪಾರ ಸಾಧ್ಯತೆಗಳನ್ನು ಪ್ರಾಯೋಗಿಕವಾಗಿ ಸಿದ್ಧಪಡಿಸಿದ ಮಹಾಮಹಿಮರು – ಶ್ರೀ ಶಂಕರಾಚಾರ್ಯರು.

ಗೇಯಂ ಗೀತಾ ನಾಮಸಹಸ್ರಂ ಧ್ಯೇಯಂ ಶ್ರೀಪತಿ ರೂಪಮಜಸ್ರಂ ।
ನೇಯಂ ಸಜ್ಜನ ಸಂಗೇ ಚಿತ್ತಂ ದೇಯಂ ದೀನಜನಾಯ ಚ ವಿತ್ತಮ್ ॥

‘ಭಗವದ್ಗೀತೆಯನ್ನು ಶ್ರದ್ಧೆಯಿಂದ ಸ್ವಲ್ಪ ಮಾತ್ರವೇ ಓದಿದ್ದರೂ ಗಂಗೆಯ ಒಂದೆರಡು ಹನಿಯನ್ನಷ್ಟೇ ಪಾನ ಮಾಡಿದ್ದರೂ ಸಜ್ಜನ ಸಂಗ, ದಾನಧರ್ಮ, ಶ್ರೀ ಕೃಷ್ಣನ ಪೂಜೆಯನ್ನು ಒಮ್ಮೆಯಾದರೂ ಮಾಡಿದ್ದರೆ ಅಂತಹ ಮನುಷ್ಯರಿಗೆ ಯಮನ ಭಯ ಇರುವುದಿಲ್ಲ’ ಎಂಬ ಭರವಸೆಯನ್ನು ಸಂಸಾರಕ್ಕೆ ನೀಡಿ, ಕರ್ಮಮಾರ್ಗದ ಮೂಲಕವೇ ಅದರ ಮುಂದಿನ ಹೆಜ್ಜೆಯಾದ ಜ್ಞಾನಮಾರ್ಗದತ್ತ ಸಮಾಜವನ್ನು ಆಕರ್ಷಿಸಿದವರು ಶ್ರೀಶಂಕರರು. ಜ್ಞಾನದ ಬಲದಿಂದಲೇ ನಿರ್ಭಯನಾಗಿದ್ದು – ಬದುಕನ್ನು ಸವಿಯುವಂತೆ ಸಂತ ಸಂನ್ಯಾಸಿಯು ನೀಡಿದ್ದ ಈ ಭರವಸೆಯು ಸಮಸ್ತ ಪಥಿಕರನ್ನು ಮುಟ್ಟಬೇಕು. ಪ್ರತಿಯೊಂದು ಅರವಟ್ಟಿಗೆಯೂ ಮತದ ಸಂಕುಚಿತ ಸಂಕೋಲೆಯಿಂದ ಬಿಡಿಸಿಕೊಂಡು ಸತ್ಪಥ, ಸದ್ವಿಚಾರಗಳನ್ನು ಊಡಿಸುತ್ತ – ನಿರ್ಭಯ ಸಮಾಜದ ನಿರ್ಮಾಣದಲ್ಲಿ ಕೈಜೋಡಿಸಬೇಕು. ಅದಕ್ಕಾಗಿ ಸುಶಿಕ್ಷಣ, ಸುಸಂಸ್ಕಾರಗಳ ಮೂಲಪಾಠವು, ಮನೆ ಎಂಬ ಮೊದಲ ಪಾಠಶಾಲೆಯಲ್ಲಿಯೇ ಎಲ್ಲರಿಗೂ ದೊರಕುವಂತಾಗಬೇಕು.. ಸ್ವಪ್ರಯತ್ನದಿಂದಲಾದರೂ ಅಭಿರುಚಿಯನ್ನು ಸಂಸ್ಕರಿಸಿಕೊಳ್ಳಬೇಕು.

ಸಂಸ್ಕಾರವುಳ್ಳ ಗರ್ಭದಲ್ಲಿಯೇ ಉತ್ತಮ ಅಭಿರುಚಿಯ ಶಿಶು ಜನ್ಮ ತಾಳುತ್ತದೆ ಎಂಬ ಮಾತಿಗೆ – ಶಿವಗುರು ಮತ್ತು ಆರ್ಯಾಂಬೆಯರ ಪುತ್ರನಾದ ಶ್ರೀ ಶಂಕರಾಚಾರ್ಯರಂತೆಯೇ – ಕ್ಷುದಿರಾಮ ಚಟ್ಟೋಪಾಧ್ಯಾಯ ಮತ್ತು ಚಂದ್ರಮಣೀ ದೇವಿಯ ಕಿರಿಯ ಮಗನಾದ ಶ್ರೀ ರಾಮಕೃಷ್ಣರೂ ಉತ್ತಮ ದೃಷ್ಟಾಂತ. ಶ್ರೀ ರಾಮಕೃಷ್ಣರ ತಾಯಿ ಚಂದ್ರಮಣೀ ದೇವಿಯವರು ತಮ್ಮ ಬದುಕಿನ ಉತ್ತರಾರ್ಧದಲ್ಲಿ ಮಗನಾದ ರಾಮಕೃಷ್ಣರ ಜೊತೆಯಲ್ಲಿದ್ದರು. ದಕ್ಷಿಣೇಶ್ವರದ ನಹಬತ್‌ನ ಮೇಲಿನ ಅಂತಸ್ತಿನಲ್ಲಿ ಅವರು ವಾಸಿಸುತ್ತಿದ್ದರು. ಪ್ರತಿದಿನ ಪ್ರಾತಃಕಾಲ ಶ್ರೀರಾಮಕೃಷ್ಣರು ತಾಯಿಗೆ ನಮಸ್ಕರಿಸಿ, ತಾವೇ ಸ್ವತಃ ಆಕೆಯ ಸೇವೆಯನ್ನು ಮಾಡುತ್ತಿದ್ದರು. ಅಮ್ಮನ ಯೋಗಕ್ಷೇಮವನ್ನು ತಾವೇ ಗಮನಿಸುತ್ತಿದ್ದರು. ಅವರು – ತನ್ನ ಪತ್ನಿಗೋ ಶಿಷ್ಯರಿಗೋ ತಮ್ಮ ತಾಯಿಯ ಸೇವೆಯ ಭಾಗ್ಯವನ್ನು ದಾಟಿಸಿರಲಿಲ್ಲ. ಹೆತ್ತ ಅಮ್ಮನಲ್ಲೂ –

ಹೆಣ್ಣು, ಹೆಂಗಸು ಎಂಬ ಭೇದವನ್ನು ಗುರುತಿಸಿ ಸೇವಕರಿಂದಲೋ ಪತ್ನಿ ಅಥವ ಬಳಗದ ಸುಪರ್ದಿಗೋ ಆಕೆಯನ್ನು ಒಪ್ಪಿಸಿ – ಸ್ವಂತ ಸುಖಕ್ಕೆ ಯಾವುದೇ ಪ್ರಯೋಜನವಿಲ್ಲದ – ಸೇವೆಯೆಂಬ ಕಿರಿಕಿರಿಯಿಂದಲೂ ನುಣುಚಿಕೊಳ್ಳುವ ಆಧುನಿಕ ಹಣವಂತ ಪುತ್ರ ಪುತ್ರಿಯರಿಗೆ ಶ್ರೀರಾಮಕೃಷ್ಣರು ಮಾದರಿಯಾಗಬೇಕು. ಏಕೆಂದರೆ – ತಾಯಿಯು ಹೆಣ್ಣೂ ಅಲ್ಲ ; ಹೆಂಗಸೂ ಅಲ್ಲ. ಆಕೆ ತಾಯಿ... ತಂದೆಯು ಗಂಡೂ ಅಲ್ಲ ; ಗಂಡಸೂ ಅಲ್ಲ. ಆತ ತಂದೆ... ಧನೋಪಚಾರವು ಎಂದಿಗೂ ಸಂತಾನೋಪಚಾರವಾಗದು. ಮಾತಾಪಿತರು ವೃದ್ಧಾಪ್ಯದಿಂದ ಬಾಧೆ ಪಡುವ ಹಂತದಲ್ಲಂತೂ ಯಾವುದೇ ಸಂತಾನವು ಸ್ತ್ರೀ ಪುರುಷ ಎಂಬ ಕ್ಷುದ್ರ ಭೇದಗಳಲ್ಲಿ ಮುಳುಗಲೇ ಬಾರದು. ಪುರುಷ ಪ್ರತಿಷ್ಠೆಯಾಗಲೀ ಸ್ತ್ರೀಲಜ್ಜೆಯಾಗಲೀ ಮಾತಾಪಿತರ ಸೇವೆಗೆ ಅಡ್ಡಿಯಲ್ಲ. ಹೊಸ ಚಿಂತನೆಗಳಲ್ಲಿ ಸ್ಪಷ್ಟತೆ ಮೂಡಬೇಕಾಗಿದೆ. ಅಭೇದವನ್ನು ಸಾಕ್ಷಾತ್ಕರಿಸಿಕೊಳ್ಳಲು ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳುವುದೊಂದೇ ಮಾರ್ಗ.

ವೇದಾಂಗದ ಯಾವುದೇ ಕರ್ಮಾಚರಣೆಗೆ ಒಂದು ಗಾಂಭೀರ್ಯವಿರುತ್ತದೆ; ಇರಬೇಕು. ಪಡಪೋಶಿ ಆಚರಣೆಗಳಿಂದ – ಆಯಾ ದಿನ ಉಂಡ ಸುಖ, ಕೆಲವರಿಗೆ ಪ್ರವಾಸದ ಸುಖ ಸಿಗಬಹುದಲ್ಲದೆ ಉದಾತ್ತ ಉದ್ದೇಶವು ಸಾಧನೆಯಾಗದು. ಈ ಬದುಕಿನ ಮಹಾಲಯಕ್ಕೆ ಪ್ರೀತಿ, ಕರುಣೆ, ನಂಬಿಕೆ, ವಿಶ್ವಾಸ, ಶ್ರದ್ಧೆಗಳೇ ತಳಪಾಯ. ತಳ ಉರುಳಿಸಿದರೆ ಮನೆಯೂ ಉಳಿಯದು; ಭಾವವು ಕಮರಿಹೋದರೆ ಮನಸ್ಸಿನ ನೆಮ್ಮದಿಯೂ ಉಳಿಯದು. ಆದ್ದರಿಂದ ಮನಸ್ಸಿನ ಸ್ವಾಸ್ಥ್ಯವನ್ನು ರಕ್ಷಿಸಿಕೊಳ್ಳುವಂತಹ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ. ಶ್ರೀಶಂಕರ, ಶ್ರೀರಾಮಕೃಷ್ಣರು ನಮಗಾಗಿ ಉಳಿಸಿಹೋದ ಉನ್ನತ ಚಿಂತನೆಗಳು ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ಮನುಷ್ಯರನ್ನು ಆಧರಿಸಬಲ್ಲವು.

ಮರಣಾನಂತರ ನಿರ್ವಹಿಸುವ ಶ್ರಾದ್ಧಕರ್ಮಗಳು – ಮಾತಾಪಿತರು ಬದುಕಿರುವಾಗ ಅವರಿಗೆ ಸಲ್ಲಿಸುತ್ತಿದ್ದ ಹೃತ್ಪೂರ್ವಕವಾದ ಮಾನಸಿಕ ಮತ್ತು ದೈಹಿಕ ಬೆಂಬಲದ ಸಂದು ಕಡಿಯದ ಭಾವ ಕ್ರಿಯೆ; ಪಿತೃಗಳ ನಿರಂತರ ಸ್ಮರಣೆಯ ಪ್ರತೀಕ. ಶ್ರಾದ್ಧದ ಹೂರಣವೇ ಶ್ರದ್ಧೆ.

ತಮ್ಮ ಇಳಿ ವಯಸ್ಸಿನಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಜೊತೆಯಲ್ಲಿ ದಕ್ಷಿಣೇಶ್ವರದಲ್ಲಿಯೇ ವಾಸವಾಗಿದ್ದ ಚಂದ್ರಮಣಿಯವರ ಸಾವು ಸಮೀಪಿಸುತ್ತಿದ್ದಾಗ ಅವರನ್ನು ಅಂತರ್ಜಲಿ ಸಂಸ್ಕಾರಕ್ಕಾಗಿ (ಸಾಯುತ್ತಿರುವ ವ್ಯಕ್ತಿಯ ಶರೀರದ ಕೆಳಭಾಗವನ್ನು ನೀರಿನಲ್ಲಿ ಮುಳುಗಿಸುವ ಸಂಸ್ಕಾರವಿದು; ಬಹುಶಃ – ಪಂಚಭೂತಗಳಲ್ಲಿ ಒಂದಾಗಲು ಮಾನಸಿಕವಾಗಿ ಸಿದ್ಧಗೊಳಿಸುವ ಪೂರ್ವ ತಾಲೀಮು! ಮರಣವನ್ನು ಬುದ್ಧಿಪೂರ್ವಕವಾಗಿ ಸ್ವೀಕರಿಸುವಂತಹ ವೀರವಿಧಿ !) ಸಮೀಪ ದಲ್ಲಿದ್ದ ಬಕುಲ್ ತಾಲಾ ಘಾಟ್‌ಗೆ ಕರೆದೊಯ್ಯಲಾಯಿತು. ತನ್ನ ತಾಯಿಯು ಶಾಶ್ವತವಾಗಿ ಪರಲೋಕ ಯಾತ್ರೆಗೆ ಹೊರಟಿದ್ದಾಳೆ ಎಂಬುದು ಅರ್ಥವಾಗಿದ್ದರೂ ಆ ಕ್ಷಣದಲ್ಲಿ , ಶ್ರೀರಾಮಕೃಷ್ಣರೂ ವಿಚಲಿತರಾಗಿದ್ದರು. ಮಮತೆಯ ಪಾಶವು ಜೀವವನ್ನು ಕಟ್ಟುವಾಗಲೂ ನೋವು; ಬಿಡಿಸಿಕೊಳ್ಳುವಾಗಲೂ ನೋವು ಕೊಡುತ್ತದೆ! ಅದನ್ನೇ ಕರುಳಿನ ಬಂಧ ಎನ್ನುವುದು! ಆದರೆ.. ಈ ಸಂಸಾರವನ್ನು ನಿಲ್ಲದಂತೆ ಓಡಿಸುತ್ತಿರುವುದೂ ಅದೇ ಬಂಧ; ಸಂಸಾರಗಳು ಮುಗ್ಗರಿಸುವುದೂ ಅದೇ ಮಮತೆ ಯಿಂದ !

ಅಂದು ಅಂತಿಮ ಯಾತ್ರೆಗೆ ಸಿದ್ಧಳಾಗಿದ್ದ ತಮ್ಮ ತಾಯಿಯ ಕಾಲು ಹಿಡಿದು ''ಅಮ್ಮಾ, ನನ್ನನ್ನು ನಿನ್ನ ಗರ್ಭದಲ್ಲಿ ಹೊತ್ತ ನೀನು ಯಾರು? ಇಲ್ಲಿಯವರೆಗೆ ನನ್ನನ್ನು ನೀನು ನೋಡಿಕೊಂಡೆ. ಇನ್ನೂ ಹಾಗೇ ನೋಡಿಕೋ..'' ಎಂದು ಮನಸಾರೆ ಅತ್ತುಬಿಟ್ಟಿದ್ದರಂತೆ – ಶ್ರೀ ರಾಮಕೃಷ್ಣರು. ಭಾವತರ್ಪಣ ! ಅದಕ್ಕಿಂತ ಶ್ರೇಷ್ಠ ತರ್ಪಣವುಂಟೆ? ಶ್ರೀರಾಮಕೃಷ್ಣರು ಅದಾಗಲೇ ಗಲಿತ ಕರ್ಮಾವಸ್ಥೆಯನ್ನು ತಲುಪಿದ್ದರು. ಅಂದರೆ, ಎಲ್ಲ ಕರ್ಮವನ್ನು ಮೀರಿದ ಅವಧೂತ ಸ್ಥಿತಿಯನ್ನು ತಲುಪಿದ್ದ ಕಾರಣ, ೧೮೭೬ರಲ್ಲಿ ಚಂದ್ರಮಣೀ ದೇವಿಯವರು ದೈವಾಧೀನರಾದಾಗ ತಮ್ಮ ತಾಯಿಗೆ ದೈಹಿಕವಾಗಿ ತರ್ಪಣ ನೀಡಲೂ ಅವರಿಗೆ ಅಸಾಧ್ಯವಾಯಿತು. ಅವರ ಬೊಗಸೆಯಲ್ಲಿ ನೀರೂ ನಿಲ್ಲುತ್ತಿರಲಿಲ್ಲವಂತೆ. (ಸಂಗ್ರಹಕ್ಕೆ ವಿಮುಖವಾದ ಭಾವಸ್ಥಿತಿ?) ತಮ್ಮ ಸುದೀರ್ಘ ತಾಂತ್ರಿಕ ಸಾಧನೆಗಳಿಂದಾಗಿ ಪರಮಹಂಸರು ಆಗ ದೈಹಿಕವಾಗಿ ಕೂಡ ದುರ್ಬಲರಾಗಿದ್ದರು. ಅನಂತರ ರಾಮಕೃಷ್ಣರ ಸೂಚನೆಯಂತೆಯೇ ಅವರ ಸೋದರಳಿಯ ರಾಮಲಾಲನು ಚಂದ್ರಮಣೀ ದೇವಿಯವರ ಅಂತ್ಯಕರ್ಮಗಳನ್ನು ನಿರ್ವಹಿಸಿದ್ದನು.

ಶ್ರೀ ರಾಮಕೃಷ್ಣರು ಹೇಳುತ್ತಿದ್ದರು : ಈ ಪ್ರಪಂಚದಲ್ಲಿ ತಂದೆ ತಾಯಿಗಳಿಬ್ಬರೂ ಮಹಾನ್ ಗುರುಗಳು. ಅವರು ಬದುಕಿರುವವರೆಗೆ ಅವರ ಸೇವೆಯನ್ನು ಮಾಡುವುದು ಮಕ್ಕಳ ಕರ್ತವ್ಯ ಮತ್ತು ಅವರ ಮರಣಾನಂತರ ಅವರವರ ಶಕ್ತ್ಯನುಸಾರ ಶ್ರಾದ್ಧ ಮಾಡಬೇಕು. ಶ್ರದ್ಧೆಯ ಪರಿಧಿಯಲ್ಲಿ ಬರುವ ಲೋಕ ಮರ್ಯಾದೆಯನ್ನು ಯಾರೂ ಉಲ್ಲಂಘಿಸಬಾರದು ಮತ್ತು ತಾಪತ್ರಯಗಳಲ್ಲಿ ಸಿಲುಕಿ, ನಿತ್ಯಸ್ಮರಣೆಯಿಂದ ವಂಚಿತರಾಗುವ ಸಾಂಸಾರಿಕರು ವರ್ಷಕ್ಕೊಮ್ಮೆಯಾದರೂ ಪಿತೃಗಳನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದನ್ನು ರಾಮಕೃಷ್ಣರು ಅನುಮೋದಿಸಿದ್ದರು. ಸ್ವತಃ ತಾವು ಆಚರಿಸಿ, ಬೋಧಿಸಿದ್ದರು.

ಮಾತೃಭಕ್ತರಾಗಿದ್ದ ಶ್ರೀಶಂಕರ ಮತ್ತು ಶ್ರೀರಾಮಕೃಷ್ಣರಲ್ಲಿ ಹಲವು ಸಾಮ್ಯತೆಗಳಿದ್ದರೂ ಪ್ರತ್ಯೇಕವೆನಿಸುವ ವೈಶಿಷ್ಟ್ಯಗಳೂ ಇದ್ದವು. ಶ್ರೀಶಂಕರರು ಜ್ಞಾನಿಗಳಿಗೆ ಅರ್ಥವಾಗುವಂತೆ ಅದ್ವೈತವನ್ನು ಸಾಕಾರಗೊಳಿಸಿಕೊಂಡಿದ್ದರೆ ಶ್ರೀ ಪರಮಹಂಸರು ಪಾಮರರಿಗೂ ತಿಳಿಯುವಂತೆ ಅದ್ವೈತವನ್ನು ಉಂಡು ಉಟ್ಟು ಉಸಿರಾಗಿಸಿಕೊಂಡು ಬದುಕಿದರು ! ಒಬ್ಬರು ಅಲ್ಪಾವಧಿಯ ಬದುಕಿನಲ್ಲೇ ಸಾಗರೋಪಮವಾಗಿ ಬೋಧಿಸಿ ಸನಾತನ ವೇದವನ್ನು ಬದುಕಿಸಿದರು; ಇನ್ನೊಬ್ಬರು ಉನ್ನತ ಚಿಂತನೆಗಳೆಲ್ಲವನ್ನೂ ಸ್ವತಃ ಬದುಕಿ ಬೋಧಿಸಿ ಜೀವಸಾಗರವನ್ನು ಬದುಕಿಸಿದರು ! ಶಂಕರರು ತಮ್ಮ

ಪಾಂಡಿತ್ಯದ ಜ್ಞಾನಖಡ್ಗದಿಂದ ಅನ್ಯ ಶಾಸ್ತ್ರೋಕ್ತಿಗಳನ್ನು ತುಂಡರಿಸುತ್ತ ತಮ್ಮ ಮತವನ್ನು ಪ್ರತಿಪಾದಿಸುತ್ತ ನಡೆದರೆ, ರಾಮಕೃಷ್ಣರು – ಲೋಕರೂಢಿಯನ್ನು ನಯವಾಗಿ ತಿದ್ದುತ್ತ ಒಯನಾಗಿ ಒಪ್ಪಿಸಿ ಮೆಚ್ಚಿಸಿದರು! ಶಂಕರರು ಜ್ಞಾನಮಾರ್ಗಾವಲಂಬಿಯಾದರೆ ಪರಮಹಂಸರು ಜ್ಞಾನ, ಕರ್ಮ, ಭಕ್ತಿಮಾರ್ಗಗಳೆಲ್ಲವನ್ನೂ ಅನುಮೋದಿಸಿದರು; ಎಷ್ಟು ಮತವೋ ಅಷ್ಟು ಪಥ ಎಂದರು. ಸರ್ವಮಾರ್ಗಗಳೊಂದೆ ನಿಲಯಕೆ ಹೋಗುವಂಥವು – ಎಂದು ಭರವಸೆ ನೀಡಿದರು; ಪಾತ್ರ – ಪಾತ್ರೆಯ ರುಚಿಭೇದ ಮತ್ತು ಸಾಮರ್ಥ್ಯವನ್ನು ಅರಿತು ತಕ್ಕಂತೆ ಉಪದೇಶಿಸಿದರು; ಮುಳುಗುವವರನ್ನು ಹಿಡಿದೆತ್ತಿದರು. ಮುಖ್ಯವಾಗಿ, ಶ್ರೀ ಶಂಕರ ಪ್ರಣೀತ ಅದ್ವೈತವು ಜನಸಾಮಾನ್ಯರನ್ನೂ ಮುಟ್ಟುವಂತೆ ಮಾಡಿದರು. ಪಂಡಿತರಿಂದ ಹಿಡಿದು ಪಾಮರರವರೆಗೆ ಎಲ್ಲರನ್ನೂ ಶ್ರೀರಾಮಕೃಷ್ಣರು ಸಮಾನವಾಗಿ ಪೋಷಿಸಿದರು. ಹೀಗಿದ್ದೂ – ಈ ಯುಗಕ್ಕೆ ಭಕ್ತಿಮಾರ್ಗವೇ ಸುಲಭ ಎಂದೂ ಪರಮಹಂಸರು ದಾರಿ ತೋರಿದರು. ಅದಕ್ಕೆ ಕಾರಣವನ್ನೂ ಕೊಟ್ಟರು. ಜ್ಞಾನದ ಪ್ರಖರತೆಯನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯು ಇಂದಿನ ಪಾಮರರಿಗಿಲ್ಲ. ಆದುದರಿಂದ ಸೇವಕ ಶರಣಾಗತ ಭಾವದ ಶುದ್ಧ ಭಕ್ತಿ – ವೈರಾಗ್ಯವು ಸಾಮಾನ್ಯರನ್ನೂ ಆಧರಿಸಬಲ್ಲದು ಎಂದು ಶ್ರೀರಾಮಕೃಷ್ಣರು ಸರಳತೆಯ ಹಾದಿ ತೋರಿದರು.

ಪರಮಹಂಸರು ರಾಖಾಲ (ಸ್ವಾಮಿ ಬ್ರಹ್ಮಾನಂದ), ಶರತ್ (ಸ್ವಾಮಿ ಶಾರದಾನಂದ), ತಾರಕ (ಸ್ವಾಮಿ ಶಿವಾನಂದ) ಮುಂತಾದ ತಮ್ಮ ಬೆರಳೆಣಿಕೆಯ ಅಂತರಂಗ ಶಿಷ್ಯರು ಮತ್ತು ಸ್ವಾಮಿ ವಿವೇಕಾನಂದ ಎಂದೇ ಜಗದ್ವಿಖ್ಯಾತರಾದ ನರೇಂದ್ರನಂತಹ ಜ್ಞಾನಖಡ್ಗಗಳನ್ನು ರೂಪಿಸಿದರೆ, ಶಂಕರರು – ಪದ್ಮಪಾದ, ಸುರೇಶ್ವರ, ಹಸ್ತಾಮಲಕ, ತೋಟಕರಂತಹ ಶಿಷ್ಯರನ್ನು ರೂಪಿಸಿದರು. ಶ್ರೀ ಶಂಕರಾಚಾರ್ಯರು ಭಾರತದ ನಾಲ್ದೆಸೆಗಳಲ್ಲಿ ನಾಲ್ಕು ಅದ್ವೈತ ಪೀಠಗಳನ್ನು ಸ್ಥಾಪಿಸಿದರೆ, ಶ್ರೀರಾಮಕೃಷ್ಣರ ಕಾಲಾನಂತರ ಅವರ ಶಿಷ್ಯವೃಂದವು ಸ್ವಾಮಿ ವಿವೇಕಾನಂದರ ಮಾರ್ಗದರ್ಶನದಲ್ಲಿ ವಿಶ್ವದಾದ್ಯಂತ ರಾಮಕೃಷ್ಣ ಮಠಗಳನ್ನು ಸ್ಥಾಪಿಸಿ ರಾಮಕೃಷ್ಣ ಚಿಂತನೆಗಳ ಪ್ರಸಾರದಲ್ಲಿ ತೊಡಗಿಕೊಂಡರು. ಇಬ್ಬರೂ ಯುಗಪುರುಷರು ಸುಮಾರು ೧೦೦೦ ವರ್ಷಗಳ ಅಂತರದಲ್ಲಿ ಆಗಿನ ಸಮಾಜವನ್ನು ಬಲವಾಗಿ ಪ್ರಭಾವಿಸಿದರು. ಶಂಕರರು ಜ್ಞಾನದ ಕಿಡಿಯ ರೂಪದಲ್ಲಿಯೇ ಅವತರಿಸಿ, ತಮ್ಮ ಮೂರನೇ ವಯಸ್ಸಿನಲ್ಲಿಯೇ ಅಕ್ಷರದ ಸಹವಾಸದಲ್ಲಿದ್ದು ೮ನೇ ವಯಸ್ಸಿನಲ್ಲಿಯೇ ವೇದವಿದರಾಗಿದ್ದರೆ, ರಾಮಕೃಷ್ಣರು ಪ್ರಾಥಮಿಕ ಕೆಲವು ತರಗತಿಗಳನ್ನು ಕಂಡದ್ದು ಬಿಟ್ಟರೆ ಗ್ರಂಥಪಂಥಗಳನ್ನು ಓದಿದವರೇ ಆಗಿರಲಿಲ್ಲ! ಲೋಕಾನುಭವ ಮತ್ತು ಸ್ವಂತ ಸಾಧನೆಯೇ ಪರಮಹಂಸರ ಬಂಡವಾಳ. ಹೀಗಿದ್ದೂ ವೇದೋಪನಿಷತ್ತು ದ್ವೈತಾದ್ವೈತಗಳನ್ನು ರಾಮಕೃಷ್ಣರು ಸರಳವಾಗಿ ಸಮರ್ಥವಾಗಿಯೇ ಬೋಧಿಸಿದ್ದರು. ... ಶ್ರೀಶಂಕರರು ಸಾಕ್ಷಾತ್ ಶಂಕರನ ಅವತಾರವೆನಿಸಿಕೊಂಡರೆ ಶ್ರೀರಾಮಕೃಷ್ಣರು ಅವತಾರವರಿಷ್ಠರೆನಿಸಿಕೊಂಡರು! ಒಬ್ಬರು ವೇದಗಳನ್ನು ವಚನವಾಗಿಸಿದರೆ ಇನ್ನೊಬ್ಬರ ವಚನಗಳೆಲ್ಲವೂ ವೇದವಾದವು! ಇದು ಹೇಗೆ ಸಾಧ್ಯ? ಹೇಗೆ ಸಾಧ್ಯ ? ಅನ್ನಿಸಿದರೂ – ಲೋಕದಲ್ಲಿ ನವನೀತದ ಕೊರತೆಯಾದಾಗಲೆಲ್ಲ ದೈವಾಂಶ ಸಂಭೂತ ಅಸಾಧ್ಯಗಳು ಎಂಬ ಅಘಟಿತ ಘಟನೆಗಳು ಸಂಭವಿಸುತ್ತವೆ, ಅಸಾಧ್ಯಗಳೂ ಸುಸಾಧ್ಯವಾಗುತ್ತವೆ ಎಂದುಕೊಂಡು – ಸುಮ್ಮನಿರಬಹುದು !

ಮಹಾನ್ ವ್ಯಕ್ತಿಗಳೆಲ್ಲರೂ ಮಾತೃಭಕ್ತರಾಗಿರುವುದು ಸೋಜಿಗವೇನಲ್ಲ. ಶ್ರೀ ಶಂಕರಾಚಾರ್ಯರೂ ತಮ್ಮ ತಾಯಿ ಆರ್ಯಾಂಬೆಯನ್ನು ಅನ್ಯಾದೃಶವಾಗಿ ಗೌರವಿಸಿದ – ತಾಯಿಯ ಮಮತೆಗೆ ಪ್ರತಿಸ್ಪಂದಿಸಿದ ಆದರ್ಶವು ನಮ್ಮ ಮುಂದಿದೆ. ತಾಯಿಯನ್ನು ಪೂರ್ತಿಯಾಗಿ ಒಪ್ಪಿಸಿಯೇ ಸಂನ್ಯಾಸ ಸ್ವೀಕರಿಸಿದ್ದ ಆಚಾರ್ಯರು ಆಕೆಯ ಮರಣವು ಸನ್ನಿಹಿತವಾದಾಗ ಅಂತಃಶಕ್ತಿಯಿಂದಲೇ ಅದನ್ನು ಅರಿತುಕೊಂಡರು. ಆಗ ತಮ್ಮ ಶಿಷ್ಯರೊಂದಿಗೆ ಶೃಂಗಗಿರಿಯಲ್ಲಿದ್ದ ಶಂಕರಾಚಾರ್ಯರು ತಾಯಿಯು ವ್ಯಾಧಿಪೀಡಿತಳಾಗಿರುವುದನ್ನು ಯೋಗಶಕ್ತಿಯಿಂದಲೇ ತಿಳಿದುಕೊಂಡು ತಕ್ಷಣ ತಾಯಿಯನ್ನು ನೋಡಲು ಧಾವಿಸುತ್ತಾರೆ. ಕಾಲಡಿಯಲ್ಲಿದ್ದ ಅಮ್ಮನ ದರ್ಶನ ಮಾಡುತ್ತಾರೆ.

''ಅಮ್ಮಾ, ನಾನು ಶಂಕರ – ಬಂದಿದ್ದೇನೆ. ನಿನಗಾಗಿ ಏನು ಮಾಡಲಿ? ಹೇಳಮ್ಮಾ...'' ಎಂದು ಮರಣಶಯ್ಯೆಯಲ್ಲಿದ್ದ ತಾಯಿಯನ್ನು ಸಂತೈಸುತ್ತಾರೆ. ಆ ತಾಯಿಯಾದರೋ ಎಂತಹ ಪುಣ್ಯಾತ್ಮಳು! ''ಈ ನನ್ನ ಅಂತ್ಯಕಾಲದಲ್ಲಿ ನೀನು ಕುಶಲನಾಗಿರುವುದನ್ನು ಕಾಣುವಂತಾಯಿತಲ್ಲ? ಅದೇ ನನ್ನ ಭಾಗ್ಯ ಮಗೂ. ಇನ್ನು ನನಗೇನು ಬೇಕು? ಮುಪ್ಪಿನಿಂದ ಜರ್ಜರಿತವಾಗಿರುವ ಈ ದೇಹವನ್ನು ಇನ್ನೂ ಧರಿಸಲು ನನಗೆ ಶಕ್ತಿಯಿಲ್ಲ. ನನ್ನ ಮಗನಾದ ನೀನು ಶಾಸ್ತ್ರವಿಹಿತವಾದ ಮಾರ್ಗದಲ್ಲಿ ಈ ದೇಹವನ್ನು ಸಂಸ್ಕರಿಸಿ ನಾನು ಪುಣ್ಯಲೋಕವನ್ನು ಸೇರುವಂತೆ ಮಾಡು'' ಎಂದು ಆರ್ಯಾಂಬೆಯು ಕ್ಷೀಣಧ್ವನಿಯಲ್ಲಿ ಹೇಳುತ್ತಾಳೆ. ಆಗ ಆಚಾರ್ಯರು ತಮ್ಮ ತಾಯಿಗೆ ಪರತತ್ತ್ವವನ್ನು ಉಪದೇಶಿಸಿದರು. ಆದರೆ ಆಚಾರ್ಯರ ನಿರ್ಗುಣ ಬ್ರಹ್ಮತತ್ತ್ವದಲ್ಲಿ ಆಕೆಯ ಮನಸ್ಸು ನಿಲ್ಲಲಿಲ್ಲ. ''ಮಗೂ, ಕುಲಗೋತ್ರವಿಲ್ಲದ ಈ ಅದ್ವಿತೀಯ ನಿರ್ಗುಣ ತತ್ತ್ವವು ನನ್ನ ಅರಿವಿಗೆ ಮೀರಿದುದು. ಆದ್ದರಿಂದ ಸಗುಣನಾದ ದೇವತೆಯ ಕುರಿತು ನನಗೆ ತಿಳಿಹೇಳು..'' ಎಂದು ಕೇಳಿಕೊಂಡಳು. ಆಗ ಆಚಾರ್ಯರು ಭುಜಂಗೋಪವೃತ್ತಗಳಿಂದ ಭಕ್ತಿಪೂರ್ವಕವಾಗಿ ಸ್ತುತಿಸಲು ಆ ದಯಾಮಯನಾದ ಶಿವನು ತ್ರಿಶೂಲ, ಧನುಸ್ಸುಗಳಿಂದ ಕೂಡಿದ ದೂತರನ್ನು ಕಳುಹಿಸಿಕೊಟ್ಟನು. ಆ ದೃಶ್ಯವನ್ನು ನೋಡಿ ಬೆದರಿದ ಆರ್ಯಾಂಬೆಯು ''ಇವರೊಂದಿಗೆ ನಾನು ಹೋಗಲಾರೆ..'' ಎಂದು ನಡುಗಿದಳು. ಆಗ ಆಚಾರ್ಯರು ಶಿವದೂತರನ್ನು ಹಿಂದಕ್ಕೆ ಕಳಿಸಿ ಮಹಾವಿಷ್ಣುವನ್ನು ಭಕ್ತಿಯಿಂದ ಸ್ತುತಿಸಿದರು. ಮಹಾವಿಷ್ಣುವು ಪ್ರಸನ್ನನಾಗಿ ಆಚಾರ್ಯರ ಪ್ರಾರ್ಥನೆಯಂತೆ ಆರ್ಯಾಂಬೆಯ ಹೃದಯದಲ್ಲಿ

ನೆಲೆಯೂರಿದನು. ಆರ್ಯಾಂಬೆಯು ನಿರ್ಭಯದಿಂದ ತನ್ನ ದೇಹವನ್ನು ತ್ಯಜಿಸಿದಳು.

ಅನಂತರ ತಾಯಿಯ ಅಂತ್ಯಕ್ರಿಯೆಯನ್ನೂ ಶಂಕರರೇ ನೆರವೇರಿಸಿದರು. ಸಂನ್ಯಾಸಿಯಾಗಿ ಸರ್ವಸಂಗ ಪರಿತ್ಯಾಗಿಯಾದವನಿಗೆ ಉತ್ತರಕ್ರಿಯೆ ಮಾಡುವ ಅಧಿಕಾರವಿಲ್ಲ ಎಂದು ಅಡ್ಡಿ ಮಾಡಿದ ಬಂಧುಗಳನ್ನು ತಿರಸ್ಕರಿಸಿದ ಶಂಕರರು ಏಕಾಂಗಿಯಾಗಿ, ತಾವೇ – ತಮ್ಮ ತಾಯಿಯ ಅಂತ್ಯಕ್ರಿಯೆಗಳನ್ನು ಶುದ್ಧಚಿತ್ತದಿಂದ ನೆರವೇರಿಸುತ್ತಾರೆ. ಯಾವುದೇ ಇತಿಹಾಸವು ವರ್ಷವುರುಳಿದಂತೆ ಪುರಾಣವಾದಾಗ, ಅದರಲ್ಲಿ ಅಲ್ಲಲ್ಲಿ ನಾಟಕೀಯತೆ–ಅತಿಶಯೋಕ್ತಿಯ ಸ್ಪರ್ಶವಾಗುವುದೂ ಸಹಜ. ಆದರೆ ಅಧ್ಯಾಯಿಗೆ ಯಾವುದೇ ಪೂರ್ವಾಗ್ರಹವಿಲ್ಲದಿದ್ದರೆ ಮೂಲ ಕತೆಯನ್ನು – ಕತೆಯ ಭಾವವನ್ನು ಗ್ರಹಿಸುವುದು ಸಾಧ್ಯವಾಗುತ್ತದೆ.

ಸಂನ್ಯಾಸಿಗಳು ಮಾತೃಸಂಸ್ಕಾರವನ್ನು ಮಾಡುವುದು ಅಶಾಸ್ತ್ರೀಯವಾದರೂ ಸಂನ್ಯಾಸಪೂರ್ವದ ೮ರ ಎಳೆಯ ಹರೆಯದಲ್ಲಿ ತಾಯಿಗೆ ಕೊಟ್ಟ ಮಾತಿನಂತೆ, ಶ್ರೀ ಶಂಕರರು ತಮ್ಮ ತಾಯಿಯ ಅಂತ್ಯಕಾಲದಲ್ಲಿ ಆಕೆಯ ಜೊತೆಗಿದ್ದು, ಮಾತೃಭಕ್ತಿಗಿಂತ ಶಾಸ್ತ್ರವು ಮೇಲಲ್ಲ ಎಂಬುದನ್ನು ನಿರೂಪಿಸಿದರು. ಜ್ಞಾನವು ಕೊಡುವ ಶಕ್ತಿ ಇದು; ಭಾವಪ್ರಪಂಚದಲ್ಲಿ ನಿಯಮಗಳನ್ನು ಪಳಗಿಸಿಕೊಳ್ಳುವ ಪರಾಪರ ವಿವೇಚನೆ, ವಿವೇಕ..! ಇದೇ ಜ್ಞಾನಿಯ ಸಂಪತ್ತು.


ಜೀವಾತ್ಮಕ್ಕೂ ಪರಮಾತ್ಮಕ್ಕೂ ಭೇದವಿಲ್ಲ – ಚಿದ್ವಸ್ತು ಚೈತನ್ಯವು ಒಂದೇ; ಮನುಷ್ಯನು ಸದಾ ವಿಹಿತವಾದುದನ್ನೇ ಆಚರಿಸುವುದರಿಂದಲೂ ನಿಷಿದ್ಧವಾದುದನ್ನು ತ್ಯಜಿಸುವುದರಿಂದಲೂ ತನಗೆ ಬೇಕಾದ ಪುರುಷಾರ್ಥವನ್ನು ಪಡೆಯುತ್ತಾನೆ..ಕರ್ಮಗಳಲ್ಲಿಯೇ ತೊಡಗಿಕೊಂಡಿರುವ ಕರ್ಮನಿಷ್ಠರಿಗೆ ದೇಹವೇ ಆತ್ಮವೆಂಬ ಬುದ್ಧಿಯು ಮೂಡುತ್ತದೆ; ಇದರಿಂದ ಉನ್ನತಿಗೆ ತೊಡಕಾಗುವುದು; ಪರಮಾತ್ಮನೇ ನಾನು ಎಂಬ ವಿವೇಚನೆಯಿಂದ – ಆತ್ಮಸ್ಥೈರ್ಯದಿಂದ ಧ್ಯಾನಿಸುವುದರಿಂದಲೇ ಮುಕ್ತಿ... ಎಂಬುದನ್ನು ಶಂಕರಾಚಾರ್ಯರೂ ರಾಮಕೃಷ್ಣರೂ ಬದುಕಿ ತೋರಿದರು. ಆದ್ದರಿಂದಲೇ ಇವರ ವಚನಗಳು ಆದೇಶಗಳಾದವು; ಮಹಾವಾಕ್ಯಗಳಾದವು; ಆಧುನಿಕ ಶ್ರುತಿ ಸ್ಮೃತಿಗಳಾದವು! ಇಂತಹ ಮಹಾತ್ಮರ ನಡೆನುಡಿಗಳು ಸಾಂಸಾರಿಕರಿಗೂ ಪ್ರೇರಣೆ ನೀಡಬಲ್ಲವು.

ಮಾತಾಪಿತರು ಬದುಕಿರುವಾಗ ಅವರ ಸೇವೆ ಮತ್ತು ಸತ್ತನಂತರ ಅವರ ಶ್ರಾದ್ಧ – ಇವೆರಡೂ ಶ್ರದ್ಧೆ ಮತ್ತು ಕೃತಜ್ಞತೆಯ ಕರ್ಮಗಳು. ಇವು ಮನುಷ್ಯಮಾತ್ರರ ಕರ್ತವ್ಯಗಳು. ಮಹಾಪುರುಷರನ್ನು ಅಧ್ಯಯನ ಮಾಡಿದರೆ ಅವರ ಬದುಕಿನ ಉತ್ತಮ ವಿಷಯಗಳು ಪ್ರೇರಣೆ ನೀಡುತ್ತವೆ. ಪ್ರಪಂಚದ ಯಾವ ಜ್ಞಾನಿಯೂ ಪ್ರಾಪಂಚಿಕ ಕರ್ತವ್ಯದಿಂದ ವಿಮುಖವಾಗಿಲ್ಲ. ಕರ್ತವ್ಯವೆಂದರೆ ತಲೆತಗ್ಗಿಸಿ ಆಚರಿಸುವ ಕೃತಜ್ಞತೆ. ಗಮ್ಯವನ್ನು ತಲುಪಿಸಲಾಗದ – ನಡುಹಾದಿಯವರೆಗೆ ಮಾತ್ರ ತಲುಪಿಸಬಲ್ಲ ಕರ್ಮ ಕರ್ಮಾತಹಾದಿಗಿಂತ ಜೀವಭಾವದ ಕರ್ತವ್ಯ ಸ್ಪಂದನೆಯೇ ಶ್ರೇಷ್ಠ; ಪೂರ್ಣತೆಯತ್ತ ಕರೆದೊಯ್ಯುವ ಜ್ಞಾನಮಾರ್ಗವು ಪರಮ ಶ್ರೇಷ್ಠ.

ಆದರೆ ವಿಕಾಸದ (!) ಹಾದಿಯಲ್ಲಿ ದಾಪುಗಾಲಿಡುತ್ತಿರುವ ಈ ಉದ್ಧಟ ಹಕ್ಕಿನ ಯುಗದಲ್ಲಿ – ಕರ್ತವ್ಯ ಎಂಬ ಮಾತೇ ಬೆಲೆ ಕಳೆದುಕೊಳ್ಳುತ್ತಿರುವ ನಾಣ್ಯವಾಗುತ್ತಿದೆ. ಜ್ಞಾನದ ವ್ಯಾಖ್ಯೆಯು ಸೀಮಿತಗೊಂಡಿದೆ. ಹೆತ್ತವರು ಬದುಕಿರುವಾಗ – ತೋರಿಕೆಯ ಸೇವೆಯ ಪ್ರದರ್ಶನ, ಫೊಟೋಗ್ರಾಫರ್‌ನ ಸಮ್ಮುಖದಲ್ಲಿ ಅಮ್ಮನಿಗೆ ನಮಸ್ಕರಿಸುವ ಕೋಲಾಹಲ, ಸೆಲ್ಫೀಗಳು, ಸತ್ತನಂತರ ವಿದ್ಯುತ್ ಚಿತೆಯಲ್ಲಿ ವಿಲೇವಾರಿ, ಅದ್ದೂರಿಯ ಶ್ರಾದ್ಧಗಳು ನಡೆಯುತ್ತಲೇ ಇವೆ! ಅದ್ದೂರಿಯೇ ಮುಂದೆ ಮುಂದೆ; ಭಾವ? ನಾಸ್ತಿ! ಯಾವುದೇ ಅದ್ದೂರಿತನವು ಏಕಾಗ್ರತೆಯನ್ನು ಉಳಿಸಗೊಡುವುದಿಲ್ಲ; ಏಕಾಗ್ರಚಿತ್ತದಿಂದ ನಡೆಸದ ಯಾವುದೇ ಕರ್ಮಗಳಿಗೆ ಫಲವಿಲ್ಲ. ನಮ್ಮನ್ನು ಬಹಿರ್ಮುಖಿಗೊಳಿಸುವ ಯಾವುದೇ ನಿಷ್ಫಲ ಕರ್ಮಗಳು – ಸದ್ಭಾವಗಳ ವಿಡಂಬನೆಯಷ್ಟೇ ಆಗಬಲ್ಲದು. ಮಾತಾಪಿತರಲ್ಲಿ ತೋರುವ ಯಾವುದೇ ವರ್ತನೆಯು ಶುದ್ಧ ಭಾವದ ಪ್ರತೀಕವಾಗಿರುವುದು ಅತಿ ಅಗತ್ಯ. ಭಾವಭಕ್ತಿಯಿಲ್ಲದ ಕರ್ಮಗಳೆಲ್ಲವೂ ವ್ಯರ್ಥವೇ. ಮಾತಾಪಿತರ ಸೇವೆಯು ಯಾರನ್ನೋ ಮೆಚ್ಚಿಸುವ ಕೆಲಸವಲ್ಲ. ನಮ್ಮ ಸ್ವಾತ್ಮಕ್ಕೆ ವಿಧೇಯವಾಗುವ ಕರ್ಮ. ನಮ್ಮ ಯಾವುದೇ ಕರ್ಮಗಳು ಬಂಧನ ಆಗಬಾರದು; ಬಿಡುಗಡೆಯ ಹಾದಿಯನ್ನು ತೋರಬೇಕು. ಭಯ ಬಂಧನ ಶೋಕಿ ತೋರಿಕೆಗಳ ನಡುವೆ ಯಾವುದೇ ಕರ್ಮಾಚರಣೆಯು ನರಳುವಂತಾಗಬಾರದು. ಭಕ್ತಿ ಶ್ರದ್ಧೆಯಿಲ್ಲದ – ತಂತ್ರ, ಮಂತ್ರಗಳು ವ್ಯರ್ಥ. ನಮ್ಮ ಪಿತೃಗಳು ಭಕ್ತಿ–ಭಾವದಿಂದಲೇ ಕಟ್ಟಿದ ಈ ಲೋಕದಲ್ಲಿ ಸದ್ಭಾವಗಳು ಎಂದಿಗೂ ಬತ್ತಬಾರದು. ನಮ್ಮ ಯಾವುದೇ ಕರ್ಮದಿಂದ ಅಜ್ಞಾನದ ಪರಿಧಿಯು ವಿಸ್ತರಿಸುವಂತಾಗಬಾರದು.

ಪಿತೃಗಳು ಎಂದಿಗೂ ಪರರಲ್ಲ ; ಶ್ರದ್ಧೆಯು ಯಾವತ್ತೂ ಅಪರವೂ ಅಲ್ಲ. ನಮ್ಮೊಳಗೇ ಇರುವವರನ್ನು ವೈದಿಕ ಕರ್ಮಾಂಗದ – ವಾರ ತಿಥಿ ಮಾಸ ಕುತಪ ಕಾಲದ ಹೊರತಾಗಿಯೂ ನೋಡಬಲ್ಲೆವಾದರೆ – ವರ್ಷಕ್ಕೊಮ್ಮೆ ನಡೆಸುವ ಶ್ರಾದ್ಧ, ತರ್ಪಣದ ಕ್ರಿಯೆಯು ಹೆಚ್ಚು ಅರ್ಥಪೂರ್ಣವಾದೀತು. ಅರ್ಥವಾಗದೆ ನಡೆಸುವ ಯಾವುದೇ ಅರ್ಥವಿಲ್ಲದ ಕರ್ಮಗಳು ವ್ಯರ್ಥ. ವೇದೋಕ್ತ ಮಂತ್ರಗಳನ್ನು ಅರ್ಥೈಸಿಕೊಂಡಾಗ ಸಮಗ್ರ ಕರ್ಮಾಂಗವು ಭಾವ ಪ್ರಧಾನವಾದುದು ಎಂಬ ಅನುಭವವೂ ಆಗುತ್ತದೆ.

ಇಂತಹ ಭಾವಬದುಕಿನಲ್ಲಿ – ಆಕಾಶರೂಪೀ ತಂದೆ, ಭೂಮಿ ರೂಪೀ ತಾಯಿಯನ್ನು ಸ್ಮರಿಸಿಕೊಳ್ಳಲು ಅಮಾವಾಸ್ಯೆ ಹುಣ್ಣಿಮೆಗಳನ್ನು ಕಾಯಬೇಕೆ ? ಜೀವಿಗಳ ಬದುಕಿನ ಯಾತ್ರೆಯ ಸರಪಣಿ ಓಟದಲ್ಲಿ ತಾವೂ ಭಾಗವಾಗಿ, ಸಂತಾನಗಳೂ ಭಾಗವಹಿಸುವಂತೆ ಮಾಡಿದ ಪಿತೃಗಳು – ಈ ಸೃಷ್ಟಿಯ ಚಾಲಕರು. ಬದುಕಿ ಬದುಕಿಸುವವರು. ನಿಸ್ಸಂದೇಹವಾಗಿ – ಪ್ರಾತಃಸ್ಮರಣೀಯರು; ನಿತ್ಯವಂದ್ಯರು.



ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)



ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೨೧



೧೯೧೨ನೇ ವರ್ಷವು ತಂದ ಮೊದಲ ಆಘಾತ ಮಹಾಕವಿ ಗಿರೀಶ್ ಚಂದ್ರ ಘೋಷರ ಮೃತ್ಯು. ಭಕ್ತಿ, ವಿಶ್ವಾಸಗಳ ಸಾಕಾರ ಮೂರ್ತಿಯೇ ಆಗಿದ್ದ ಈ ಪುರುಷಶ್ರೇಷ್ಠನು ಫೆಬ್ರವರಿ ೮ರಂದು ಮಧ್ಯರಾತ್ರಿ ತನ್ನ ಪಾರ್ಥಿವ ಶರೀರವನ್ನು ತ್ಯಾಗ ಮಾಡಿ, ತನ್ನ ಗುರುವಿನ ಪಾದಪದ್ಮಗಳಲ್ಲಿ ಚಿರಶಾಂತಿಮಯ ಆಶ್ರಯವನ್ನು ಪಡೆದಿದ್ದರು. ಆರು ತಿಂಗಳಿನಿಂದಲೂ ಆಸ್ತಮಾದಿಂದ ಕಷ್ಟ ಪಡುತ್ತಿದ್ದರು. ಕೊನೆಯ ದಿನ ಸಂಜೆ ಬಹಳ ತೊಂದರೆಯಿಂದಾಗಿ ಪ್ರಜ್ಞೆ ತಪ್ಪಿದ್ದಾಗ ''ನೀನು ಬಂದಿರುವುದೇ ಆದರೆ ನನ್ನ ಅಮಲನ್ನಿಳಿಸು. ಜೈ ರಾಮಕೃಷ್ಣ, ಹೊರಡೋಣ'' ಎಂದಿದ್ದರು. ಇದೇ ಅವರ ಕೊನೆಯ ಸುಸ್ಪಷ್ಟ ಮಾತಾಗಿತ್ತು. ಹಿಮಾಲಯದಲ್ಲಿದ್ದ ವಿರಜಾನಂದರ ಮನದಲ್ಲಿ ಗಿರೀಶರ ಅನೇಕ ನೆನಪುಗಳು ತೇಲಿ ಬಂದವು:

''ಗಿರೀಶ್ ಬಾಬು ಮತ್ತು ನಿರಂಜನ್ ಮಹಾರಾಜರೊಂದಿಗೆ ನಾನೊಮ್ಮೆ ಶ್ರೀಮಾತೆಯವರ ದರ್ಶನಕ್ಕೆ ಹೋಗಿದ್ದೆ. ಯಾವುದೋ ಒಂದು ಕಾರಣದಿಂದ ಮತ್ತು ನಿರಂಜನ ಮಹಾರಾಜರ ಪ್ರೇರಣೆಯಿಂದ ಗಿರೀಶ್ ಬಾಬುವಿಗೆ ಮಹಾ ವೈರಾಗ್ಯ ಉಂಟಾಯಿತು. ಅವರು ಸಂಸಾರತ್ಯಾಗ ಮಾಡುವ ದೃಢ ಸಂಕಲ್ಪ ಮಾಡಿದರು. ಆದರೆ ನಿರಂಜನ ಮಹಾರಾಜರು ಅವರಿಗೆ ಶ್ರೀಮಾತೆಯವರ ಅನುಮತಿಯನ್ನು ಪಡೆಯಬೇಕೆಂದು ತಿಳಿಸಿದರು. ಅದಕ್ಕಾಗಿಯೇ ಅವರು ಜಯರಾಂಬಾಟಿಗೆ ಬಂದದ್ದರು. ನಿರಂಜನ ಮಹಾರಾಜರನ್ನು ಗಿರೀಶ್ ಬಾಬುಗಳು ತುಂಬ ಗೌರವಿಸುತ್ತಿದ್ದುದರಿಂದ, ಶ್ರೀಮಾತೆಯವರು ಸಂನ್ಯಾಸ ತೆಗೆದುಕೊಳ್ಳಲು ಅನುಮತಿಯಿತ್ತರೆ ಅದನ್ನು ನಿರಂಜನರಿಂದ ತೆಗೆದುಕೊಳ್ಳಬೇಕೆಂದಿದ್ದರು. ಅವರಾಗ ಕುಡಿಯುವುದನ್ನು ಬಿಟ್ಟುಬಿಟ್ಟಿದ್ದರು ಮತ್ತು ಆಹಾರ ವಿಹಾರಗಳಲ್ಲಿ ತುಂಬ ಉದಾಸೀನರಾಗಿದ್ದರು.

''ಗಿರೀಶರು ಸುಖವಾಗಿ ಸ್ವ-ಇಚ್ಛೆಯಲ್ಲಿ ಬೆಳೆದವರು; ದಿನವೂ ಅವರಿಗೆ ಒಂದು ಚಿಕ್ಕ ಡಬರಿ (೧೦೦-೧೫೦) ಪಾನ್, ಮೀನು ಮತ್ತು ತಂಬಾಕು ಇರಲೇಬೇಕೆಂಬುದು ಶ್ರೀಮಾತೆಯವರಿಗೆ ತಿಳಿದಿತ್ತು. ಹಳ್ಳಿಗೆ ಬಂದಾಗ ಅವರಿಗೆ ಕಷ್ಟವಾಗದಿರಲಿ ಎಂದು ಶ್ರೀಮಾತೆಯವರು ಅವರಿಗಾಗಿ ಈ ಎಲ್ಲವನ್ನೂ ವ್ಯವಸ್ಥೆ ಮಾಡಿದ್ದರು. ಗಿರೀಶ್ ಬಾಬುಗಳು ಹಳ್ಳಿಯ ರೈತಾಪಿಗಳೊಂದಿಗೆ ತುಂಬ ಸರಸವಾಗಿ ಬೆರೆತು ನಕ್ಕು ನಗಿಸುತ್ತಿದ್ದರು.

''ಒಂದು ಸಂಜೆ ಗಿರೀಶ ಬಾಬುಗಳು ಶ್ರೀಮಾತೆಯವರಿಗೆ ಪ್ರಣಾಮ ಸಲ್ಲಿಸಲು ಹೋದರು, ನಾವೂ ಜೊತೆಯಲ್ಲಿದ್ದೆವು. ಅವರು ತಾಯಿಯವರಲ್ಲಿ ಸಂನ್ಯಾಸ ತೆಗೆದುಕೊಳ್ಳಲು ಅನುಮತಿಯನ್ನು ಬೇಡಿದರು. ಶ್ರೀಮಾತೆಯವರಾದರೋ, ಏನು ಮಾಡಿದರೂ ರಾಜಿಯಾಗಲಿಲ್ಲ. ವಿಧವಿಧವಾಗಿ ತಿಳಿಯಹೇಳಿದರು. ಶ್ರೀರಾಮಕೃಷ್ಣರು ಇವರನ್ನು ಭೈರವ, ಶಿವನ ಭೂತಗಣದವ ಎಂದೆಲ್ಲ ಹೇಳುತ್ತಿದ್ದರು; ಹಠಾತ್ತಾಗಿ ಅವರೀಗ ಅದೇ ರೂಪವನ್ನು ತಾಳಿದಂತಾದರು. ಶ್ರೀಮಾತೆಯವರು ಅವರಿಗೆ ಯಾವುದೇ ರೀತಿಯ ಆಧ್ಯಾತ್ಮಿಕ ಉನ್ನತಿಯನ್ನು ನೀಡಲಿಲ್ಲ ಎಂಬ ಕಾರಣದಿಂದ ಉತ್ತೇಜಿತರಾಗಿ, ಹಿಂದೂಮುಂದೂ ನೋಡದೆ ಕಟುವಾಕ್ಯಗಳಿಂದ ಅವರನ್ನು ನಿಂದಿಸಲಾರಂಭಿಸಿದರು. ''ನೀವು ನನಗೆ

ಏನನ್ನಾದರೂ ಮಾಡಲೇಬೇಕು, ಇಲ್ಲದಿದ್ದರೆ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ'' ಎಂದು ಶ್ರೀಮಾತೆಯವರನ್ನು ಪೀಡಿಸುತ್ತ ಹಠ ಹಿಡಿದರು. ಅವರ ರೌದ್ರಾವತಾರವನ್ನು ಕಂಡು ಹೆದರಿ ಶ್ರೀಮಾತೆಯವರು ಕೊಠಡಿಯ ಮೂಲೆಯಲ್ಲಿ ಸ್ತಂಭಿತರಾಗಿ ನಿಂತಿದ್ದರು. ಇಷ್ಟಾದರೂ ತಾಯಿ ಮಣಿಯಲಿಲ್ಲ. ತುಂಬ ಪ್ರೀತಿಯಿಂದ ಮೃದು ಸ್ವರದಲ್ಲಿ, ಆದರೂ ದೃಢವಾಗಿ ಗಿರೀಶರಿಗೆ ಸಾಂತ್ವನ ನೀಡುತ್ತ, ತುಂಬು ಹೃದಯದಿಂದ ಆಶೀರ್ವಾದ ವರ್ಷಿಸುತ್ತ, ಶ್ರೀರಾಮಕೃಷ್ಣರಲ್ಲಿ ಅವರಿಗಾಗಿ ಪ್ರಾರ್ಥಿಸುವುದಾಗಿ ಆಶ್ವಾಸನೆ ಇತ್ತರು. ನಂತರವೇ ಗಿರೀಶರು ಮಗುವಿನಂತೆ ಶಾಂತರಾಗಿ ಅಲ್ಲಿಂದ ಹೊರಬಂದರು. ತಾಯಿಯನ್ನೇ ನೆಚ್ಚಿಕೊಂಡ ಚಿಕ್ಕ ಬಾಲಕನಂತೆ ಅವರ ಭಾವವಿತ್ತು. ಕೆಲವು ದಿನಗಳ ನಂತರ ನಾವು ಕೊಲ್ಕತ್ತೆಗೆ ಹಿಂತಿರುಗಿದೆವು.''

೧೯೧೩ರಲ್ಲಿ ಸ್ವಾಮೀಜಿಯವರ ಜೀವನ ಚರಿತ್ರೆಯ ದ್ವಿತೀಯ ಸಂಪುಟ ಅಚ್ಚಾಗಿತ್ತು. ಸತತವಾಗಿ ಏಳು ವರ್ಷಗಳು ಮಾಯಾವತಿಯಲ್ಲಿ ವಿವಿಧ ಜವಾಬ್ದಾರಿಯುತ ಕೆಲಸಗಳಲ್ಲಿ ನಿರತರಾಗಿದ್ದುದರಿಂದ ಸ್ವಾಮಿ ವಿರಜಾನಂದರ ಮನಸ್ಸು, ಶರೀರಗಳಲ್ಲಿ ಬಳಲಿಕೆ ಕಂಡುಬಂತು. ಕೆಲಕಾಲ ವಿರಾಮ ಪಡೆದು ಸಂಪೂರ್ಣವಾಗಿ ಸಾಧನೆಯಲ್ಲಿ ಮುಳುಗಿರಲು ಅವರ ಮನಸ್ಸು ತವಕಪಟ್ಟಿತು. ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿ ಅವರು ಬೇಲೂರು ಮಠಕ್ಕೆ ಪತ್ರ ಬರೆದರು. ಆದರೆ ಹಿರಿಯರು ಒಪ್ಪಿಗೆ ನೀಡಲಿಲ್ಲ. ಸ್ವಾಮಿ ವಿರಜಾನಂದರೂ ಬಿಡುವವರಲ್ಲ! ಮಾಯಾವತಿಯ ಕೆಲಸಗಳಿಂದ ತಮಗೆ ಬಿಡುವು ಮಾಡಿ ಕೊಡಬೇಕೆಂದು ಕೇಳಿಕೊಂಡು ಮತ್ತೆ ಮತ್ತೆ ಪತ್ರ ಬರೆದರು. ಕೊನೆಗೆ ಶರತ್ ಮಹಾರಾಜರು, ''ನೀನೀಗ ಮಠಕ್ಕೆ ಬಾ. ಪರಸ್ಪರ ಮನಬಿಚ್ಚಿ ಮಾತಾಡಬಹುದು. ಪತ್ರದ ಮೂಲಕ ಅನೇಕ ಸಲ ತಪ್ಪು ತಿಳಿವಳಿಕೆ ಮೂಡುವ ಸಾಧ್ಯತೆ ಇದೆ'' ಎಂದು ಬರೆದರು. ಮಠಕ್ಕೆ ಹೋದರೆ ರಾಜಾ ಮಹಾರಾಜರ ಮತ್ತು ಶರತ್ ಮಹಾರಾಜರ ಆದೇಶವನ್ನು ಮೀರಲಾಗುವುದಿಲ್ಲವಾದ್ದರಿಂದ ರಜೆಯು ದೊರೆಯುವುದಿಲ್ಲವೆಂದು ಭಾವಿಸಿದ ಸ್ವಾಮಿ ವಿರಜಾನಂದರು ಪುನಃ ಅನುಮತಿ ಕೋರಿ ಪತ್ರ ಬರೆದರು. ಬೇರೆ ದಾರಿ ಕಾಣದೆ ಶರತ್ ಮಹಾರಾಜರು ಅವರ ಬೇಡಿಕೆಯನ್ನು ಒಂದು ಶರತ್ತಿನ ಮೇಲೆ ಮಂಜೂರು ಮಾಡಿದರು. ಅದೇನೆಂದರೆ, 'ಸ್ವಾಮೀಜಿಯವರ ಜೀವನ ಚರಿತ್ರೆಯ ದ್ವಿತೀಯ ಸಂಪುಟ ಪ್ರಕಟವಾಗಿದೆ. ಉಳಿದ ಸಂಪುಟಗಳನ್ನು ಪ್ರಕಟಗೊಳಿಸುವ ಜವಾಬ್ದಾರಿಯನ್ನು ವಿರಜಾನಂದರೇ ತೆಗೆದುಕೊಳ್ಳಬೇಕು' ಎಂದು. ವಿರಜಾನಂದರು ಅದಕ್ಕೆ ಸಮ್ಮತಿಸಿ, ''ನಾನು ಎಲ್ಲೇ ಇದ್ದರೂ ಆ ಕೆಲಸವನ್ನು ಪೂರೈಸಲು ಪ್ರಾಣವನ್ನೇ ಒತ್ತೆಯಿಟ್ಟು ಪ್ರಯತ್ನಿಸುವೆ'' ಎಂದು ತಿಳಿಸಿದರು.

ಮಾಯಾವತಿಯ ಕೆಲಸಗಳಿಂದ ಬಿಡುವು ಸಿಕ್ಕಿದಮೇಲೆ ಪರಿವ್ರಾಜಕರಾಗಿದ್ದು, ಭಿಕ್ಷಾವೃತ್ತಿಯನ್ನುವಲಂಬಿಸಿಕೊಂಡು ಏಕಾಂತದಲ್ಲಿ ಜಪಧ್ಯಾನ ಮಾಡಿಕೊಂಡಿರಬೇಕೆಂದು ವಿರಜಾನಂದರು ಆಶಿಸಿದ್ದರು. ಇದನ್ನು ತಿಳಿದ ಮದರ್ ಸೇವಿಯರ್ ತೀವ್ರವಾಗಿ ವಿರೋಧಿಸಿ, ಅವರ ಆ ವಯಸ್ಸಿನಲ್ಲಿ ಶರೀರವು ಅಷ್ಟು ಕಠೋರತೆಯನ್ನು ಸಹಿಸದೆ ದುರ್ಬಲವಾಗುವುದೆಂದೂ; ಯಾವುದಾದರೊಂದು ಅನುಕೂಲಕರವಾದ ನಿರ್ಜನ ಪ್ರದೇಶದಲ್ಲಿ ಕುಟೀರವನ್ನು ಕಟ್ಟಿಕೊಂಡು, ಸರಳವಾದ ಊಟದ ವ್ಯವಸ್ಥೆಯನ್ನು ಮಾಡಿಕೊಂಡು ತಪಸ್ಸನ್ನಾಚರಿಸುವುದೇ ಒಳ್ಳೆಯದೆಂದರು. ಅದಕ್ಕೆ ತಗಲುವ ಖರ್ಚನ್ನು ತಾವೇ ವಹಿಸಿಕೊಳ್ಳಲು ಸಹ ಮುಂದಾದರು. ಮಾತೃಹೃದಯದ ಮಿಸೆಸ್ ಸೇವಿಯರ್ ಅವರ ಈ ಬೇಡಿಕೆಯನ್ನು ತಳ್ಳಿಹಾಕಲು ವಿರಜಾನಂದರಿಗೆ ಸಾಧ್ಯವಾಗಲಿಲ್ಲ. ಮಾಯಾವತಿಗೆ ಆರು ಮೈಲುಗಳ ದೂರದಲ್ಲೊಂದು ಸ್ಥಳವಿರುವುದು ತಿಳಿದು ಬಂತು. ಅದು ನಿರ್ಜನವಾಗಿತ್ತು. ಅಲ್ಲದೆ, ನೀರಿನ ಅಭಾವವೂ ಇರಲಿಲ್ಲ. ವಿರಜಾನಂದರಿಗೆ ಆ ಸ್ಥಳವು ಇಷ್ಟವಾಯಿತು. ಆ ಜಾಗದ ಹೆಸರು ಲೋಧಾನ್ ಟುಕುರಾ. ಜಮೀನಿನ ಮಾಲಿಕನೊಬ್ಬ ಬಡ ಬ್ರಾಹ್ಮಣ. ಅವನೂ ಸಹ ಅದನ್ನು ಮಾರಲು ತುದಿಗಾಲಿನಲ್ಲಿ ನಿಂತಿದ್ದ. ಚಂಪಾವತ್‌ನ ತಹಸೀಲ್ದಾರನ ಸಹಾಯದಿಂದ ವಿರಜಾನಂದರು ಆ ಜಮೀನನ್ನು ಸುಲಭವಾಗಿ ಕೊಂಡುಕೊಂಡರು.

೧೩

ವಿರಜಾನಂದರು ಮಾಯಾವತಿಯ ಕೆಲಸಗಳಿಂದ ಬಿಡುವು ಪಡೆಯಬೇಕೆಂದು ಮಾಡಿರುವ ನಿರ್ಧಾರವನ್ನು ತಿಳಿದ ಹರಿ ಮಹಾರಾಜರು ಹೃಷಿಕೇಶದಿಂದ ಅವರಿಗೆ ಹೀಗೆ ಪತ್ರ ಬರೆದರು :

೯-೧೧-೧೯೧೩

ಪ್ರಿಯ ಕಾಳಿ,

ನಿನ್ನ ೧ನೇ ದಿನಾಂಕದ ಪೋಸ್ಟ್‌ಕಾರ್ಡ್ ಓದಿ ಬಹಳ ದುಃಖಗೊಂಡೆ... ನೀನು ಕೆಲಸದ ಒತ್ತಡಗಳಿಂದ ಬೇಸತ್ತು ನಿವೃತ್ತನಾಗುತ್ತಿರುವುದು ಖೇದದ ಸಂಗತಿ... ವಿಪರೀತ ಪರಿಶ್ರಮದಿಂದಾಗಿ ನಿನ್ನ ಮನೋಧರ್ಮವೂ ಬದಲಾಗಿದೆ ಎಂದು ನನಗನ್ನಿಸುತ್ತಿದೆ. ನೀನು ಹೀಗೆ ತಾಳ್ಮೆ ಕಳೆದುಕೊಳ್ಳುತ್ತಿರುವೆ ಎಂಬುದನ್ನು ಕಲ್ಪಿಸಿಕೊಳ್ಳಲೂ ನನಗೆ ಸಾಧ್ಯವಿಲ್ಲ. ನಿನ್ನ ಸಹನೆ ಅಸಾಧಾರಣವಾಗಿತ್ತು, ಮಾತ್ರವಲ್ಲದೆ ನಿನ್ನ ಮೃದು-ಮಧುರ ಸ್ವಭಾವವು ಹೇಗಿತ್ತೆಂದರೆ ಯಾರಿಗೂ ನಿನ್ನನ್ನು ಪ್ರೀತಿಸದೆ ಇರಲು ಸಾಧ್ಯವಿರಲಿಲ್ಲ. ನಿನ್ನಂತೆ ಇತರರ ಕೆಲಸ-ಕಾರ್ಯಗಳಲ್ಲಿ ನೆರವಾಗುವಂತಹ ಮತ್ತೊಬ್ಬರನ್ನು ನಾಕಾಣೆ. ಆಬಾಲವೃದ್ಧರಾದಿಯಾಗಿ ಎಲ್ಲರೂ ನಿನ್ನನ್ನು ಇಷ್ಟಪಡುತ್ತಿದ್ದವರೇ ಅಲ್ಲವೆ? ಎಲ್ಲ ಕಷ್ಟಗಳನ್ನು ಸಹಿಸಿಕೊಂಡು ನಿರಂತರವಾಗಿ ಸೇವಾನಿರತನಾಗಿರಲು ನೀನೆಂದೂ ಹಿಂಜರಿದವನಲ್ಲ ಎಂಬುದನ್ನು ನಾನು ಬಲ್ಲೆ. ಅಂತಹ ನೀನು ಈ ತರಹದ ಪೇಚಾಟಕ್ಕೆ ಸಿಲುಕಿರುವೆ ಎಂದರೆ ಖಂಡಿತವಾಗಿಯೂ ನಿನ್ನ ಸ್ನಾಯುಗಳು ಮೊದಲಿನಂತೆ ಸಶಕ್ತವಾಗಿಲ್ಲ ; ವಿಪರೀತ ಪರಿಶ್ರಮ, ಉದ್ವೇಗದಿಂದಾಗಿ ಅವುಗಳು ದುರ್ಬಲವಾಗಿವೆ.... ನಿನಗೀಗ ವಿಶ್ರಾಂತಿಯು ಅತ್ಯಗತ್ಯ ಎಂಬುದರಲ್ಲಿ ಎರಡು

ಮಾತಿಲ್ಲ. ನೀನು ಮಾಯಾವತಿಯಲ್ಲಿರದೆ, ಬೇಲೂರು ಮಠಕ್ಕೋ ಅಥವಾ ಮತ್ತಾವುದಾದರೂ ಸ್ಥಳಕ್ಕೋ ಹೋದರೆ ಹೆಚ್ಚು ಪ್ರಯೋಜನವಾಗುವುದೆಂಬುದೇ ನನ್ನ ಅನಿಸಿಕೆ. ನೀನು ಹಠಾತ್ತಾಗಿ ರಿಟೈರ್ ಆಗಬಾರದೆಂಬುದೇ ನನ್ನ ಹಾರೈಕೆ.

ಸ್ವಾಮೀಜಿಯವರ ಕೆಲಸದಲ್ಲಿ ಕಾರ್ಯೋನ್ಮುಖನಾಗುವುದಕ್ಕೂ, ತಪಶ್ಚರ್ಯೆಗೂ ವ್ಯತ್ಯಾಸವಿದೆಯೇನು? ನಾವು ಭಗವಂತನಿಗೆ ಆಪ್ತರಾಗಬೇಕು. ಅದನ್ನು ಬಿಟ್ಟು ಮತ್ತಿನ್ನಾವ ಸಾಧನೆಯನ್ನೂ ನಾಕಾಣೆ. ಹೇಗಾದರೂ ಸರಿ, ನಾವು ಭಗವಂತನಿಗೆ ಪ್ರಿಯರಾದರೆ ಸಾಕು! ಅದೇ ನಮ್ಮ ಸಾಧನೆಗಳ ಗುರಿಯಲ್ಲದೆ ಮತ್ತಿನ್ನೇನಾದರೂ ಇದೆಯೆ? ಆಶ್ರಮದ ಕೆಲಸಗಳನ್ನು ಮಾಡಲಾಗದಿದ್ದರೆ ಬೇಡ ಬಿಡು, ಆದರೆ ಒಬ್ಬಂಟಿಗನಾಗಿ ಉಳಿದ ಜೀವನವನ್ನು ಕಳೆಯುವೆನೆಂಬ ಮಾತು ಎಂತಹುದು? ಏನೋ ಯಾವಾಗಲಾದರೊಮ್ಮೆ ಏಕಾಕಿಯಾಗಿರಬೇಕೆನಿಸುತ್ತದೆ. ನಿಜ, ಹಾಗೆ ಮಾಡಲೂಬಹುದು. ಆದರೆ ಅದನ್ನೇ ಜೀವನದ ಉದ್ದೇಶವನ್ನಾಗಿ ಏಕೆ ಮಾಡಿಕೊಳ್ಳಬೇಕು? 'ಅವನಿಟ್ಟಂತೆ ನಾನಿರುವೆ' ಎಂಬ ಮನೋಭಾವವನ್ನು ಹೊಂದಿರುವುದು ಒಳ್ಳೆಯದಲ್ಲವೇನು? 'ಎಲ್ಲವೂ ಅವನಿಚ್ಛೆಯಂತೆ ಆಗುವುದೇ ಹೊರತು, ನಮ್ಮ ಇಚ್ಛೆಯೇನೂ ನಡೆಯುವುದಿಲ್ಲ' ಎನ್ನುವುದೇ ನನ್ನ ಇಡೀ ಜೀವನದ ಅನುಭವ. ಅದು ಹಾಗಿರಲಿ, ಜಗನ್ಮಾತೆಯು ನಿನಗೆ ಶೀಘ್ರವೇ ಉತ್ತಮ ಆರೋಗ್ಯವನ್ನು ನೀಡಲಿ, ಅದರಿಂದಲೇ ಸನ್ಮಂಗಳ... ನನ್ನ ಪ್ರೀತಿಯ ಆಶೀರ್ವಾದಗಳು ಸದಾ ನಿನ್ನೊಂದಿಗಿವೆ ಎಂಬುದನ್ನು ತಿಳಿ.

ಇತಿ ನಿನ್ನ,

ತುರೀಯಾನಂದ

ಬಾಣವನ್ನೆಸೆದಾಗಿದೆ, ಅದನ್ನು ಹಿಂದಕ್ಕೆ ಪಡೆಯಲು ಸಾಧ್ಯವೆ? ವಿರಜಾನಂದರು ಏಕಾಂತವಾಸ ಮಾಡಬೇಕೆಂದು ಆಗಲೇ ನಿರ್ಧರಿಸಿಯಾಗಿದೆ. ಆದ್ದರಿಂದ ಹರಿ ಮಹಾರಾಜರ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸುವಂತಹ ಮಾನಸಿಕ ಸ್ಥಿತಿಯಲ್ಲಿ ಅವರೀಗ ಇಲ್ಲ. ಆದರೆ ಮುಂದೆ ಅವರು ಜೀವನ್ಮುಕ್ತ ಮಹಾಪುರುಷರಾದ ತುರೀಯಾನಂದರ ಆದೇಶವನ್ನು ಅಕ್ಷರಶಃ ಪಾಲಿಸುವಂತಾಯಿತು. ತಮ್ಮ ಜೀವನದ ಕೊನೆಯ ೨೫ ವರ್ಷಗಳನ್ನು ವಿರಜಾನಂದರು ಸಂಪೂರ್ಣವಾಗಿ 'ಸ್ವಾಮೀಜಿಯವರ ಕಾರ್ಯ'ಕ್ಕೆ ಸಮರ್ಪಿಸಿದರು.

ಮಾಯಾವತಿಯ ಅದ್ವೈತ ಆಶ್ರಮದ ಅಧ್ಯಕ್ಷತೆಯನ್ನು ತೊರೆಯುವ ಮುನ್ನ ಮಿಸ್ ಮ್ಯಾಕ್ಲಿಯಾಡ್ (ಸ್ವಾಮೀಜಿಯವರ ಶಿಷ್ಯೆ ಜಯಾ) ಅಮೇರಿಕೆಯಿಂದ ಬರೆದ ಉತ್ಸಾಹಭರಿತ ಪತ್ರವು ವಿರಜಾನಂದರ ಕೈಸೇರಿತು. ಅದರಲ್ಲಿ ಅವರು ಹೀಗೆ ಬರೆದಿದ್ದರು:

ರಾಯ್ ಕ್ರಾಫ್ಟ್‌ರ್ಸ್,
ಈಸ್ಟ್ ಐನೋರ್, ನ್ಯೂಯಾರ್ಕ್
ನವೆಂ. ೨೬, ೧೯೧೩

ಪ್ರಿಯ ಸ್ವಾಮಿ,

...ಮಾಯಾವತಿಯ ಅವಿಶ್ರಾಂತ ಕೆಲಸಗಳಿಗೆ ನೀವು ಅದೆಷ್ಟು ನಿಷ್ಠೆಯಿಂದ ಹೆಗಲನ್ನಿತ್ತಿರುವಿರಿ! ಎರಡು ತಿಂಗಳ ಮಟ್ಟಿಗಾದರೂ ನೀವು ವಿಶ್ರಾಂತಿ ಪಡೆದು ಬಂದಿದ್ದರೆ ಚೆನ್ನಾಗಿರುತ್ತಿತ್ತು. ಇದರಿಂದ ನಿಮ್ಮ ಬಗ್ಗೆ, ನೀವು ಮಾಡುತ್ತಿರುವ ಕೆಲಸದ ಬಗ್ಗೆ ಹೊಸ ದೃಷ್ಟಿಕೋನ ಮೂಡುತ್ತಿತ್ತು. ನೀವೇ ನೋಡುತ್ತಿರುವಂತೆ ನಿರಂತರ ಬಳಕೆ ಮತ್ತು ಘರ್ಷಣೆಯಿಂದಾಗಿ ಲೋಹದ ವಸ್ತುಗಳು ನುಣುಪಾಗುವಂತೆ ನಿಮ್ಮ ಕೆಲಸಕಾರ್ಯಗಳೂ ಕೂಡ ದಿನದಿಂದ ದಿನಕ್ಕೆ ಉತ್ತಮಗೊಳ್ಳುತ್ತಿವೆ... ಪ್ರಬುದ್ಧ ಭಾರತವು ಈಗ ಬಹಳ ಚೆನ್ನಾಗಿ ಮೂಡಿಬರುತ್ತಿದೆ.

ಇನ್ನು ಹದಿನೈದು-ಇಪ್ಪತ್ತು ವರ್ಷಗಳಲ್ಲಿ ನಿಮ್ಮ ಶಾರೀರಿಕ ಬಲವು ಸಹಜವಾಗಿಯೇ ಕುಂದುವುದು. ಅಷ್ಟರೊಳಗೆ ನಮ್ಮ ಪ್ರವಾದಿಯ ಹಿಮಾಲಯ ಕೇಂದ್ರದ ಕೆಲಸವನ್ನು ಮುಂದುವರಿಸಿಕೊಂಡು ಹೋಗುವಂತಹ ಅನುಯಾಯಿಗಳ ಪರಂಪರೆಯನ್ನೇ ನೀವು ಸೃಷ್ಟಿಸಿಬಿಡಬಹುದು. ಅದೆಂತಹ ಗೌರವಯುತ ಕೆಲಸ! ಜೀವನದ ಈ ೧೮ ವರ್ಷಗಳಲ್ಲಿ, ನನ್ನ ಹೃನ್ಮನಗಳಲ್ಲಿ ಸ್ವಾಮೀಜಿ ಮತ್ತು ಅವರ ಆದರ್ಶಗಳ ಆಲೋಚನೆ ಬಿಟ್ಟು ಇನ್ನಾವ ಆಲೋಚನೆಗಳೂ ಸುಳಿದಿಲ್ಲ. ಅಲ್ಲದೆ ಆ ವರ್ಷಗಳಲ್ಲಿ ಹೆಚ್ಚು ಕಡಿಮೆ ನಾನು ಹೆಳವಿಯೇ ಆಗಿದ್ದೆ. ಸೋದರಿ ಕ್ರಿಸ್ಟೀನ್‌ಗೆ ಆಗುತ್ತಿರುವಂತೆ ನನ್ನಲ್ಲಿಯೂ ಈಗ ಶಕ್ತಿಸಂಚಾರವಾಗುತ್ತಿದೆ ಮತ್ತು ಬಹುಶಃ ಮುಂದಿನ ನಲ್ವತ್ತು ವರ್ಷಗಳವರೆಗೂ ನಾವು ಆ ಆದರ್ಶಕ್ಕಾಗಿ ದುಡಿಯುವುದನ್ನು ಜಗತ್ತು ಕಾಣಲಿದೆ. ಈ ಭಾವನೆಗಳೆಲ್ಲ ಮನದಾಳದಲ್ಲಿ ಸುಪ್ತವಾಗಿದ್ದು ಈಗ ಮೇಲೆದ್ದು ಬರುತ್ತಿರುವುದನ್ನು ಕಂಡರೆ ಆಶ್ಚರ್ಯವಾಗುವುದಲ್ಲವೆ? ನೀವು ಇನ್ನೂ ಕೆಲವು ತಿಂಗಳುಗಳ ಕಾಲ ಅಥವಾ ಒಂದು ವರ್ಷ ರಜೆಯನ್ನೇ ತೆಗೆದುಕೊಂಡರೂ ಸಹ, ಅವರ ಅಂತರಂಗ ಶಿಷ್ಯರಾದ ನೀವು ಸ್ವಾಮೀಜಿಯವರಿಗೆ ಪ್ರಿಯವಾದ ಹಿಮಾಲಯದಲ್ಲಿ , ಅವರು ಜಗತ್ತಿಗೆ ನೀಡಲು ಬಯಸಿದ ಆಧ್ಯಾತ್ಮಿಕ ಸತ್ಯಗಳನ್ನು ಮತ್ತೆ ಪ್ರಚಾರ ಮಾಡುವುದರಲ್ಲಿ ತಲ್ಲೀನರಾಗಿರುವುದನ್ನು ನಾವು ನೋಡಲಿಚ್ಛಿಸುತ್ತೇವೆ. ಇದನ್ನು ಸ್ವಲ್ಪ ಆಳವಾಗಿ ಆಲೋಚಿಸಿ ಕೆಲಕಾಲದ ಮಟ್ಟಿಗೆ ನಿಮ್ಮ ಕೆಲಸವನ್ನು ಹಗುರಗೊಳಿಸಲಿಕ್ಕಾಗಲಿ, ಅಥವಾ ನಿಮಗೆ ಕೆಲಕಾಲದ ವಿಶ್ರಾಂತಿ ನೀಡಲು ನನ್ನಿಂದ ಸಾಧ್ಯವಿದ್ದರೆ ತಿಳಿಸಿ, ಸಿದ್ಧಳಿರುವೆ... ಒಂದೇ ರೀತಿಯ ಕೆಲಸವನ್ನು ಅನವರತ ಮಾಡಿದ ನಂತರ ಸ್ವಲ್ಪ ವಿಶ್ರಾಂತಿಯ ಆವಶ್ಯಕತೆ ಖಂಡಿತವಾಗಿಯೂ ಇದೆ.

ನಾನಿಂದು ನ್ಯೂಯಾರ್ಕಿನ ವ್ಯೋಮಿಂಗ್‌ನಲ್ಲಿರುವ ಮಿಸೆಸ್ ಕೂನ್ಲಿ ವಾರ್ಡ್‌ಳ ಮನೆಗೆ ಹೋಗುತ್ತಿರುವೆ. ಡಿಸೆಂಬರ್ ೧೮ ವರೆಗೆ ಅಲ್ಲಿರುತ್ತೇನೆ... ಆಕೆಗೆ ಸ್ವಾಮೀಜಿಯವರ ಪರಿಚಯವಿತ್ತು, ಮತ್ತು ಸೋದರಿ ನಿವೇದಿತೆಗೆ ೧೦೦ ಡಾಲರ್‌ಗಳನ್ನು ಕೊಟ್ಟಿದ್ದಾರೆ; ಈಗ ಅವರಿಬ್ಬರ ಮತ್ತು ಅಲ್ಲಿಯ ಕೆಲಸದ ಬಗ್ಗೆ ತಿಳಿಯಲು ಆಸಕ್ತಳಾಗಿದ್ದಾಳೆ. ಸ್ವಲ್ಪ ಸ್ವಲ್ಪವಾಗಿ ಬೀಜವು ಹೇಗೆ ಮೊಳೆಯುತ್ತಿದೆ

ಎಂಬುದನ್ನು ನೋಡಿ! ಸ್ವಾಮೀಜಿಯವರ ಭಾಷಣದ ಲಿಪಿಕಾರನಾದ ಮಿ. ಗುಡ್‌ವಿನ್‌ಗೆ ನಾವೆಲ್ಲ ಹೇಗೆ ಋಣಿಗಳೋ ಅಂತೆಯೇ ಅವುಗಳನ್ನು ಮುದ್ರಿಸಿದ್ದಕ್ಕಾಗಿ ನಿಮಗೂ ಸಹ ಋಣಿಗಳು. ಮತ್ತು ಇದಕ್ಕಾಗಿ ಧನಸಹಾಯ ಮಾಡಿದ ಮಿಸೆಸ್ ಸೇವಿಯರ್‌ಗೂ ಋಣಿಗಳು. ಚಿಕ್ಕ ಚಿಕ್ಕ ತುಂಡುಗಳನ್ನು ಸರಿಯಾಗಿ ಜೋಡಿಸಿದ ನಂತರವೇ ತಿಳಿಯುವಂತಹ ಚೀನೀ ಒಗಟಿನಾಟ (ಪಝಲ್) ದಂತೆ ನಮ್ಮೆಲ್ಲರ ಕೆಲಸಗಳೂ ಅಪೂರ್ವವಾಗಿ ಸೇರಿ, ಆಹಾ! ಎಂತಹ ಸುಂದರ ದೃಶ್ಯವನ್ನು ಮೂಡಿಸುತ್ತಿವೆ! ನನ್ನ ಭಾಗದ ಕೆಲಸವು ಸ್ವಾಮೀಜಿಯವರನ್ನು 'ಗುರುತಿಸು'ವುದೇ ಆಗಿತ್ತು. ಮೊದಲ ಬಾರಿ ಅವರನ್ನು ನೋಡಿದಾಗ ಸತ್ಯವನ್ನೇ ಎದುರುಗೊಂಡಂತಾಯಿತು. ಇಂದಿಗೂ ಸಹ ಆ ಅನಿಸಿಕೆ ಹಾಗೆಯೇ ಇದೆ. ಆ ಸತ್ಯದ ಮಹತ್ತ್ವದ ಬೆಳಕು ಎಂದಿಗೂ ಮಿಣಿಕಿಲ್ಲ, ಮಸುಕಿಲ್ಲ. ೧೯ ವರ್ಷಗಳ ನಂತರ (ಜನವರಿ ೨೯, ೧೮೯೫ರಿಂದ ಹಿಡಿದು) ಇದೀಗ ನಾನು ಅದರ ಬಗ್ಗೆ ಹೇಳಲು ಶಕ್ತಳಾಗಿರುವೆ. ಆದರೆ ನೀವು?! ನೀವು ಅವರ ಸಂದೇಶವನ್ನು ಸಾವಿರಾರು ಜನರಿಗೆ ತಲುಪಿಸಿದ್ದೀರಿ! ಮತ್ತು ೨೦ ವರ್ಷಗಳ ಕಾಲ ಇದನ್ನು ಮುಂದುವರೆಸುವಿರೆಂದು ಆಶಿಸುವೆ. ನೀವು ಸ್ವಾಮೀಜಿಯವರನ್ನು ಮೊದಲು ಕಂಡದ್ದು ಯಾವಾಗ? ತದನಂತರ ಇಲ್ಲಿಯವರೆಗೆ ನಡೆದದ್ದೇನು? ಇವನ್ನೆಲ್ಲ ವಿಶದವಾಗಿ ನನಗೆ ನೀವು ತಿಳಿಸಲೇಬೇಕು.

ಮುಂದೆ ಎಂದಾದರೂ ಒಂದು ದಿನ ನಾವಿಬ್ಬರೂ ಭೇಟಿಯಾಗಬಹುದಲ್ಲವೆ? ನಾನು ಸುಲಭವಾಗಿ ಭಾರತಕ್ಕೆ ಬರಬಹುದು, ಬಹುಶಃ ಸಮಯ ಬಂದಾಗ. ಅಥವಾ ಬಾರದೆಯೂ ಇರಬಹುದು. 'ಎಲ್ಲವೂ ಅವನಿಚ್ಛೆಯಂತೆ'. ಏನಾದರಾಗಲಿ, ನೀವು ನನಗೆ ಬರೆಯುವ ಪತ್ರವನ್ನು ಕೆಳಗಿನ ವಿಳಾಸಕ್ಕೆ ಬರೆಯಿರಿ:

ಮನ್ರೋ ಅಂಡ್ ಕಂಪನಿ, ೭ ರೂ ಸ್ಕ್ರೈಬ್, ಪ್ಯಾರಿಸ್, ಫ್ರಾನ್ಸ್. ಬದಲಾಗುವ ಈ ಪ್ರಪಂಚದಲ್ಲಿ ಇದೇ ನನ್ನ ಬದಲಾಗದ ವಿಳಾಸ.

ನಿನ್ನ ಮಮತೆಯ
ಜೋಸೆಫಿನ್ ಮ್ಯಾಕ್‌ಲಿಯಾಡ್

೧೯೧೩ರ ಡಿಸೆಂಬರ್ ೧೫ರಂದು ಸ್ವಾಮಿ ವಿರಜಾನಂದರಿಂದ ಮಾಯಾವತಿಯ ಅದ್ವೈತ ಆಶ್ರಮದ ಜವಾಬ್ದಾರಿಯನ್ನು ವಹಿಸಿಕೊಂಡವರು ಸ್ವಾಮಿ ಪ್ರಜ್ಞಾನಂದರು. ಇವರ ಹಿಂದಿನ ಹೆಸರು, ದೇವವ್ರತ ಬಸು. ಇವರು ಈ ಹಿಂದೆ ಸ್ವದೇಶಿ ಚಳುವಳಿಯ ನೇತಾರರಲ್ಲೊಬ್ಬರಾಗಿದ್ದು ಆಲಿಪುರದ ಬಾಂಬ್ ಕೇಸಿನಲ್ಲಿ ಶ್ರೀ ಅರವಿಂದರೊಂದಿಗೆ ಇವರೂ ಸಹ ಕಾರಾಗೃಹಕ್ಕೆ ಹೋಗಿದ್ದರು. ಆಜಾನುಬಾಹುವೂ, ಸೌಮ್ಯರೂ, ತೇಜಃಪುಂಜ ವ್ಯಕ್ತಿತ್ವವುಳ್ಳವರೂ ಆದ ಇವರ ಮನಸ್ಸು ಚಿಂತನಾಶೀಲವಾಗಿತ್ತು. ಸ್ವಾಮಿ ವಿವೇಕಾನಂದರ ತ್ಯಾಗ-ಸೇವೆಗಳ ಆದರ್ಶದಿಂದ ಪ್ರಭಾವಿತರಾದ ಇವರು ತಮ್ಮ ಸ್ವದೇಶೀ ಚಟುವಟಿಕೆಗಳನ್ನು ತ್ಯಜಿಸಿ ಬೇಲೂರು ಮಠವನ್ನು ಸೇರಿದ್ದರು. ಮಾಯಾವತಿಗೆ ಬರುವುದಕ್ಕೆ ಮೊದಲು ಇವರು ಒಂದು ವರ್ಷ ಕಾಲ 'ಉದ್ಬೋಧನ' ಎಂಬ ಬಂಗಾಳಿ ಪತ್ರಿಕೆಯ ಸಂಪಾದಕರಾಗಿದ್ದರು. ಮಾಯಾವತಿಯಲ್ಲಿ ಸೇವೆ ಸಲ್ಲಿಸಲು ಪ್ರಜ್ಞಾನಂದರೊಂದಿಗೆ ಬ್ರಹ್ಮಚಾರಿ ಭರತ್ (ಮುಂದೆ ಸ್ವಾಮಿ ಅಭಯಾನಂದ) ಮತ್ತು ಬ್ರಹ್ಮಚಾರಿ ಸೀತಾಪತಿಯವರೂ (ಮುಂದೆ ಸ್ವಾಮಿ ರಾಘವಾನಂದ) ಸಹ ಬಂದಿದ್ದರು. ಈ ಹಿಂದೆ ಬ್ರಹ್ಮಚಾರಿ ನಿರ್ಮಲ್ (ಸ್ವಾಮಿ ಮಾಧವಾನಂದ) ೧೯೧೨ರಲ್ಲಿ ಮಾಯಾವತಿಯಿಂದ ಹೊರಟುಹೋಗಿದ್ದರು; ಗುರುದಾಸರೂ (ಸ್ವಾಮಿ ಅತುಲಾನಂದರು) ಕೂಡ ಅಮೆರಿಕಾಗೆ ಹಿಂತಿರುಗಿದ್ದರು.

ಜವಾಬ್ದಾರಿಯುತ ಕೆಲಸದಿಂದ ಬಿಡುವು ಸಿಕ್ಕಮೇಲೆ ಅದೇ ಪರಿಸರದಲ್ಲಿ ಏಕೆ ಇರಬೇಕು? ಎಂದು ಯೋಚಿಸಿದ ಸ್ವಾಮಿ ವಿರಜಾನಂದರು ಆಶ್ರಮದ ಕಟ್ಟಡದಿಂದ ಒಂದು ಫರ್ಲಾಂಗ್ ದೂರ ದಲ್ಲಿದ್ದ ಮಿಸೆಸ್ ಸೇವಿಯರ್ ಅವರ ಕಟ್ಟಡದಲ್ಲಿ ಇರಲಾರಂಭಿಸಿದರು. (ಇದನ್ನು ಮುಂದೆ Mother's Bungalow — 'ಮದರ್ ಅವರ ಬಂಗಲೆ' ಎಂದು ಕರೆಯುತ್ತಿದ್ದರು). ೧೯೧೩ನೇ ಇಸವಿ ಮುಗಿಯಲು ೧೭ ದಿನಗಳು ಉಳಿದಿದ್ದವು. ಈ ೧೭ ದಿನ ಗಳನ್ನು ನಿಶ್ಚಿಂತೆಯಿಂದ ಕಳೆದು, ಜನವರಿ ೧ ರಿಂದ ಸ್ವಾಮೀಜಿಯವರ ಜೀವನ ಚರಿತ್ರೆಯ ಉಳಿದ ಎರಡು ಖಂಡಗಳನ್ನು ಮುದ್ರಿಸುವ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ಅವರು ನಿಶ್ಚಯಿಸಿದರು. ಏಳು ವರ್ಷಗಳ ಗುರುತರ ಪರಿಶ್ರಮದ ನಂತರ ದೊರೆತ ೧೭ ದಿನಗಳ ವಿಶ್ರಾಂತಿಯನ್ನು ಮನದಣಿಯೆ ಸವಿದರು. ಇದರಮಧ್ಯದಲ್ಲೆಎರಡುಬಾರಿಕೆಲವುಸಾಧು-ಬ್ರಹ್ಮಚಾರಿಗಳನ್ನು ಕರೆದೊಯ್ದು, ತಾವು ತಪಸ್ಸಿಗಾಗಿ ಕೊಂಡುಕೊಂಡಿದ್ದ ಲೋಧಾನ್ ಟುಕುರಾ ಎಂಬ ಜಾಗದಲ್ಲಿ ವನಭೋಜನ (ಪಿಕ್‌ನಿಕ್) ಮಾಡಿ ಬಂದರು.

(ಮುಂದುವರಿಯುವುದು)

ನಿಜವಾದ ಸಂನ್ಯಾಸಿಗಳು

ಹಿರಿಯ ಗೋಪಾಲನು (ಮುಂದೆ ಸ್ವಾಮಿ ಅದ್ವೈತಾನಂದರು) ಸಂನ್ಯಾಸಿಗಳಿಗೆ ಕಾವಿಬಟ್ಟೆ ಹಂಚಿ ಪುಣ್ಯ ಸಂಪಾದನೆ ಮಾಡಲೆಂದು ಕೊಲ್ಕತ್ತದ ಜಗನ್ನಾಥ ಘಾಟ್‌ಗೆ ಹೊರಟಾಗ, ಅದನ್ನು ತಿಳಿದ ಶ್ರೀರಾಮಕೃಷ್ಣರು ಅವನಿಗೆ ಹೀಗೆಂದರು: ''ನೀನು ಅವುಗಳನ್ನು ಜಗನ್ನಾಥ ಘಾಟ್‌ಗೆ ಬರುವ ಸಂನ್ಯಾಸಿಗಳಿಗೆ ಕೊಡುವ ಬದಲು ನನ್ನ ಈ ಮಕ್ಕಳಿಗೆ (ಶಿಷ್ಯಂದಿರಿಗೆ) ದಾನ ಮಾಡಿದರೆ ಸಾವಿರಪಾಲು ಪುಣ್ಯ ಬರುತ್ತದೆ. ಸರ್ವವನ್ನೂ ತ್ಯಾಗ ಮಾಡಿದ ಇಂತಹ ಸಂನ್ಯಾಸಿಗಳನ್ನು ನೀನು ಮತ್ತೆಲ್ಲಿ ಹುಡುಕಲು ಸಾಧ್ಯ ? ಇವರಲ್ಲಿ ಪ್ರತಿಯೊಬ್ಬರೂ ಸಾವಿರ ಸಂನ್ಯಾಸಿಗಳಿಗೆ ಸಮ.''

(ದೇವರೊಡನೆ ಬಾಳಿದವರು, ಭಾಗ ೧, ಪು. ೬೦೮)

ಶ್ರೀಮಾತೆಯವರ ಪತ್ರಗಳು – ೧೩

ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ



ಪತ್ರ – ೧೯

ಶ್ರೀ ಶ್ರೀ ದುರ್ಗೆಯ ಕೃಪೆ

೧೪ .೮.೧೯೧೧

೨೯, ಶ್ರಾವಣ

ಚಿರಂಜೀವಿಗೆ,

ಮಗೂ, ಈಗ ತಾನೇ ನೀನು ಕಳುಹಿಸಿರುವ ೧೦ ರೂಪಾಯಿ ಮನಿಯಾರ್ಡರ್ ಸಿಕ್ಕಿತು. ಆ ಹಣದಿಂದ ನಿನ್ನ ಬಾಲಕ ಬಾಲಕಿಯರಿಗಾಗಿ ಮತ್ತು ನಿಮಗಾಗಿ ಮಂಗಳವನ್ನು ಆಶಿಸುತ್ತಾ ಶ್ರೀ ಠಾಕೂರರಿಗೆ ಪೂಜೆಯನ್ನು ಮಾಡಿಸಿ, ನಿತ್ಯ ಪ್ರಾರ್ಥನೆಯನ್ನು ಮಾಡುತ್ತಿದ್ದೇನೆ. ಅವರು ನಿಮಗೆಲ್ಲಾ ಮಂಗಳವನ್ನು ಉಂಟು ಮಾಡಲಿ. ಉಳಿದಂತೆ ಇಲ್ಲಿ ಎಲ್ಲವೂ ಕ್ಷೇಮ. ನಿಮ್ಮೆಲ್ಲರ ಕ್ಷೇಮವನ್ನು ತಿಳಿಸಿ ಸಮಾಧಾನ ಕೊಡು. ಇತಿ,

ನಿಮ್ಮೆಲ್ಲರ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

ಶ್ರೀಲಯ (ಶ್ರೀಲ) ಶ್ರೀಯುತ ಬಾಬು ತಾರಕನಾಥ್

ರಾಯ್ ಚೌಧುರಿ

ಮಗು, ಸುರಕ್ಷಿತವಾಗಿರು

kathiadi

ಮೊ: ಕಠಿಯಾದಿ ಸಬ್ ರಿಜಿಸ್ಟರರ ಆಫೀಸ್

ಪೋ: ಕಠಿಯಾದಿ, ಜಿಲ್ಲೆ– ಮೈಮನ್‌ಸಿಂಗ್

ಪತ್ರ – ೨೦

ಶ್ರೀ ಶ್ರೀ ದುರ್ಗೆಯ ಕೃಪೆ

೨೪.೮.೧೯೧೧

೬, ಭಾದ್ರಪದ

ಚಿರಂಜೀವಿಯಾಗು.

ಮಗೂ, ನಿನ್ನ ಪತ್ರ ತಲುಪಿ ಸಂತೋಷವಾಯಿತು. ಒಂದು ವೇಳೆ ಆಮೇಲೆ ಇಲ್ಲಿಗೆ – ಎಂದರೆ ಜಯರಾಂಬಾಟಿ ಗ್ರಾಮಕ್ಕೆ ಬಂದರೆ, ಬರುವಾಗ ಶರತ್ ಮಹಾರಾಜರನ್ನು ಭೇಟಿ ಮಾಡಿ ಹಾಗೂ ಮಗನು ಶಶಿ ಹೇಗಿದ್ದಾನೆಂದು ವಿಚಾರಿಸಿ ಬನ್ನಿ. ಏಕೆಂದರೆ ಶಶಿಗೆ ಜ್ವರ ಬಂದಿದೆ.

ಇಲ್ಲಿ ಕ್ಷೇಮ. ನಿಮ್ಮೆಲ್ಲರ ಕ್ಷೇಮಕ್ಕೆ ಬರೆ.

ಇತಿ ನಿಮ್ಮೆಲ್ಲರ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ :

ಶ್ರೀಯುತ ನಿಶಿಕುಮಾರ್ ಗಂಗೋಪಾಧ್ಯಾಯ

ಮಗೂ, ಸುರಕ್ಷಿತವಾಗಿರು.

ಕೊಲ್ಕತ್ತಾ ೮೪ ನಂ (ಸೀತಾರಾಮ್) ಘೋಷ್ ರ ಮನೆ Cal

ಪತ್ರ –೨೧

ಶ್ರೀ ಶ್ರೀ ಗುರವೇ ನಮ

೧೫.೯.೧೯೧೧

ಸುರಕ್ಷಿತವಾಗಿರು,

ಪರಮ ಶುಭಾಶೀರ್ವಾದ. ವಿಶೇಷವೇನೆಂದರೆ,

ನಿನ್ನ ಒಂದು ಪತ್ರ ಹಾಗೂ ಪಾರ್ಸೆಲ್‌ನಲ್ಲಿರುವ ಎಲ್ಲಾ ವಸ್ತುಗಳೂ ಸಿಕ್ಕಿವೆ ಅನ್ನಿಸುತ್ತದೆ. ನೀನು ಸುರಕ್ಷಿತವಾಗಿ ತಲುಪಿ ರುವೆ ಎಂದು ಕೇಳಿ ಸಂತೋಷವಾಯಿತು. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು. ನಾವೆಲ್ಲರೂ ಚೆನ್ನಾಗಿದ್ದೇವೆ. ಇತಿ,

೧೩೧೮/೨೮ ಭಾದ್ರ

ನಿಮ್ಮೆಲ್ಲರ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

ಪರಮ ಶುಭ

ಶ್ರೀಯುತ ನಿಶಿ ಕುಮಾರ್ ಗಂಗೋಪಾಧ್ಯಾಯ

ಪ್ರೀತಿಯ ಮಗ

೮೪ ನಂ ಸೀತಾರಾಂ ಘೋಷ್ ಸ್ಟ್ರೀಟ್ , ಕೊಲ್ಕತ್ತಾ

ಪತ್ರ – ೨೨

ಶ್ರೀ ಶ್ರೀ ರಾಮಕೃಷ್ಣ ಶ್ರೀ ಚರಣದಲ್ಲಿ ಭರವಸೆ

೧೫.೧೦.೧೯೧೧

ಜಯರಾಂಬಾಟಿ

೧೩೧೮, ಆಶ್ವಯುಜ ೨೭

ಪ್ರೀತಿಯ ಮಗೂ,

ನಿನ್ನ ಪತ್ರ ಸಿಕ್ಕಿ ಸಮಾಧಾನ ಪಟ್ಟೆ. ನಾನು ಚೆನ್ನಾಗಿದ್ದೇನೆ. ಇಲ್ಲಿ ಎಲ್ಲವೂ ಕ್ಷೇಮವೆಂದು ತಿಳಿ. ನಿನಗೆ ನನ್ನ ಆಶೀರ್ವಾದ. ನಿರ್ಮಲ, ಆಶು, ಸೀತಾರಮಣ, ಮಿಸೆಸ್ ಸೇವಿಯರ್ ಮತ್ತು ಕ್ರಿಸ್ಟೀನ್ ಎಲ್ಲರಿಗೂ ನನ್ನ ಆಶೀರ್ವಾದಗಳನ್ನು ತಿಳಿಸು. ಅಚಲ ಪ್ರೇಮ ಭಕ್ತಿ ನಿನಗೆ ಉಂಟಾಗಲಿ ಎಂದು ಗುರುದೇವರಲ್ಲಿ ಪ್ರಾರ್ಥನೆ.

ಇತಿ, ಶ್ರೀಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

Swami Virajananada
The Advaita Ashrama
Mayavati
Lohaghat P.O, Dt. Almora, U.P

ವಿವರಣೆ : ಮಿಸೆಸ್ ಸೇವಿಯರ್ ಹಾಗೂ ಅವರ ಪತಿ ಕ್ಯಾಪ್ಟನ್ ಸೇವಿಯರ್ ಮಾಯಾವತಿ ಅದ್ವೈತ ಆಶ್ರಮದ ಸಂಸ್ಥಾಪಕರು. ಸ್ವಾಮೀಜಿಯ ಆದರ್ಶದಿಂದ ಸ್ಫೂರ್ತಿ ಹೊಂದಿ ಈ ದಂಪತಿಗಳು ಭಾರತಕ್ಕೆ ಬಂದು, ಹಿಮಾಲಯದ ತಪ್ಪಲಿನಲ್ಲಿ ಅದ್ವೈತ ಆಶ್ರಮವನ್ನು ನಿರ್ಮಿಸಿದರು. ಕ್ರಿಸ್ಟೀನ್ ಸ್ವಾಮಿ ವಿವೇಕಾನಂದರ ವಿದೇಶೀ ಶಿಷ್ಯೆ.

ಪತ್ರ - ೭೩

ಓಂ ರಾಮಕೃಷ್ಣ ಜಯತಿ

೩೦.೧೦.೧೯೧೧

ಪೋ : ಆನೂರ್, ಜಯರಾಂಬಾಟಿ

೧೩೧೮, ೮ನೇ ಕಾರ್ತಿಕ

ಪ್ರೀತಿಯ ಮಗೂ,

ನಿನ್ನ ಪತ್ರ ಸಿಕ್ಕಿ ಎಲ್ಲಾ ವಿಷಯಗಳನ್ನು ತಿಳಿದುಕೊಂಡೆ. ನಾನು ಮುಂದಿನ ಆಗ್ರಹಾಯಣ ಮಾಸದಲ್ಲಿ ಕೊಲ್ಕತ್ತಕ್ಕೆ ಹೋಗುವೆನು. ಆ ಸಮಯದಲ್ಲಿ ಕೊಲ್ಕತ್ತದಲ್ಲಿ ದೀಕ್ಷೆಯನ್ನು ಪಡೆದುಕೊಳ್ಳಲು ಅನುಕೂಲವಾಗುವುದು. ಜಯರಾಂಬಾಟಿಯು ರೈಲ್ವೆ ಹಳಿಯಿಂದ ತುಂಬಾ ದೂರದಲ್ಲಿದೆ. ಮಗೂ, ಕೊಲ್ಕತ್ತದಲ್ಲಿ ನಿಮ್ಮೆಲ್ಲರ ದೀಕ್ಷೆ ಬಗ್ಗೆ ಇಲ್ಲಿಂದಲೇ ಚಿಂತಿಸುತ್ತಿದ್ದೇನೆ. ಆ ಸಮಯವನ್ನು ಸ್ವಲ್ಪ ವಿಚಾರಿಸಿ ತಿಳಿದು, ಬಾಗ್‌ಬಜಾರಿಗೆ ಬಂದು ತಲುಪು. ನಾನು ಚೆನ್ನಾಗಿದ್ದೇನೆ. ನಿಮ್ಮೆಲ್ಲರ ಯೋಗಕ್ಷೇಮವನ್ನು ತಿಳಿಸಿ ಸಮಾಧಾನವನ್ನು ಕೊಡು. ನಿನಗೆ ನನ್ನ ಆಶೀರ್ವಾದ.

ನಿನ್ನ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

ಶ್ರೀಯುತ ಬಾಬು ತಾರಕನಾಥ್ ಶರ್ಮ ರಾಯ್ ಚೌಧುರಿ

ಮಗೂ, ಸುರಕ್ಷಿತವಾಗಿರು.

ಕಠಿಯಾದಿ ಸಬ್ ರಿಜಿಸ್ಟ್ರೀ ಆಫೀಸ್
ಪೋ - ಕಠಿಯಾದಿ. ಜಿಲ್ಲೆ- ಮೈಮನ್‌ಸಿಂಗ್

ಪತ್ರ -೭೪

ಶ್ರೀ ಶ್ರೀ ಗುರವೇ ನಮಃ

೨೪.೧೦.೧೯೧೧

ಜಯರಾಂಬಾಟಿ , ೧೩೧೮, ಕಾರ್ತಿಕ ೬

ಸುರಕ್ಷಿತವಾಗಿರು.

ಪರಮ ಶುಭಾಶೀರ್ವಾದ. ವಿಶೇಷವೇನೆಂದರೆ,

ನಿನ್ನ ಈ ಒಂದು ಪತ್ರ ತಲುಪಿ ಎಲ್ಲವನ್ನೂ ತಿಳಿದುಕೊಂಡೆ. ನೀನು ಹೇಗಿರುವೆ ಎಂದು ತಿಳಿಸಿ ಈಗಲೇ ಬರೆ. ಕಾಯಿಲೆ ವಾಸಿಯಾಗಿದೆಯೇ ಎಂದು ತಿಳಿಸು — ಠಾಕೂರರು ನಿನಗೆ ಮಂಗಳವನ್ನುಂಟು ಮಾಡಲಿ. ಠಾಕೂರರ ಇಚ್ಛೆಯಿಂದ ಎಲ್ಲವೂ ಪೂರ್ಣವಾಗುವುದು. ನಾವೆಲ್ಲರೂ ಚೆನ್ನಾಗಿದ್ದೇವೆ. ನಿನಗೆ ನನ್ನ ಆಶೀರ್ವಾದ. ನಿಮ್ಮೆಲ್ಲರ ಕ್ಷೇಮವನ್ನು ತಿಳಿಸಿ ಬರೆ. ಇತಿ,

ಢಾಕಾದಲ್ಲಿರುವ ಎಲ್ಲರಿಗೂ ಆಶೀರ್ವಾದಗಳನ್ನು ತಿಳಿಸು.

— ನಿಮ್ಮೆಲ್ಲರ ತಾಯಿಯ ಆಶೀರ್ವಾದ ಪತ್ರ.

ಪತ್ರ ಪಡೆದವರ ಹೆಸರು ಮತ್ತು ವಿಳಾಸ

ಪರಮ ಶುಭದ
ಶ್ರೀಯುತ ನಿಶಿಕುಮಾರ್ ಗಂಗೋಪಾಧ್ಯಾಯ

ಮಗೂ, ಸುರಕ್ಷಿತವಾಗಿರು.

ಜಿಲ್ಲೆ: ತ್ರಿಪುರಾ; ಪೋ: ಇಬ್ರಾಹಿಂಪುರ್
ಗ್ರಾಮ -ಇಬ್ರಾಹಿಂಪುರ್ Ibrahimpur

ಪತ್ರ - ೭೫

೬.೫.೧೯೧೨

೨೩ನೇ ವೈಶಾಖ , ಕೊಲ್ಕತ್ತಾ

ಶುಭವಾಗಲಿ.

ನಿನ್ನ ಪತ್ರ ಹಾಗೂ ಕಳುಹಿಸಿರುವ ೧೦ ರೂಪಾಯಿ ತಲುಪಿ ಸಂತೋಷವಾಯಿತು. ನಿನಗೆ ಬರಲು ಯಾವಾಗ ಅತ್ಯಂತ ಇಚ್ಛೆಯಾಗುವುದೋ, ಆವಾಗ ಅನುಕೂಲದಂತೆ ಬಾ. ಇಲ್ಲಿ ಎಲ್ಲರೂ ಕ್ಷೇಮ. ನಿಮ್ಮೆಲ್ಲರ ಕ್ಷೇಮಕ್ಕೆ ಮಧ್ಯೆ ಮಧ್ಯೆ ಬರೆ. ಮತ್ತು ನಿನಗೆ ನನ್ನ ಆಶೀರ್ವಾದ.

ಇತಿ ಆಶೀರ್ವಾದ ನೀಡುವ

ನಿನ್ನ ಮಾತೆ

ಪುನಃ - ಈ ಮನೆಯಲ್ಲಿ ಸ್ಥಳ ಕಡಿಮೆಯಾಗಿರುವುದರಿಂದ ಬರುವ ಮೊದಲೇ ಎಲ್ಲಾದರೂ ತಂಗಲು ವ್ಯವಸ್ಥೆ ಮಾಡಿ, ಅನಂತರ ನೀನು ಬರಬೇಕು.

ಪತ್ರ ಪಡೆದವರ ಹೆಸರು ಮತ್ತು ವಿಳಾಸ

Sriman Taraknath Chowdhury
Sub Registrar's Office, Kathiadi
(Mymensing)

ಉಪನಿಷತ್ತಿನ ಕಥೆಗಳು

ಸ್ವಾಮಿ ವೀರೇಶಾನಂದ

ಪೀಠಿಕೆ

'ಉಪನಿಷತ್ತುಗಳ ಕಥೆಗಳು' ಎಂಬುದು ಈ ಲೇಖನಮಾಲೆಯ ಹೆಸರು. ಈ ಕಥೆಗಳ ಉದ್ದೇಶ ಹಿಂದೆ ಆಗಿ ಹೋದ ಸಂಗತಿಗಳನ್ನು ವಿವರಿಸುವುದಲ್ಲ ; ಉಪನಿಷತ್ತುಗಳ ಸಂದೇಶವನ್ನು ಸರಳ ಭಾಷೆಯಲ್ಲಿ ತಿಳಿಸುವುದು. ಇಲ್ಲಿ ಒಂದು ಕಷ್ಟ ಇದೆ. ಕೆಲವು ಉಪನಿಷತ್ತುಗಳಿಗೆ ಕತೆಗಳ ಹಂದರ ಇದೆ, ಕೆಲವಕ್ಕೆ ಇಲ್ಲ ; ಬರಿಯ ಸಂದೇಶವಷ್ಟೇ ಇದೆ. ಅಂಥ ಉಪನಿಷತ್ತುಗಳು ಕೂಡ ಏನು ಹೇಳುತ್ತವೆ ಎಂದು ನಾವು ತಿಳಿದುಕೊಳ್ಳಬೇಕಷ್ಟೆ? ಹೀಗಾಗಿ ಕಥೆ ಇಲ್ಲದ ಉಪನಿಷತ್ತುಗಳಿಗೆ ಕಾಲ್ಪನಿಕ ಕಥಾಚಿತ್ರಣವನ್ನು ಹೊದಿಸಲಾಗಿದೆ. ಇದರಿಂದಾಗಿ ಅವುಗಳು ತಿಳಿಸಿಕೊಡುವ ತತ್ತ್ವಗಳನ್ನು ತಿಳಿದು ಕೊಳ್ಳುವ ಆಸಕ್ತಿ ಎಲ್ಲರಲ್ಲೂ ಮೂಡಲಿ ಎನ್ನುವುದೇ ಇದರ ಉದ್ದೇಶ.

೧

ಈಶಾವಾಸ್ಯಮಿದಂ ಸರ್ವಂ

ಒಂದು ಕಾಲ್ಪನಿಕ ಕಥಾ ಹಂದರದ ಮೂಲಕ ಗಹನವಾದ ಜೀವನ ಸಿದ್ಧಾಂತವನ್ನು ಪ್ರಸ್ತುತ ಪಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ಉಪನಿಷತ್ತಿನ ಹೆಸರು ಈಶಾವಾಸ್ಯ ಉಪನಿಷತ್ತು ಎಂದು. ಇದು ಶುಕ್ಲ ಯಜುರ್ವೇದದ ಸಂಹಿತೆಯ ಭಾಗದಲ್ಲಿ ಬರುತ್ತದೆ. ಹೀಗಾಗಿ ಇದಕ್ಕೆ ಸಂಹಿತೋಪನಿಷತ್ತು ಎಂದೂ ಹೆಸರು. ಇಲ್ಲಿನ ಮೊದಲ ಮಂತ್ರ **ಈಶಾವಾಸ್ಯಮಿದಂ..** ಎಂದು ಆರಂಭವಾಗುತ್ತದೆ. ಹೀಗಾಗಿ ಇದಕ್ಕೆ ಈಶಾವಾಸ್ಯ ಉಪನಿಷತ್ತು ಎಂದು ಹೆಸರಾಗಿದೆ. ಸಣ್ಣ ರೂಪವಾಗಿ ಇದನ್ನು ಈಶೋಪನಿಷತ್ತು ಎಂದೂ ಕರೆಯುವ ವಾಡಿಕೆಯೂ ಇದೆ.

ದೇವದತ್ತನೆಂಬ ಬ್ರಾಹ್ಮಣನಿದ್ದನು. ಅಂದಿನ ಕಾಲದ ವಾಡಿಕೆಯಂತೆ ವೇದಗಳ ಅಭ್ಯಾಸವನ್ನು ಮಾಡಿದ್ದನು. ಆ ವೇದಗಳನ್ನು ಪ್ರಾಯೋಗಿಕವಾಗಿ ಆಚರಣೆಗೆ ತರುವ ಯಜ್ಞಯಾಗಾದಿಗಳನ್ನು ಕೂಡ ನಡೆಸಿಕೊಂಡು ಬರುತ್ತಿದ್ದನು. ಶುಕ್ಲ ಯಜುರ್ವೇದದ ಶಾಖೆಯಲ್ಲಿ ಪಾರಂಗತನಾದ ಅವನ ಜೀವನವು ಸುಭಿಕ್ಷವಾಗಿಯೇ ಇತ್ತು. ಅನುಕೂಲಳಾದ ಹೆಂಡತಿ ಸುಶೀಲೆ ಮತ್ತು ಎರಡು ಮಕ್ಕಳ ಪುಟ್ಟ ಸಂಸಾರ ಅವನದಾಗಿತ್ತು. ಅವನ ತಂದೆತಾಯಿಗಳು ವೃದ್ಧರಾಗಿದ್ದರು. ಅವರ ಸೇವೆಯನ್ನು ಅವನು ಮಾಡುತ್ತಿದ್ದನು. ಪ್ರತಿನಿತ್ಯ ಮಾಡಬೇಕಾದ ಅಗ್ನಿಕಾರ್ಯಗಳನ್ನು ಚಾಚೂತಪ್ಪದೆ ಮಾಡುತ್ತಿದ್ದನು. ವಿಶೇಷ ಸಂದರ್ಭಗಳಲ್ಲಿ ದೊಡ್ಡ ಯಜ್ಞಗಳನ್ನು ಕೈಗೊಳ್ಳುತ್ತಿದ್ದನು. ತನ್ನ ನೆರೆಹೊರೆಯವರ, ಸ್ನೇಹಿತರ, ಬಂಧುಗಳ ವೈದಿಕ ಕಾರ್ಯಗಳಲ್ಲಿ ತಪ್ಪದೆ ಪಾಲ್ಗೊಂಡು ನೆರವಾಗುತ್ತಿದ್ದನು. ಕರ್ಮಗಳನ್ನು ಮಾಡುತ್ತ, ಆ ಕರ್ಮಗಳ ಮೂಲಕ ಫಲವನ್ನು ಪಡೆದು ಸುಖಭರಿತವಾದ ಜೀವನವನ್ನು ನಡೆಸಬೇಕೆಂಬ ಸಿದ್ಧಾಂತಕ್ಕೆ ಅವನು ಬದ್ಧನಾಗಿದ್ದನು. ಧನ, ಆರೋಗ್ಯ, ಒಳ್ಳೆಯ ಕುಟುಂಬ, ನೆರೆಹೊರೆಯವರು – ಎಲ್ಲದರಿಂದ ಕೂಡಿ ಸಂತೋಷವಾಗಿಯೇ ಇದ್ದನು. ಅಂದಿನ ಕಾಲದಲ್ಲಿ ಜನರ ಆದರ್ಶವೇ ಇದಾಗಿತ್ತು. ಯಜ್ಞಯಾಗಾದಿಗಳಿಂದ ದೇವತೆಗಳು ಸುಪ್ರೀತರಾಗುತ್ತಾರೆ. ನಮಗೆ ಬೇಕಾದ್ದನ್ನು ಅವರು ಕರುಣಿಸುತ್ತಾರೆ. ಇದರಿಂದ ನಮ್ಮ ಈ ಜಗತ್ತಿನ ಜೀವನ ಚೆನ್ನಾಗಿ ನಡೆದುಕೊಂಡುಹೋಗುತ್ತದೆ. ಇಷ್ಟು ಸಾಕಲ್ಲವೆ? ದೇವದತ್ತನು ಅಂಥ ಸಾಧಾರಣ ಜನರ ವರ್ಗದವನೇ ಆಗಿದ್ದನು.

ಒಮ್ಮೆ ಒಂದು ಗುರುಕುಲವೊಂದರಲ್ಲಿ ವಿಶೇಷ ಪ್ರವಚನವಿದೆ ಎಂದು ಅವನು ಕೇಳಿತಿಳಿದನು. ವೈದಿಕ ಕರ್ಮಗಳನ್ನು ಸರಿಯಾಗಿ ಅನುಷ್ಠಾನ ಮಾಡುವ ವಿಷಯದಲ್ಲಿ ಜಿಜ್ಞಾಸೆಗಳು, ಗೋಷ್ಠಿಗಳು ಅಂದಿನ ಕಾಲದಲ್ಲಿ ನಡೆಯುವುದು ಸಹಜವೇ ಆಗಿತ್ತು. ಕುತೂಹಲದಿಂದ ತನ್ನ ನಿತ್ಯಕರ್ಮಗಳನ್ನು ಮುಗಿಸಿ, ಪುಷ್ಕಳ ಭೋಜನವನ್ನು ಮಾಡಿ, ತನ್ನ ಮನೆಯಿಂದ ಎರಡು ಮೈಲುಗಳಿದ್ದ ಗುರುಕುಲಕ್ಕೆ ದೇವದತ್ತನು ನಡೆದೇ ಹೊರಟನು.

ಅವನು ಗುರುಕುಲವನ್ನು ತಲುಪುವ ವೇಳೆಗೆ ಸಂಜೆ ನಾಲ್ಕು ಗಂಟೆಯಾಗಿತ್ತು. ವೃದ್ಧರಾದ ಋಷಿಗಳೊಬ್ಬರು ವೇದಿಕೆಯ ಮೇಲೆ ಕುಳಿತಿದ್ದರು. ಅವರ ಹೆಸರು ಆಚಾರ್ಯ ಭಾರ್ಗವ. ಅವರನ್ನು ನೋಡಿದೊಡನೆಯೇ ಅವರೆಡೆಗೆ ದೇವದತ್ತನು ಆಕರ್ಷಿತನಾದನು. ಅವನ ಮನೆಯ ಹತ್ತಿರದಲ್ಲಿ ಅದೆಷ್ಟೋ ವೃದ್ಧರು ವಾಸಿಸುತ್ತಿದ್ದರು. ಅವರೆಲ್ಲರೂ ಜೀವನ ಪೂರ್ತಿ ಕರ್ಮಾನುಷ್ಠಾನ ಮಾಡಿಕೊಂಡು ಬಂದವರೇ. ಅವರು ಕೂಡ ಅಗ್ನಿಯಂತೆ ತೇಜಸ್ಸಿನಿಂದ ಬೆಳಗುತ್ತಿದ್ದರು. ಸದಾ ಕ್ರಿಯಾಶೀಲರಾಗಿದ್ದರು. ಪ್ರಕೃತಿಯು ಕೊಡಮಾಡಿದ ಭೋಗಗಳನ್ನು ಸಂತೋಷದಿಂದ ಅನುಭವಿಸುತ್ತಿದ್ದರು. ಆದರೆ ಆಚಾರ್ಯ ಭಾರ್ಗವರ ಮುಖದಲ್ಲಿ ಅದಕ್ಕಿಂತ ಮಿಗಿಲಾದ ಹೇಳಲಾಗದ ಆನಂದ, ಸಂತೃಪ್ತಿಗಳು ಮನೆಮಾಡಿದ್ದವು. ಹಾಗೆಂದೇ ಬಹಳಷ್ಟು ಜನ ಅವರೆಡೆಗೆ ಆಕರ್ಷಿತರಾಗಿದ್ದರು. ಅಲ್ಲಿ ನೆರೆದಿದ್ದ ಹತ್ತಾರು ಜನರ ಮಧ್ಯೆ ಕುಳಿತ ದೇವದತ್ತನು ಅವರ ಪ್ರವಚನವನ್ನು ಕೇಳಲು ಆರಂಭಿಸಿದನು.

''ಮಕ್ಕಳೇ, ನಮಗೆ ಕಾಣುವ ಈ ಜಗತ್ತು ಪೂರ್ಣವೇ ಆಗಿದೆ. ನಮಗೆ ಕಾಣದ ಜಗತ್ತು ಕೂಡ ಪೂರ್ಣವೇ ಆಗಿದೆ. ಕಾಣದೆ ಇರುವ ಪೂರ್ಣದಿಂದಲೇ ಕಾಣಬರುವ ಈ ಪೂರ್ಣವು ಸೃಷ್ಟಿಗೊಂಡಿದೆ. ಇಲ್ಲೊಂದು ರಹಸ್ಯವಿದೆ. ಪೂರ್ಣದಿಂದ ಪೂರ್ಣವನ್ನು ತೆಗೆದರೆ, ಪೂರ್ಣವೇ ಉಳಿದುಕೊಳ್ಳುತ್ತದೆ.''

ಕೇಳುವುದಕ್ಕೇನೋ ಚೇತೋಹಾರಿಯಾಗಿದ್ದ ಈ ಮಾತುಗಳ ಅರ್ಥ ದೇವದತ್ತನಿಗೆ ತಿಳಿಯಲಿಲ್ಲ. ಆಚಾರ್ಯ ಭಾರ್ಗವರು ನಸುನಕ್ಕು ಮುಂದುವರೆದರು: ''ಮಕ್ಕಳೇ, ನನಗೆ ಗೊತ್ತು. ಇದರ ಅಂತರಾರ್ಥ ನಿಮಗೆ ತಿಳಿಯಲಿಲ್ಲ. ಅದನ್ನು ತಿಳಿಸುವುದೇ ಇವತ್ತಿನ ಪ್ರವಚನದ ಉದ್ದೇಶ. ಕೇಳಲು ಸಿದ್ಧರಾಗಿದ್ದೀರೇನು?'' ಸ್ವಲ್ಪ ನೀರು ಕುಡಿದು, ಕಣ್ಣು ಮುಚ್ಚಿ , ಅಂತಸ್ಥರಾಗಿದ್ದುಕೊಂಡು, ಆಚಾರ್ಯ ಭಾರ್ಗವರು ಮತ್ತೆ ಮಾತನಾಡಿದರು:

''ಮಕ್ಕಳೇ, ಪೂರ್ಣವೆಂದರೆ ಭಗವಂತ, ಈಶ್ವರ. **ಈಶಾವಾಸ್ಯಮಿದಂ ಸರ್ವಂ** – ನಮ್ಮ ಕಣ್ಣಿಗೆ ಕಾಣುವ ಈ ಜಗತ್ತೆಲ್ಲವೂ ಆ ಪರಮಾತ್ಮನಿಂದಲೇ ಮುಚ್ಚಿಹೋಗಿದೆ ಎಂದು ನಾವು ಭಾವಿಸಿಕೊಳ್ಳಬೇಕು. ಹಾಗೆ ಮಾಡಿದರೆ, ನಾನು ಹೇಳಿದ ಮಾತಿನ ಅರ್ಥ ನಿಮಗೆ ಭಾಸವಾಗುತ್ತದೆ. ಪರಮಾತ್ಮನು ಪ್ರತಿಯೊಬ್ಬರಲ್ಲಿಯೂ ಇದ್ದಾನೆ. ಅವನೇ ಇಡೀ ಪ್ರಪಂಚವನ್ನೂ ವ್ಯಾಪಿಸಿದ್ದಾನೆ. ಹೀಗಾಗಿ ಅವನು ಈಶನಾಗಿದ್ದಾನೆ. **ಈಶ** ಎಂದರೆ ಆಳುವವನು ಎಂದರ್ಥ. ರಾಜ್ಯವನ್ನು ಆಳುವ ರಾಜನಂತೆ ಅವನು ಆಳುವುದಿಲ್ಲ. ಎಲ್ಲ ಜೀವರಾಶಿಗಳ ಅಂತರಾತ್ಮನೂ, ಹಾಗೆಯೇ ಎಲ್ಲ ಜಡವಸ್ತುಗಳ ಸಾರಸತ್ವನೂ ಅವನೇ ಆಗಿದ್ದಾನೆ. ಅವನು ಒಂದು ವ್ಯಕ್ತಿಯಲ್ಲ; ತತ್ತ್ವ. ಆ ತತ್ತ್ವ ಅರಿವಿನ ರೂಪದ್ದು , ಜ್ಞಾನದ ರೂಪದ್ದು.

''ಮಕ್ಕಳೇ, ಹೀಗೆ ಭಾವಿಸುವುದರಿಂದ ಎಲ್ಲವೂ ಭಗವನ್ಮಯವೇ ಎಂಬುದು ನಮಗೆ ಗೊತ್ತಾಗುತ್ತದೆ. ಆದರೆ ನಮ್ಮ ಮನೆ, ಧನ ಕನಕಗಳು, ಕುಟುಂಬ – ಇವೇ ಶಾಶ್ವತ ಎಂಬ ಭ್ರಮೆ ನಮ್ಮನ್ನು ಕಾಡುತ್ತಿದೆ. ಈ ಭ್ರಮೆಯಿಂದ ನಾವು ಪಾರಾಗಬೇಕು. ಎಲ್ಲವೂ ಪರಮಾತ್ಮನಿಂದ ಆವೃತವಾಗಿದೆ ಎಂಬ ಜ್ಞಾನದಿಂದ ನಮ್ಮನ್ನು ನಾವು ಕಾಪಾಡಿಕೊಳ್ಳಬೇಕು. ನಮ್ಮಲ್ಲಿ ಇರುವ ಸಂಪತ್ತಿನ ವಿಷಯದಲ್ಲಾಗಲಿ, ಇತರರ ಸಂಪತ್ತಿನ ವಿಷಯದಲ್ಲಾಗಲಿ ಅತಿಯಾದ ಆಸೆ ಒಳ್ಳೆಯದಲ್ಲ. ಅತಿಯಾದ ಆಸೆಯಿಂದ ಜ್ಞಾನ ನಮಗೆ ದೂರವಾಗುತ್ತದೆ. ಅಜ್ಞಾನ ಕವಿದುಕೊಳ್ಳುತ್ತದೆ. ಇಷ್ಟಾಗಿಯೂ ಯಾರ ಹಣ ಇದು? ಎಲ್ಲವೂ ಭಗವಂತನದೇ ಅಲ್ಲವೆ?''

ಪ್ರವಚನ ಮುಗಿಯಿತು. ಆದರೆ ಬಂದಿದ್ದವರ ಮುಖದಲ್ಲಿ ಏನೋ ಕಳವಳ, ಅಸಮಾಧಾನ ಎದ್ದುಕಾಣುತ್ತಿತ್ತು. ಆಚಾರ್ಯ ಭಾರ್ಗವರು ಅದನ್ನು ಗಮನಿಸಿದರು. ಎದ್ದವರು, ಕೈಮುಗಿದುಕೊಂಡು, ಒಂದು ವಿನಂತಿಯನ್ನು ಮಾಡಿದರು: ''ಮಕ್ಕಳೇ, ಇದೊಂದು ಹೊಸ ವಿಚಾರ. ಇತ್ತೀಚಿಗೆ ನಮ್ಮ ಋಷಿಗಳು ಹೊಸದಾಗಿ ಚಿಂತಿಸಲು ಆರಂಭಿಸಿದ್ದಾರೆ. ಅಂಥ ಒಬ್ಬ ಮಹಾತ್ಮನ ಬಳಿಗೆ ನಾನು ಹೋಗಿದ್ದೆ. ಅವರು ನನಗೆ ತಿಳಿಸಿದ ಈ ವಿಚಾರ ನನಗೆ ಬಹಳ ಹಿಡಿಸಿತು. ಹಾಗೆಂದೇ ನಿಮ್ಮ ಬಳಿ ಹಂಚಿಕೊಂಡಿದ್ದೇನೆ. ನಿಮಗೆಲ್ಲರಿಗೂ ಶುಭವಾಗಲಿ.''

ದೇವದತ್ತನ ಮನಸ್ಸಿನಲ್ಲಿ ಕೂಡ ಸಂಶಯದ ಅಲೆಯೇ ಎದ್ದಿತ್ತು. ಸಂಜೆಯ ಅಗ್ನಿಕಾರ್ಯಗಳನ್ನು ಮಾಡುವ ಸಮಯದಲ್ಲಿ ಕೂಡ, ಆಚಾರ್ಯ ಭಾರ್ಗವರ ಮಾತುಗಳನ್ನೇ ಮೆಲುಕು ಹಾಕುತ್ತಿದ್ದನು. ಎಲ್ಲವೂ ಪರಮಾತ್ಮನೇ ಆದರೆ, ಆ ಭಾವನೆಯಷ್ಟೇ ಸಾಕಲ್ಲವೆ? ನಾವು ಮಾಡುವ ಈ ಕರ್ಮಗಳಿಗೆ ಅರ್ಥವಾದರೂ ಏನು? ಎಂದು ಅವನು ಅಂದುಕೊಂಡನು.

ಮರುದಿನ ಬೆಳಗ್ಗೆಯೂ ಅದೇ ಗುಂಗಿನಲ್ಲಿ ಇದ್ದ ದೇವದತ್ತನು, ಮಧ್ಯಾಹ್ನದ ಊಟ ಮುಗಿಸಿದ ಒಡನೆ, ಆಚಾರ್ಯ ಭಾರ್ಗವರ ಗುರುಕುಲಕ್ಕೆ ನಡೆದನು. ಆಚಾರ್ಯರು ತಮ್ಮ ಶಿಷ್ಯರಿಗೆ ವೇದಪಾರಾಯಣ ಮಾಡಿಸುತ್ತಿದ್ದರು. ಅದನ್ನು ಮುಗಿಸಿ, ದೇವದತ್ತನೊಡನೆ ಮಾತನಾಡಲು ಆರಂಭಿಸಿದರು. ದೇವದತ್ತನ ಸಂಶಯವನ್ನು ಕೇಳಿತಿಳಿದ ಆಚಾರ್ಯರು, ''ಮಗು, ಕರ್ಮಗಳನ್ನು ಬಿಡಬೇಕು ಎಂದು ಯಾರು ನಿನಗೆ ಹೇಳಿದವರು? ನಾವು ನೂರು ವರ್ಷಗಳ ತುಂಬು ಜೀವನವನ್ನು ನಡೆಸಬೇಕಪ್ಪಾ. ಹಾಗೆ ಬದುಕಿರುವವರೆಗೂ ಕರ್ಮಗಳನ್ನು ಮಾಡುತ್ತಲೇ ಬದುಕಬೇಕೆಂಬ ಇಚ್ಛೆಯನ್ನು ಮನಸ್ಸಿನಲ್ಲಿ ತುಂಬಿಕೊಂಡಿರಬೇಕು. ನಮ್ಮಂಥವರಿಗೆ ಬೇರೆ ಮಾರ್ಗವುಂಟೆ? ಜೀವನದಲ್ಲಿ ಬಹಳ ಅಶುಭಗಳು, ಕೆಡುಕುಗಳು ಉಂಟಾಗಬಹುದು. ಅವುಗಳಿಂದ ಪಾರಾಗಬೇಕಾದರೆ, ವೈದಿಕ ಕರ್ಮಗಳನ್ನು ಮಾಡದೆ ದಾರಿಯಿಲ್ಲ.''

ಈ ಉತ್ತರದಿಂದ ದೇವದತ್ತನಿಗೆ ನಿರಾಸೆಯಾಯಿತು. ಕೆಲವು ತಿಂಗಳುಗಳಿಂದ ಅವನಿಗೆ ಕರ್ಮಾನುಷ್ಠಾನದಲ್ಲಿ ನೀರಸಭಾವನೆ ಬಂದಿತ್ತು. 'ಜೀವನವೆಂದರೆ ಇಷ್ಟೆಯೆ?' ಎಂಬ ಚಿಂತನೆ ಆಗಾಗ್ಗೆ ಬರುತ್ತಿತ್ತು. ಜೀವನದ ಅರ್ಥವೇನು? ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡುತ್ತಿತ್ತು. ತನ್ನ ಈ ಮನಸ್ಥಿತಿಯನ್ನು ಅವನು ಆಚಾರ್ಯರಿಗೆ ತೋಡಿಕೊಂಡನು.

''ದೇವದತ್ತ, ನಿನ್ನ ಮನಸ್ಸಿನ ಸ್ಥಿತಿ ನನಗೆ ಚೆನ್ನಾಗಿ ಅರ್ಥವಾಗುತ್ತದೆ. ಚಿಂತನೆ ಮಾಡಬೇಕಪ್ಪಾ, ಚಿಂತನೆ! ಬರಿಯ ಕರ್ಮಗಳನ್ನು ಮಾಡಿಕೊಂಡಿದ್ದರೆ ಏನು ತಾನೇ ಪ್ರಯೋಜನ? ಆತ್ಮಜ್ಞಾನವೇ ನಿಜವಾದ ಜ್ಞಾನ. ಅದನ್ನು ಕಂಡುಕೊಳ್ಳದೆ ಇರುವವರು ನಿಜವಾಗಲೂ ತಮ್ಮನ್ನು ತಾವು ಕೊಂದುಕೊಂಡಂತೆಯೇ ಸರಿ. ಎಷ್ಟು ಅನರ್ಥಗಳಿಗೆ ಅವರು ಗುರಿಯಾಗುತ್ತಾರೆ, ಅಲ್ಲವೆ?! ಆತ್ಮಜ್ಞಾನದಿಂದಲೇ ಜೀವನದಲ್ಲಿ ನಿಜವಾದ ಸಾರ್ಥಕತೆ ಬರುತ್ತದೆ. ಆದರೆ ಎಲ್ಲೆಡೆ ನಾವು ನೋಡುತ್ತಿರುವುದು ಕರ್ಮಕ್ಕೇ ಪ್ರಾಧಾನ್ಯವಿರುವುವನ್ನು'' ಎಂದು ಬೇಸರಗೊಂಡು ಆಚಾರ್ಯ ಭಾರ್ಗವರು ನುಡಿದರು.

ದೇವದತ್ತನು ಆಚಾರ್ಯ ಭಾರ್ಗವರಲ್ಲಿ ಶರಣುಹೋದನು. ಆತ್ಮತತ್ತ್ವವನ್ನು ಉಪದೇಶಿಸಬೇಕೆಂದು ದೀನಭಾವದಿಂದ ಕೇಳಿಕೊಂಡನು. ಇದಕ್ಕೆ ಒಪ್ಪಿದ ಆಚಾರ್ಯರು ಅವನಿಗೆ ಈ ಉಪದೇಶವನ್ನು ಮಾಡಿದರು:

''ಮಗು, ದೇವದತ್ತ. ನಿಲ್ಲುವುದು, ಚಲಿಸುವುದು – ಇವೆಲ್ಲ ಸಾಪೇಕ್ಷ ಕ್ರಿಯೆಗಳು. ಆತ್ಮತತ್ತ್ವವು ನಿರಪೇಕ್ಷ. ಅದಕ್ಕಿಂತ ಮೀರಿ

ದುದು. ಇದಲ್ಲದೆ ಅದು ಎಲ್ಲೆಡೆಯೂ ಇರುವಂಥ ತತ್ತ್ವ. ನಿಶ್ಚಲವಾಗಿದ್ದರೂ, ಎಲ್ಲ ಕಡೆ ಅದು ದೊರಕುತ್ತದೆ. ಮಲಗಿದ್ದರೂ ಎಲ್ಲ ಕಡೆ ಹೋಗಿಬರುತ್ತದೆ. ಅಂದರೆ ಅದಿಲ್ಲದ ಕಡೆಯೇ ಇಲ್ಲ ಎಂದರ್ಥ. ಎಲ್ಲ ಕಡೆ ಇದೆ ಎಂದರೆ ಏನು ? ಅದನ್ನು ಬಿಟ್ಟು ಯಾವುದೂ ಇಲ್ಲ ಎಂದೇ ಅರ್ಥ. ಆ ತತ್ತ್ವವೇ ನಾವಾಗಿದ್ದೇವೆ ಎಂದು ತಿಳಿದುಕೊಳ್ಳುವುದೇ ಆತ್ಮಜ್ಞಾನ ಎನಿಸಿಕೊಳ್ಳುತ್ತದೆ.''

ಈ ಸಂದರ್ಭದಲ್ಲಿ ದೇವದತ್ತನು ಆಚಾರ್ಯರಿಗೆ ಪ್ರಶ್ನಿಸುತ್ತಾನೆ: ''ಆಚಾರ್ಯರೇ, ಆತ್ಮಜ್ಞಾನವನ್ನು ಪಡೆದ ಮಹಾಪುರುಷನ ಲಕ್ಷಣಗಳೇನು?'' ಆಚಾರ್ಯರು ಕಣ್ಣುಮುಚ್ಚಿಕೊಂಡು, ಭಾವಪೂರ್ಣವಾಗಿ ಹೇಳುತ್ತಾರೆ, ''ಆತ್ಮಜ್ಞಾನವೆಂದರೆ ಆತ್ಮಾನುಭೂತಿ. ಅದನ್ನು ಪಡೆದುಕೊಂಡ ಆತ್ಮಜ್ಞಾನಿಯು ಎಲ್ಲ ಜೀವಿಗಳೂ ತನ್ನ ಆತ್ಮವೆಂದೇ ಸಾಕ್ಷಾತ್ಕರಿಸಿಕೊಳ್ಳುತ್ತಾನೆ; ಎಲ್ಲ ಜೀವಿಗಳಲ್ಲಿಯೂ ತನ್ನ ಆತ್ಮವನ್ನೇ ಕಂಡುಕೊಳ್ಳುತ್ತಾನೆ. ಇದರ ಅರ್ಥ, ಎಲ್ಲೆಡೆ ಅವನಿಗೆ ಕೇವಲ ಆತ್ಮದರ್ಶನ ಮಾತ್ರವೇ ಆಗುತ್ತಿದೆ. ಈ ಐಹಿಕ ಜಗತ್ತು ಅವನ ಪಾಲಿಗೆ ಕಣ್ಮರೆಯಾಗುತ್ತದೆ.''

ಆಚಾರ್ಯರು ಮತ್ತೆ ಆತ್ಮಸ್ವರೂಪದ ಸಂಕ್ಷಿಪ್ತ ವಿವರಣೆಯನ್ನು ನೀಡುತ್ತಾರೆ: ''ಆತ್ಮವು ಹುಟ್ಟಿರುವುದಲ್ಲ. ಯಾವಾಗಲೂ ಇರುವಂಥದ್ದು. ಅದಕ್ಕೆ ಶರೀರವಿಲ್ಲ, ಮನಸ್ಸೂ ಇಲ್ಲ. ಎಲ್ಲ ಕಡೆ ಹಬ್ಬಿಕೊಂಡಿದೆ. ಈ ಜಗತ್ತು ಯಾವುದರ ಆಧಾರದ ಮೇಲೆ ನಡೆಯುವುದೋ ಆ ಸೂತ್ರವೇ ಆತ್ಮ.''

ದೇವದತ್ತನ ಮನಸ್ಸಿನಲ್ಲಿ ಇನ್ನೊಂದು ಸಂದೇಹ ಕಾಡಿತು : ''ಈ ಆತ್ಮಜ್ಞಾನವನ್ನು ಪಡೆದುಕೊಳ್ಳುವುದಕ್ಕೆ ಅರ್ಹತೆ ಏನು? ಇದನ್ನು ಪಡೆಯಲು ಏನು ಮಾಡಬೇಕು?'' ಇದನ್ನು ಅವನು ಆಚಾರ್ಯರಲ್ಲಿ ತೋಡಿಕೊಂಡನು. ಇದಕ್ಕೆ ಉತ್ತರವಾಗಿ ಆಚಾರ್ಯರು ಆತ್ಮಜ್ಞಾನಕ್ಕೆ ಬೇಕಾದ ಅರ್ಹತೆಯನ್ನು ಪಡೆಯಲು ಮಾಡಬೇಕಾದ ಸಾಧನಾವಿಧಾನವನ್ನು ಹೇಳಿಕೊಟ್ಟರು:

''ಮಗು, ಬರಿಯ ಕರ್ಮವನ್ನೇ ಮಾಡುತ್ತಿದ್ದರೆ ಆತ್ಮಜ್ಞಾನಕ್ಕೆ ಅರ್ಹತೆ ಲಭಿಸದು. ಹಾಗೆಯೇ ಕರ್ಮವನ್ನು ಬಿಟ್ಟು ದೇವತಾದಿಗಳ ಪೂಜೆ, ಉಪಾಸನೆ, ಧ್ಯಾನಗಳನ್ನು ಮಾಡುತ್ತ ಕುಳಿತರೆ ಇದಕ್ಕಿಂತ ಕೆಡುಕಾಗುತ್ತದೆ. ಉತ್ತಮವಾದ ಮಾರ್ಗವೇನು, ಗೊತ್ತೆ? ಕರ್ಮ ಮತ್ತು ಉಪಾಸನೆಗಳನ್ನು ಜೊತೆಜೊತೆಯಾಗಿ ಮಾಡುತ್ತ ಹೋಗುವುದು. ಮನಸ್ಸಿನಲ್ಲಿ ಭಗವಂತನ ಚಿಂತನೆ, ಸ್ಮರಣೆ, ಭಜನೆ ಸಂತತವೂ ನಡೆಯುತ್ತಿರಲಿ. ಬಾಹ್ಯದಲ್ಲಿ ನಿಷ್ಕಾಮಕರ್ಮವನ್ನು ಮಾಡುತ್ತ ಹೋಗುತ್ತಿರು. ಕ್ರಮೇಣ ನಿನ್ನ ಮನಸ್ಸು ಪವಿತ್ರವಾಗುತ್ತದೆ, ಏಕಾಗ್ರಗೊಳ್ಳುತ್ತದೆ; ಹೊರಜಗತ್ತಿನ ಮೇಲೆ ಜುಗುಪ್ಸೆ ಮೂಡುತ್ತದೆ. ಆಗ ಜ್ಞಾನದ ಅಂಕುರವಾಗುತ್ತದೆ. ಉಪಾಸನೆಯೇ ಬೇರೆ, ಕರ್ಮವೇ ಬೇರೆ ಎಂದು ನಮ್ಮ ಗುರುಗಳು ನಮಗೆ ಹೇಳಿಕೊಟ್ಟಿದ್ದಾರೆ. ಆದರೆ, ಅವೆರಡನ್ನೂ ನಮ್ಮ ಜೀವನದಲ್ಲಿ ಕೂಡಿಸಿಕೊಳ್ಳಬೇಕು ಎಂದು ಅವರೇ ಉಪದೇಶವನ್ನೂ ಮಾಡಿದ್ದಾರೆ. ಹೀಗೆ ಮಾಡಿದರೆ, ವೈದಿಕ ಕರ್ಮಗಳ ಮೂಲಕ ಸಾಧಾರಣ ಕರ್ಮಗಳನ್ನು ಮೀರಿಹೋಗಿ, ಉಪಾಸನೆಯ ಮೂಲಕ ನಾವು ಉಪಾಸನೆ ಮಾಡುವ ದೇವತೆಯಲ್ಲಿ ಆತ್ಮಭಾವವನ್ನು ಪಡೆದುಕೊಳ್ಳಬಹುದು. ಈ ಸ್ಥಿತಿಯು ಖಂಡಿತ ಪ್ರಾಪಂಚಿಕ ಸ್ಥಿತಿಗಿಂತ ಮೀರಿದ್ದು. ಆದರೆ, ಇದರಲ್ಲೇ ನಾವು ನಿಂತುಬಿಡಬಾರದು. ಉಪಾಸನೆ ಮತ್ತು ನಿಷ್ಕಾಮಕರ್ಮಗಳ ಮೂಲಕ ಮಾನಸಿಕ ಏಕಾಗ್ರತೆಯನ್ನು ಮತ್ತು ಪರಿಶುದ್ಧತೆಯನ್ನು ಗಳಿಸಿಕೊಂಡು, ಆತ್ಮಜ್ಞಾನವನ್ನು ಪಡೆದುಕೊಳ್ಳಲು ಪ್ರಯತ್ನಿಸಬೇಕು. ಆತ್ಮಜ್ಞಾನವನ್ನು ಹೊಂದುವುದೇ ಕರ್ಮಯೋಗ ಮತ್ತು ಧ್ಯಾನಯೋಗಗಳ ಉದ್ದೇಶ. ಯಾವುದೋ ಒಂದು ದೇವತಾ ಪದವಿಯನ್ನು ಪಡೆದುಕೊಳ್ಳುವುದಲ್ಲ.''

ಇಷ್ಟು ಹೇಳಿ, ಆಚಾರ್ಯರು ದೇವದತ್ತನ ಮುಖವನ್ನು ನೋಡಿದರು. ಅವನಿಗೆ ಸ್ವಲ್ಪ ಸಮಾಧಾನವಾಗಿದ್ದುದು ಕಂಡುಬಂತು. ಆದರೂ ಉಪಾಸನೆಯ ವಿಷಯದಲ್ಲಿ ಅವನಿಗೆ ಒಂದು ಸಂದೇಹವುಂಟಾಯಿತು. ಆಗಿನ ಕಾಲದಲ್ಲಿ ಎರಡು ರೀತಿಯ ಉಪಾಸನೆಗಳನ್ನು ಕೈಗೊಳ್ಳುತ್ತಿದ್ದರು. ಒಂದು ವ್ಯಾಕೃತ ಉಪಾಸನೆ, ಇನ್ನೊಂದು ಅವ್ಯಾಕೃತ ಉಪಾಸನೆ. ವ್ಯಾಕೃತ ಉಪಾಸನೆಯೆಂದರೆ, ಇಡೀ ಸೃಷ್ಟಿಯ ಸಮಷ್ಟಿರೂಪನಾದ ಹಿರಣ್ಯಗರ್ಭನ ಉಪಾಸನೆ. ಅವ್ಯಾಕೃತ ರೂಪವೆಂದರೆ, ಈ ಸೃಷ್ಟಿಗೆ ಕಾರಣವಾದ ಅವ್ಯಾಕೃತ ಅಥವಾ ಪ್ರಕೃತಿಯ ಉಪಾಸನೆ. ಇವೆರಡೂ ಬೇರೆ ಬೇರೆ ಉಪಾಸನಾ ವಿಧಾನಗಳು. ಇವುಗಳಲ್ಲಿ ಯಾವುದನ್ನು ಮಾಡಬೇಕು? ದೇವದತ್ತನ ಸಂದೇಹವನ್ನು ಪರಿಹರಿಸುತ್ತ, ಆಚಾರ್ಯರು ಅವನಿಗೆ ಹೇಳಿದರು: '' ಮಗು, ಈಗಾಗಲೇ ನಾನು ಉಪಾಸನೆ ಮತ್ತು ನಿಷ್ಕಾಮಕರ್ಮಗಳನ್ನು ಕೂಡಿಸಿಕೊಂಡೇ ಮಾಡಬೇಕೆಂದು ನಿನಗೆ ತಿಳಿಸಿಕೊಟ್ಟಿದ್ದೇನಷ್ಟೇ. ಇವೆರಡು ಉಪಾಸನಾ ವಿಧಾನಗಳ ವಿಷಯದಲ್ಲೂ ಇದೇ ಮಾರ್ಗವನ್ನು ಅನುಸರಿಸಬೇಕು. ಇವೆರಡೂ ಭಿನ್ನ ಮಾರ್ಗಗಳೆಂದು ನಮ್ಮ ಹಿರಿಯರಿಂದ ನಾವು ಕೇಳಿತಿಳಿದಿದ್ದೇವೆ. ಆದರೆ ಅವುಗಳನ್ನು ಪ್ರತ್ಯೇಕಿಸಿ, ಅನುಷ್ಠಾನ ಮಾಡುವುದು ಸರಿಯಲ್ಲ. ಅವೆರಡನ್ನೂ ಸೇರಿಸಿಕೊಂಡು ಉಪಾಸನೆ ಮಾಡುವುದೇ ಒಳ್ಳೆಯದು. ವ್ಯಾಕೃತ ಉಪಾಸನೆ ಅಥವಾ ಹಿರಣ್ಯಗರ್ಭ ಉಪಾಸನೆಯಿಂದ ಹಲವಾರು ಸಿದ್ಧಿಗಳು ಪ್ರಾಪ್ತವಾಗುತ್ತವೆ. ಆ ಮೂಲಕ ನಮ್ಮ ದಾರಿದ್ರ್ಯ, ಬಡತನಗಳನ್ನು ನೀಗಿಸಿಕೊಂಡು, ಅವ್ಯಾಕೃತ ಉಪಾಸನೆ ಅಥವಾ ಪ್ರಕೃತಿ ಉಪಾಸನೆಯ ಮೂಲಕ ಪ್ರಕೃತಿಲಯವನ್ನು ಹೊಂದಬಹುದು.''

ಸ್ವಲ್ಪಹೊತ್ತು ಬಿಟ್ಟು, ಆಚಾರ್ಯರು ನಿಟ್ಟುಸಿರುಬಿಟ್ಟು ದೇವದತ್ತನಿಗೆ ಹೇಳಿದರು: ''ಮಗೂ, ಈ ಎಲ್ಲ ಸ್ಥಿತಿಗಳನ್ನು ವೇದವೇ ಉಪದೇಶಿಸುತ್ತದೆ ಎನ್ನುವುದೇನೋ ನಿಜ. ಆದರೆ ಅವು ಆತ್ಮಜ್ಞಾನಕ್ಕೆ ಹೋಲಿಸಿದಲ್ಲಿ ನಶ್ವರವಾದುವು. ಇದನ್ನೆಲ್ಲ ನಾನು ಏಕೆ ಉಪದೇಶಿಸಿದೆ, ಗೊತ್ತೆ? ಅವುಗಳ ಕ್ಷಣಿಕತೆಯನ್ನು, ನಶ್ವರತೆಯನ್ನು ಚೆನ್ನಾಗಿ ತಿಳಿದುಕೊಂಡು, ವಿವೇಕಿಯಾದವನು ಆತ್ಮ

ಜ್ಞಾನಕ್ಕೆ ಮಾತ್ರ ಪ್ರಯತ್ನಮಾಡಬೇಕು. ನಮ್ಮ ಕರ್ಮ ಮತ್ತು ಉಪಾಸನೆಗಳ ಗುರಿ ಆತ್ಮಜ್ಞಾನಕ್ಕೆ ಬೇಕಾದ ಅರ್ಹತೆಯನ್ನು ಸಂಪಾದಿಸಿಕೊಳ್ಳುವುದಷ್ಟೇ ಆಗಿರಬೇಕು. ತಿಳಿಯಿತೆ?''

ದೇವದತ್ತನು ತನ್ನ ಮನೆಗೆ ಹಿಂತಿರುಗಿದನು. ಆದರೆ ಕೆಲವೇ ದಿನಗಳಲ್ಲಿ ಮತ್ತೊಂದು ಸಂಶಯ ಅವನನ್ನು ಕಾಡಲು ಆರಂಭಿಸಿತು. ''ಆತ್ಮಜ್ಞಾನವೇ ಮುಖ್ಯವಾದರೆ, ವೇದಗಳು ಕರ್ಮವನ್ನು ಮತ್ತು ಉಪಾಸನೆಯನ್ನು ಉಪದೇಶಿಸಿರುವುದಾದರೂ ಏಕೆ? ಆಚಾರ್ಯರೇನೋ, ಅವು ಮನಸ್ಸಿನ ಏಕಾಗ್ರತೆಗೆ ಮತ್ತು ಮನ ಶ್ಶುದ್ಧಿಗೆ ಎಂದು ಸಮಾಧಾನ ಹೇಳಿದರು. ಹಾಗಾದರೆ, ಆತ್ಮಜ್ಞಾನವನ್ನು ಗಳಿಸದೆ, ಕೇವಲ ಕರ್ಮ-ಉಪಾಸನೆಗಳನ್ನೇ ಶ್ರದ್ಧೆಯಿಂದ ಅನುಷ್ಠಾನ ಮಾಡುವ ವ್ಯಕ್ತಿಯ ಪ್ರಯತ್ನವೆಲ್ಲವೂ ವ್ಯರ್ಥವೆ? ಆಚಾರ್ಯರು ಅವುಗಳಿಂದ, ನಾವು ಉಪಾಸನೆ ಮಾಡುವ ದೇವತೆಯಲ್ಲಿ ಏಕಾತ್ಮಭಾವವನ್ನು ಪಡೆದು, ಉತ್ತಮ ಲೋಕವನ್ನು ಗಳಿಸಬಹುದು ಎಂದೇನೋ ಹೇಳಿದರು. ಅದನ್ನು ಗಳಿಸುವುದೂ ಒಂದು ದೊಡ್ಡ ಸಾಧನೆಯೇ ಅಲ್ಲವೆ?'' ಎಂದು ಅವನು ಚಿಂತಿಸುತ್ತಿದ್ದನು. ಒಂದು ವಾರದ ನಂತರ ಪುರುಸೊತ್ತು ಮಾಡಿಕೊಂಡು, ಆಚಾರ್ಯ ಭಾರ್ಗವರ ಹತ್ತಿರ ಮತ್ತೆ ಹೋದನು.

ದೇವದತ್ತನನ್ನು ನೋಡಿದೊಡನೆಯೇ ಆಚಾರ್ಯ ಭಾರ್ಗವರು ಅವನನ್ನು ಸ್ವಾಗತಿಸಿ ಹೇಳಿದರು. ''ಬಾಪ್ಪ , ದೇವದತ್ತ, ನನಗೆ ಗೊತ್ತಿತ್ತು. ನೀನು ಮತ್ತೆ ಖಂಡಿತ ಬರುವೆಯೆಂದು. ನಾನು ಹೇಳಿದ ವಿಷಯಗಳು ಬರೀ ಕರ್ಮಗಳಲ್ಲೇ ಮುಳುಗಿರುವ ಜನರ ಮನಸ್ಸನ್ನು ಪ್ರಕ್ಷುಬ್ಧಗೊಳಿಸುವುದೇನೋ ನಿಜವೇ. ಆದರೆ ನಮ್ಮ ವೈದಿಕ ಚಿಂತನೆಗಳು ನಿಧಾನವಾಗಿ ವಿಕಸನಗೊಳ್ಳುತ್ತಿವೆ. ಅನೇಕ ಋಷಿಗಳು ಕರ್ಮದಿಂದ ಧ್ಯಾನ, ಧ್ಯಾನದಿಂದ ತತ್ತ್ವ ಚಿಂತನೆಯ ಘಟ್ಟಗಳಿಗೆ ತಮ್ಮ ನಿಲುವನ್ನು ಉನ್ನತಗೊಳಿಸುತ್ತ ಇದ್ದಾರೆ. ಇಂಥ ಉನ್ನತ ತತ್ತ್ವಚಿಂತನೆಗಳನ್ನು ಉಪನಿಷತ್ತುಗಳು ಎಂದು ಕರೆಯುತ್ತಾರೆ.'' ತದನಂತರ, ದೇವದತ್ತನ ಮನಸ್ಸಿನಲ್ಲಿ ಉದ್ಭವಿಸಿದ ಸಂದೇಹಗಳನ್ನು ಕೇಳಿ ತಿಳಿದು, ಸ್ವಲ್ಪ ಹೊತ್ತು ಮೌನವಾಗಿ ಕುಳಿತು ವಿಚಾರ ಮಾಡಿದರು.

'' ಮಗು, ದೇವದತ್ತ, ನಿನ್ನ ಸಂದೇಹಗಳು ಸರಿಯಾದವುಗಳೇ ಆಗಿವೆ. ಅವುಗಳನ್ನು ಪರಿಹರಿಸಲು ವೇದಗಳು ಬೋಧಿಸುವ ರೀತಿಯನ್ನು ನಾವು ತಿಳಿದುಕೊಳ್ಳಬೇಕು. ಲೌಕಿಕ ಕಾರ್ಯಗಳಲ್ಲಿ ಮನುಷ್ಯನಿಗೆ ಸಹಜ ಆಸಕ್ತಿ, ಅಲ್ಲವೆ? ಇದರಿಂದ ಅವನು ತನ್ನ ಜೀವನವನ್ನು ಸಾರ್ಥಕ ಮಾಡಿಕೊಳ್ಳಲು ಸಾಧ್ಯವಿಲ್ಲ, ಹಾಗೆಂದೇ, ಅಂಥ ವ್ಯಕ್ತಿಗೆ ವೇದಗಳು ಧರ್ಮ ಅಂದರೆ, ಉನ್ನತ ಮಟ್ಟದ ಕರ್ತವ್ಯಗಳನ್ನು ಉಪದೇಶಿಸುತ್ತವೆ. ಇದರಿಂದ ಅವನು ತನ್ನ ಪ್ರಾಣಿಸಹಜವಾದ ಜೀವನವನ್ನು ತ್ಯಜಿಸಿ, ಹೆಚ್ಚು ಅರ್ಥವತ್ತಾದ ಜೀವನವನ್ನು ನಡೆಸಬಹುದು. ಇದೇ ವೈದಿಕ ಕರ್ಮಗಳ ಹಿಂದಿರುವ ಉದ್ದೇಶ. ಇಂಥ ಕರ್ಮಗಳಲ್ಲಿಯೂ ಯಾರಿಗೆ ಜುಗುಪ್ಸೆ ಬರುತ್ತದೆಯೋ, ಅವುಗಳಲ್ಲಿ ಅರ್ಥವಿಲ್ಲ ಎನ್ನಿಸುತ್ತದೆಯೋ, ಅಂಥವರು ಮಾತ್ರ ಆತ್ಮಜ್ಞಾನಕ್ಕೆ ಅರ್ಹರಾಗುತ್ತಾರೆ. ಹಾಗೆಂದು, ಕರ್ಮಗಳು ಮತ್ತು ಉಪಾಸನೆಗಳನ್ನು ಖಂಡಿತ ಕೀಳಾಗಿ ನೋಡಬಾರದು. ಅವು ಮನುಷ್ಯನ ಜೀವನವನ್ನು ಅದೆಷ್ಟೋ ಉನ್ನತ ಮಟ್ಟಕ್ಕೆ ಖಂಡಿತ ಒಯ್ಯುತ್ತವೆ. ಉನ್ನತ ಆಧ್ಯಾತ್ಮಿಕ ಅನುಭವಗಳನ್ನು ತಂದುಕೊಡುತ್ತವೆ. ಮನುಷ್ಯನ ಜೀವನವನ್ನು ಅರ್ಥವತ್ತಾಗಿ ಮಾಡುತ್ತವೆ. ಇಂಥ ನೆಲೆ ಖಂಡಿತ ಬಹಳ ದೊಡ್ಡ ಹಂತ. ಈ ಹಂತಕ್ಕೆ ಏರಿದವನಿಗೆ ಮುಂದಿನ ನೆಲೆಯಾದ ಆತ್ಮಜ್ಞಾನ ಅಷ್ಟೇನೋ ಕಷ್ಟವಲ್ಲ. ಆದರೆ ಅವನು ಅದಕ್ಕಾಗಿ ಇಚ್ಛಿಸಬೇಕು, ಅಷ್ಟೇ. ಈ ನೆಲೆಯಲ್ಲಿಯೇ ತೃಪ್ತಿಪಟ್ಟುಕೊಂಡು ಇರಬಾರದು.''

ಇಷ್ಟು ಹೇಳಿದ ಆಚಾರ್ಯ ಭಾರ್ಗವರು ಹಠಾತ್ತನೆ ಉದ್ವೇಗ ಭರಿತರಾದರು. ಕಣ್ಣುಗಳಲ್ಲಿ ನೀರು ಹರಿಯಲಾರಂಭಿಸಿತು. ಗದ್ಗದ ಕಂಠದಿಂದ ಅವರು ದೇವದತ್ತನಿಗೆ ಹೇಳಿದರು: ''ಮಗೂ, ವೇದಮಾತೆಯು ಅದೆಷ್ಟು ಕರುಣಾಶಾಲಿಯಾದವಳು! ಊಹಿಸುವುದಕ್ಕೂ ಸಾಧ್ಯವಿಲ್ಲ. ಎಂಥ ಉದಾತ್ತ ಮಹಾವ್ಯಕ್ತಿಗಳನ್ನು ಅವಳು ಸೃಷ್ಟಿಸಿದ್ದಾಳೆ, ಗೊತ್ತೇನು? ನನಗಿಂತ ಹಿರಿಯರೂ ಪೂಜ್ಯರೂ ಆದ ಉಗ್ರಶ್ರವಸರು ಪ್ರಕಾಂಡ ಕರ್ಮಠರು. ವೈದಿಕ ಕರ್ಮಗಳಲ್ಲಿ ಅವರದು ಸಿದ್ಧಹಸ್ತ. ಚಾಚೂತಪ್ಪದೆ ಅವರು ತಮ್ಮ ಮನೆಯ ಅಗ್ನಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಇದರ ಜೊತೆಗೆ ದಿನವೂ ಗಂಟೆಗಟ್ಟಲೆ ಉಪಾಸನೆ, ಧ್ಯಾನಗಳಲ್ಲಿ ಅವರು ತೊಡಗುತ್ತಿದ್ದರು. ಸೂರ್ಯೋಪಾಸನೆಯನ್ನು ಪ್ರತಿದಿನ ಮಾಡುತ್ತಿದ್ದರು. ತಮ್ಮ ನೆರೆಹೊರೆಯವರಿಂದ ಬಹಳ ಗೌರವವನ್ನು ಸಂಪಾದಿಸಿದ್ದರು. ಈಗ ಕಾಯಿಲೆ ಹಿಡಿದು ಮಲಗಿದ್ದಾರೆ. ಇಂದೋ ನಾಳೆಯೋ ಎಂಬಂತೆ ಇದೆ ಅವರ ಸ್ಥಿತಿ. ಕರ್ಮ-ಉಪಾಸನೆಗಳ ಮೂಲಕ ಅದೆಷ್ಟು ಮನಃಪಕ್ವತೆಯನ್ನು ಪಡೆಯಬಹುದು ಎನ್ನುವುದನ್ನು ಅವರನ್ನು ನೋಡಿದರೆ ತಿಳಿಯುತ್ತದೆ. ನಾನು ಅವರನ್ನು ನೋಡಲು ನಾಳೆ ಅವರ ಗ್ರಾಮಕ್ಕೆ ಹೊರಟಿದ್ದೇನೆ. ನೀನೂ ಬಂದರೆ ಕರೆದುಕೊಂಡು ಹೋಗುತ್ತೇನೆ. ಆಗ ನಾನು ಹೇಳಿದ ಮಾತಿನ ಅರ್ಥ ನಿನಗೆ ಆಗುತ್ತದೆ.''

ಮರುದಿನ ಬೆಳಗ್ಗೆಯೆ ದೇವದತ್ತನು ಭಾರ್ಗವರ ಮನೆಗೆ ಬಂದುಬಿಟ್ಟನು. ಒಂದು ಎತ್ತಿನ ಗಾಡಿಯಲ್ಲಿ ಕುಳಿತು ಇಬ್ಬರೂ ಹೊರಟರು. ಸರಸ್ವತೀ ನದಿಯ ತಟದಲ್ಲಿಯೇ ರಸ್ತೆ ಸಾಗುತ್ತಿತ್ತು. ಒಂದು ಕಡೆ ನಯನಮನೋಹರವಾದ ನದಿ ಹರಿಯುತ್ತಿದ್ದರೆ, ಇನ್ನೊಂದು ಕಡೆ ದಟ್ಟ ಅರಣ್ಯ ಬೆಟ್ಟಗಳ ಸಾಲು. ಇವುಗಳ ನಡುವಿನ ಕಿರಿದಾದ ಕಣಿವೆಯಲ್ಲಿ ರಸ್ತೆ ಸಾಗುತ್ತಿತ್ತು. ಈ ಮೋಹಕ ಪ್ರಕೃತಿ ಸೌಂದರ್ಯವನ್ನು ಸವೆಯುತ್ತ ಇಬ್ಬರೂ ಸಾಗಿದರು. ಆದರೆ ಇಬ್ಬರ ಹೃದಯವೂ ಭಾರವಾಗಿತ್ತು. ಆಚಾರ್ಯ ಭಾರ್ಗವರಂತೂ ದುಃಖದಿಂದ ನಿಟ್ಟುಸಿರು ಬಿಡುತ್ತಿದ್ದರು. ಮೂರು ಗಂಟೆಗಳ ಪ್ರಯಾಣದ ನಂತರ, ನದಿಯ ಪಕ್ಕದ ಗ್ರಾಮವೊಂದರ ವಿಶಾಲವಾದ ಮನೆಯ ಮುಂದೆ ಗಾಡಿ ನಿಂತಿತು. ಮನೆಯೊಳಗೆ ಹೋದರೆ, ಹತ್ತಾರು ಬಂಧುಬಾಂಧವರು

ಈಗಾಗಲೇ ನೆರೆದಿದ್ದರು. ದೊಡ್ಡ ಕೊಠಡಿಯ ಮಧ್ಯೆ ಹಾಕಿದ್ದ ಹಾಸಿಗೆಯ ಮೇಲೆ ವೃದ್ಧರೊಬ್ಬರು ಮಲಗಿದ್ದರು. ಉಸಿರು ಬಿಡಲು ಕಷ್ಟವಾಗುತ್ತಿದ್ದರೂ, ಹಸನ್ಮುಖಿಗಳಾಗಿದ್ದರು. ತೇಜಸ್ಸಿನಿಂದ ಅವರ ಮುಖ ಬೆಳಗುತ್ತಿತ್ತು. ಆಚಾರ್ಯ ಭಾರ್ಗವರು ಮತ್ತು ದೇವದತ್ತರಿಬ್ಬರೂ ಅವರ ಹಾಸಿಗೆಯ ಹತ್ತಿರ ಹೋಗಿ ನಿಂತರು. ಭಾರ್ಗವರನ್ನು ಗುರುತಿಸಿದ ವೃದ್ಧ ಉಗ್ರಶ್ರವಸರು ತಲೆ ಅಲ್ಲಾಡಿಸಿದರು. ಮೇಲುಗಡೆ ಕೈತೋರಿಸಿ, ''ಹೊರಟಿದ್ದೇನೆ ಎನ್ನುವಂತೆ ಸನ್ನೆ ಮಾಡಿದರು.

ಐದು-ಹತ್ತು ನಿಮಿಷಗಳ ಕಾಲ ಇಡೀ ವಾತಾವರಣ ನೀರವವಾಗಿತ್ತು. ಸನಿಹದಲ್ಲಿಯೇ ಉರಿಯುತ್ತಿದ್ದ ಹೋಮಾಗ್ನಿಯ ಚಟಚಟ ಶಬ್ದದ ಹೊರತು, ಬೇರೆ ಯಾವ ಶಬ್ದವೂ ಕೇಳಿಸುತ್ತಿರಲಿಲ್ಲ. ಹಾಸಿಗೆಯ ಪಕ್ಕದಲ್ಲಿದ್ದ ಕಿಟಕಿಯಿಂದ ಸೂರ್ಯನ ಕಿರಣಗಳು ತೂರಿಬರುತ್ತಿದ್ದವು. ಹಠಾತ್ತನೆ, ಮಲಗಿದ್ದ ವೃದ್ಧರು ಕುಳಿತುಕೊಳ್ಳಲು ಪ್ರಯತ್ನಿಸಿದರು. ಅವರ ಮಕ್ಕಳು ದಿಂಬುಗಳ ಆಸರೆ ಕೊಟ್ಟು ಕುಳ್ಳಿರಿಸಿದರು. ತಮ್ಮ ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ, ನಮಸ್ಕಾರ ಮಾಡುತ್ತ, ಕಣ್ಣುಗಳನ್ನು ಮೇಲೆ ಮಾಡಿ ವೃದ್ಧರು ಸಣ್ಣದನಿಯಿಂದ, ಆದರೆ ಅತ್ಯಂತ ಸ್ಪಷ್ಟವಾಗಿ, ಈ ಪ್ರಾರ್ಥನೆಯನ್ನು ಮಾಡಿದರು:

'' ಓ ಸೂರ್ಯದೇವ, ನಿನ್ನ ಮಂಡಲವು ಬಂಗಾರದ ಪಾತ್ರೆಯಂತೆ ಇದೆ. ನಿನ್ನಲ್ಲಿ ಅಂತರ್ಗತವಾದ ಪರಮಾತ್ಮನನ್ನು ಅದು ಮುಚ್ಚಿದೆ. ನಿನ್ನ ಪ್ರಕಾಶಮಯವಾದ ರಶ್ಮಿಗಳು ಅವನನ್ನು ನಾನು ಕಾಣಲು ಬಿಡುತ್ತಿಲ್ಲ. ದಯವಿಟ್ಟು ಅವುಗಳನ್ನು ನಿವಾರಿಸಿ, ನಿನ್ನ ಸತ್ಯರೂಪವನ್ನು ನೋಡಲು ನನಗೆ ಅನುವು ಮಾಡಿಕೊಡು. ಏಕೆಂದರೆ, ನನ್ನ ಜೀವನದ ಉದ್ದಕ್ಕೂ ಸತ್ಯರೂಪಿಯಾದ ಪರಮಾತ್ಮನ ಉಪಾಸನೆಯನ್ನು ನಾನು ಮಾಡಿದ್ದೇನೆ. ನಾನು ಮಾಡಬೇಕಾದ ಆಚರಣೆಗಳನ್ನು ಮತ್ತು ಉಪಾಸನೆಗಳನ್ನು ಯಥಾವತ್ತಾಗಿ ನಡೆಸಿಕೊಂಡು ಬಂದಿದ್ದೇನೆ. ಸೂರ್ಯಮಂಡಲ ಮಧ್ಯವರ್ತಿಯಾದ ಹೇ ಪರಮಾತ್ಮ, ನನ್ನ ಇಡೀ ಜೀವನದುದ್ದಕ್ಕೂ ನೀನೇ ಪೋಷಕನಾಗಿದ್ದೀಯೆ, ಪಾಲಕನೂ ಆಗಿದ್ದೀಯೆ. ನಿನ್ನನ್ನು ನಾನು ಕಾಣುವಂತೆ ಮಾಡಲು ನಿನ್ನ ಪ್ರಖರವಾದ ಕಿರಣಗಳನ್ನು ದೂರಸರಿಸು. ನಾನು ನಿನ್ನಲ್ಲಿ ಐಕ್ಯಭಾವವನ್ನು ಹೊಂದುವಂತಾಗಲಿ. ಇಡೀ ಜೀವನದುದ್ದಕ್ಕೂ ನಿನ್ನ ಉಪಾಸನೆಯನ್ನು ಮಾಡಿರುವ ನನ್ನನ್ನು ನಿನ್ನಲ್ಲಿ ತಾದಾತ್ಮ್ಯಗೊಳಿಸು.''

ತದನಂತರ, ತಮ್ಮ ತಲೆಯನ್ನು ಕೆಳಕ್ಕೆ ಇಳಿಸಿದ ವೃದ್ಧರು, ಮುಗಿದ ಕೈಗಳನ್ನೂ ಕೆಳಕ್ಕೆ ಇಳಿಸಿದರು. ಪ್ರಾರ್ಥನೆಯನ್ನು ಮುಂದುವರೆಸಿದರು: ''ನನ್ನ ಪ್ರಾಣವು ಎಲ್ಲ ಕಡೆ ಬೀಸುತ್ತಿರುವ ಮುಖ್ಯಪ್ರಾಣನಾದ ಹಿರಣ್ಯಗರ್ಭನಲ್ಲಿ ಸೇರಿಹೋಗಲಿ. ಯಾವ ಅಗ್ನಿಯನ್ನು ನಾನು ನನ್ನ ಜೀವನದಲ್ಲಿ ಹಗಲಿರುಳೂ ಉಪಾಸನೆ ಮಾಡಿದ್ದೆನೋ, ಅದರಲ್ಲಿಯೇ ನನ್ನ ಶರೀರವು ಭಸ್ಮವಾಗಿ



ಹೋಗಲಿ. ಸತ್ಯರೂಪನೂ, ಓಂಕಾರರೂಪನೂ ಅಗ್ನಿರೂಪನೂ ಆದ ಹೇ ಪರಮಾತ್ಮ, ನಾನು ಈ ಅಂತ್ಯಕಾಲದಲ್ಲಿ ಯಾವ ನಿನ್ನ ಅಮೃತರೂಪವನ್ನು ಸ್ಮರಣೆ ಮಾಡಬೇಕೋ, ಅದನ್ನು ಚಾಚೂ ತಪ್ಪದೆ ನನ್ನ ನೆನಪಿಗೆ ತಂದುಕೊಡು. ನಾನು ನನ್ನ ಜೀವನದುದ್ದಕ್ಕೂ ಪ್ರತಿನಿತ್ಯವೂ ಎಡೆಬಿಡದೆ ಮಾಡಿದ ಕರ್ಮ, ಉಪಾಸನೆಗಳನ್ನು ನೀನು ಪರಿಗಣಿಸಿ, ನನಗೆ ಸದ್ಗತಿಯನ್ನು ಕೊಡು.''

ಇನ್ನು ತಮ್ಮ ಮುಂದೆ ಉರಿಯುತ್ತಿದ್ದ ವೈದಿಕಾಗ್ನಿಯನ್ನೇ ದಿಟ್ಟಿಸುತ್ತ ವೃದ್ಧರು ಪ್ರಾರ್ಥನೆ ಮಾಡಿದರು: '' ಓ ಅಗ್ನಿರೂಪನಾದ ಪರಮಾತ್ಮ, ನನ್ನನ್ನು ಒಳ್ಳೆಯ ದಾರಿಯಲ್ಲಿ , ಉತ್ತಮ ಲೋಕಗಳಿಗೆ ಕರೆದುಕೊಂಡು ಹೋಗು. ನೀನು ಎಲ್ಲ ಕರ್ಮಗಳ ಬಗ್ಗೆ ಮತ್ತು ಅವುಗಳ ಫಲಗಳ ಬಗ್ಗೆ ತಿಳಿದಿರುವ ಸರ್ವಜ್ಞನಾಗಿದ್ದೀಯೆ. ನನ್ನಿಂದ ಏನಾದರೂ ತಪ್ಪಾಗಿದ್ದರೆ, ಅಪಚಾರವಾಗಿದ್ದರೆ, ಅವುಗಳನ್ನು ಹೋಗಲಾಡಿಸು. ಅಗ್ನಿದೇವ. ಇಷ್ಟು ವರ್ಷಗಳ ಕಾಲ ನಿನ್ನ ಸೇವೆ, ಆರಾಧನೆಗಳನ್ನು ನಾನು ಮಾಡುತ್ತ ಬಂದಿದ್ದೇನೆ. ನನ್ನ ಶರೀರ ಬಹಳ ಕೃಶವಾಗಿ ಹೋಗಿದೆ. ನಾನು ಬಹಳ ದುರ್ಬಲನಾಗಿದ್ದೇನೆ. ಈ ಶರೀರವನ್ನು ಬಿಟ್ಟುಹೋಗಲು ಕಾತುರನಾಗಿದ್ದೇನೆ. ಹೀಗಾಗಿ ಹಿಂದಿನಂತೆ ನನಗೆ ನಿನ್ನ ಸೇವೆಯನ್ನು ಮಾಡಲು ಆಗುವುದಿಲ್ಲ. ಆದಕಾರಣ, ಕೇವಲ ನಮಸ್ಕಾರವನ್ನು ಮಾತ್ರ ಮಾಡುತ್ತಿದ್ದೇನೆ. ಹೇ ದೇವದೇವ, ನಿನಗೆ ಮತ್ತೆ ಮತ್ತೆ ನಮಸ್ಕಾರಗಳು, ಮತ್ತೆ ಮತ್ತೆ ನಮನಗಳು''

ಇಷ್ಟು ನುಡಿಯುತ್ತಿದ್ದಂತೆಯೇ ವೃದ್ಧ ಉಗ್ರಶ್ರವಸರ ಉಸಿರು ನಿಂತಿತು. ಆದರೆ ಪ್ರಾರ್ಥನಾ ಭಾವದ ಅವರ ಕಣ್ಣುಗಳು ತೆರೆದೇ ಇದ್ದವು; ಕೈಗಳು ಮುಗಿದೇ ಇದ್ದವು. ಸುತ್ತಲೂ ನಿಂತಿದ್ದವರು ಈ ಮಹಾತ್ಮನಿಗೆ ಕೈಬಾಗಿ ನಮಿಸಿದರು. ಅವರೆಲ್ಲರ ಕಣ್ಣುಗಳ ಅಂಚುಗಳಲ್ಲಿ ಅಶ್ರು ಚಿಮ್ಮಿತು. ಆದರೆ ಹೃದಯದಲ್ಲಿ ಹೇಳಲಾಗದ ಧನ್ಯತಾಭಾವ ಮೂಡಿತು. ಇಡೀ ವಾತಾವರಣ ಸ್ತಬ್ಧವಾಗಿತ್ತು; ಪವಿತ್ರತೆಯಿಂದ ತುಂಬಿಕೊಂಡಿತ್ತು. ಮನೆಯ ಹೊರಗಿದ್ದ ಸೂರ್ಯನು ಇನ್ನೂ ಪ್ರಖರವಾಗಿ ಬೆಳಗಲಾರಂಭಿಸಿದನು; ಮನೆಯ ಒಳಗಿದ್ದ ಅಗ್ನಿಯು ಇನ್ನೂ ಜೋರಾಗಿ ಉರಿಯಲಾರಂಭಿಸಿತು.





ಭಕ್ತ ರಾಖಾ


ಕಥೆ: ಟಿ.ಎಂ. ಸುಂದರರಾಮನ್

ಚಿತ್ರ: ಸದಾಶಿವಂ

1 ಹಿಂದೆ ಪಂಡರಾಪುರದಲ್ಲಿ ಪಾಂಡುರಂಗನ ಭಕ್ತನೊಬ್ಬ ಇದ್ದ. ಅವನ ಹೆಸರು ರಾಖಾ. ಅವನ ಪತ್ನಿ ಪಾಖಾ. ಅವರಿಗೆ ಒಬ್ಬಳು ಮಗಳಿದ್ದಳು. ಅವರು ವೃತ್ತಿಯಿಂದ ಕುಂಬಾರರಾಗಿದ್ದರು.








4
ಪಾಖಾ, ಪಾಂಡುರಂಗನು ನಮ್ಮನ್ನು ಮಹಾಪಾಪದಿಂದ ಪಾರುಮಾಡಿದ. ಆದ್ದರಿಂದ ನಾವು ಅವನಿಗೋಸ್ಕರವೇ ಬದುಕೋಣ.
ನಿಜ ಸ್ವಾಮಿ. ದೇವರು ಈ ರೀತಿ ಪ್ರಪಂಚದ ಎಲ್ಲ ಜೀವಿಗಳನ್ನೂ ರಕ್ಷಿಸುತ್ತಿರುವಾಗ, ಅವನ ಸಂಪೂರ್ಣ ಕೃಪೆಗಾಗಿ ಜೀವಿಸುವುದೇ ನಮ್ಮ ಜೀವನದ ಗುರಿಯಾಗಿದೆ.
ರಾಖಾ ತನ್ನೆಲ್ಲ ಸೊತ್ತನ್ನು ಸೇವೆಗಾಗಿ ವಿನಿಯೋಗಿಸಿದ. ತಮ್ಮ ಕುಟುಂಬವನ್ನು ಸಣ್ಣ ಒಂದು ಗುಡಿಸಿಲಿಗೆ ಸ್ಥಳಾಂತರ ಮಾಡಿದ.
5
ರಾಖಾ ಧರಿಸುತ್ತಿದ್ದ ಒಂದೇ ಒಂದು ಜೊತೆ ಬಟ್ಟೆ ಹರಿದು ಹೋಯಿತು. ಒಂದು ದಿನ ಅವನು ಬೀದಿಯಲ್ಲಿ ಬಿದ್ದಿದ್ದ ಹರಿದ ಬಟ್ಟೆಯನ್ನು ಎತ್ತಿಕೊಂಡ. ಆಗ ಅಲ್ಲಿಗೆ ಒಬ್ಬ ಬಡವ ಓಡುತ್ತ ಬಂದ ...
ಅದನ್ನೆತ್ತಿಕೊಳ್ಳಬೇಡ. ಇದನ್ನು ನಾನು ನನ್ನ ಪಂಚಿನ ಸುತ್ತ ಸುತ್ತಿಕೊಳ್ಳುತ್ತೇನೆ. ನೀನಾದರೋ ಭಕ್ತ. ಈ ಬಟ್ಟೆಯ ಮೇಲೆ ನಿನಗೆ ಮೋಹವುಂಟಾದೀತು.
ಸ್ವಾಮಿ, ದಯವಿಟ್ಟು ನನ್ನನ್ನು ಕ್ಷಮಿಸಿ.
ರಾಖಾ ಎಲೆಗಳನ್ನು ಜೋಡಿಸಿ, ಹೊಲಿದು ಅದರಿಂದ ತನ್ನ ದೇಹವನ್ನು ಮುಚ್ಚಿಕೊಂಡ.
6
ರಾಖಾನ ಮಗಳು ಹಾಗೂ ನಾಮದೇವನ ಮಗಳು ಚಂದ್ರಭಾಗಾ ನದಿಯಲ್ಲಿ ಬಟ್ಟೆ ಒಗೆಯುತ್ತಿದ್ದರು.
ನಿನ್ನ ಬಟ್ಟೆಯಿಂದ ನನ್ನ ಮೇಲೆ ಕೊಳೆ ಎರಚುತ್ತಿದೆ. ತುಸು ಜಾಗ್ರತೆಯಾಗಿ ಒಗೆ.
ನೀನು ಕುಂಬಾರರ ಮಗಳು. ನಿನ್ನ ತಂದೆ ಕಪಟ ಭಕ್ತ. ನೀನು ಅಷ್ಟೊಂದು ಸ್ವಚ್ಛತೆಯನ್ನು ಆಚರಿಸುವುದೇಕೆ?
ಪಾಂಡುರಂಗನು ನನ್ನ ತಂದೆಯ ಭಕ್ತಿಗೆ ಮೆಚ್ಚಿ ಬೆಕ್ಕಿನ ಮರಿಯನ್ನು ಒಲೆಯಿಂದ ಕಾಪಾಡಿದ. ನಿನ್ನ ತಂದೆ ಪಾಂಡುರಂಗನೊಂದಿಗೆ ಮತ್ತೆ ಮತ್ತೆ ಮಾತನಾಡಿ ಅವನಿಗೆ ಕಷ್ಟ ಕೊಡುತ್ತಿದ್ದಾನೆ.
ನನ್ನ ತಂದೆಯ ಭಕ್ತಿಯಲ್ಲಿ ನೀನು ಕುಂದು ಕಾಣುತ್ತಿದ್ದೀಯಾ?
7
ನಾಮದೇವನ ಮಗಳು ಕೂಡಲೇ ತನ್ನ ತಂದೆಯ ಬಳಿಗೆ ಓಡಿ ಬಂದು, ಅವನಿಗೆ ದೂರು ಹೇಳಿದಳು.
ಅಪ್ಪಾ, ನಿನ್ನ ಭಕ್ತಿಗಿಂತ ಆ ಕುಂಬಾರನ ಭಕ್ತಿಯೇ ಮೇಲಂತೆ. ಅವನ ಮಗಳು ಹೇಳುತ್ತಿದ್ದಾಳೆ.
ಅವಳ ಒತ್ತಾಯಕ್ಕೆ ಮಣಿದು ಅವನು ಪಾಂಡುರಂಗನನ್ನೇ ಕೇಳಿದ, ''ಯಾರು ಶ್ರೇಷ್ಠ ಭಕ್ತ?'' ಎಂದು.
ನೀನು ಅಷ್ಟೊಂದು ಉದ್ವೇಗಕ್ಕೆ ಒಳಗಾಗಬೇಡ. ಭಕ್ತರು ಉದ್ವೇಗಕ್ಕೆ ಒಳಗಾಗುವುದಿಲ್ಲ. ಯಾರು ಶ್ರೇಷ್ಠ ಭಕ್ತನೆಂಬುದು ಪಾಂಡುರಂಗನಿಗಷ್ಟೇ ಗೊತ್ತು.


8
ನಾಮದೇವನು ಪಾಂಡುರಂಗನ ಮೇಲೆ ಹಲವು ಅಭಂಗಗಳನ್ನು ರಚಿಸಿ ಹಾಡುತ್ತಾ ಅವನ ಪೂಜೆ ಮಾಡುತ್ತಿದ್ದ. ಇದರಿಂದ ಸಂತುಷ್ಟನಾದ ಪಾಂಡುರಂಗನು ಅವನೊಂದಿಗೆ ನೇರ ಮಾತನಾಡುತ್ತಿದ್ದ.
ರಾಖಾನಿಗೆ ಸಮಾನನಾದ ಭಕ್ತನಿಲ್ಲ.
ಹಾಗಿದ್ದರೆ ಅದನ್ನು ನನಗೆ ತೋರಿಸು.
ನಾನು ರುಕ್ಮಿಣಿಯೊಂದಿಗೆ ರಾಖಾನ ಮನೆಗೆ ಹೋಗುತ್ತೇನೆ. ನೀನು ಅಲ್ಲಿಗೆ ಬಾ.
9
ರಾಖಾ ಕಾಡಿನಲ್ಲಿ ಕಟ್ಟಿಗೆ ಸಂಗ್ರಹಿಸುತ್ತಿದ್ದ. ಅವನು ನಿರಂತರ 'ವಿಠಲ, ವಿಠಲ' ಎಂದು ಜಪಿಸುತ್ತಿದ್ದ.
ನಾಮದೇವ, ನೋಡು. ರಾಖಾ ನಮ್ಮತ್ತ ಸ್ವಲ್ಪವೂ ಗಮನಕೊಡದೆ ಹೇಗೆ ನನ್ನ ನಾಮಜಪ ಮಾಡುತ್ತಿದ್ದಾನೆ!
ನಾಮದೇವ, ಹೀಗೆ ನಾಮಜಪ ಮಾಡುವುದಕ್ಕಾಗಿ ರಾಖಾ ತನ್ನ ಎಲ್ಲವನ್ನೂ ತ್ಯಾಗ ಮಾಡಿದ. ಅವನ ಭಕ್ತಿಯನ್ನು ಗಮನಕೊಟ್ಟು ನೋಡು.
ವಿಠಲ, ವಿಠಲ, ವಿಠಲ! ವಿಠಲ!
10
ರುಕ್ಮಿಣೀದೇವಿಯು ತನ್ನ ಅಮೂಲ್ಯವಾದ ಮಾಣಿಕ್ಯದ ಬಳೆಯನ್ನು ಕಟ್ಟಿಗೆಯ ನಡುವೆ ಅಡಗಿಸಿಟ್ಟಳು. ಅನಂತರ ಅವರಿಬ್ಬರೂ ಒಂದು ಮರದ ಹಿಂದೆ ಅಡಗಿ ನಿಂತು ರಾಖಾನನ್ನು ನೋಡಿದರು.
11
ರಾಖಾ ಒಂದು ಕಟ್ಟಿಗೆಯ ತುಂಡನ್ನು ಆರಿಸಿದ. ಆ ಮಾಣಿಕ್ಯದ ಬಳೆಯನ್ನು ಅವನು ಸಾಮಾನ್ಯ ಕಟ್ಟಿಗೆಯೆಂದೇ ಭಾವಿಸಿದ.
ಪಾಖಾ, ಈ ಮಾಣಿಕ್ಯದ ಬಳೆಯನ್ನು ನೋಡು. ನಿನಗಿದು ಬೇಕೆ?
ಸ್ವಾಮಿ ನನಗೆ ಬೇಡ. ಪಾಂಡುರಂಗ ನಮ್ಮನ್ನು ಪರೀಕ್ಷೆ ಮಾಡುತ್ತಿದ್ದಾನೆ. ನಾವು ಈ ಕ್ಷಣವೇ ಇಲ್ಲಿಂದ ಹೊರಟುಹೋಗೋಣ.



ಜೀವಿ ಶುದ್ಧವಾಗದ ಹೊರತು ಭಗವಂತನಲ್ಲಿ ಶ್ರದ್ಧೆ ಭಕ್ತಿ ಉಂಟಾಗದು — ಮನಸ್ಸು ಏಕಾಗ್ರವಾಗದು, ಸಿಕ್ಕಿಸಿಕ್ಕಿದ ಕಡೆಗೆ ಹರಿದು ಹೋಗುತ್ತಿರುತ್ತದೆ. ನೀನು ಸಾಂಸಾರಿಕ ಜೀವನವನ್ನು ನಡೆಸಿಕೊಂಡು ಹೋಗುತ್ತಿರುವುದೇನೂ ತಪ್ಪಲ್ಲ. ಆದರೆ ಭಗವಂತನ ಪಾದಪದ್ಮಗಳಲ್ಲಿ ಮನಸ್ಸನ್ನಿಟ್ಟು ಕಾಮನಾಶೂನ್ಯನಾಗಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಿರಬೇಕು.

— ಶ್ರೀರಾಮಕೃಷ್ಣರು





ಬ್ರಿಸ್ಬೇನಿನಲ್ಲಿ ವೇದಾಂತ ಸೆಂಟರ್ ಹಾಗೂ ಬಹೂಪಯೋಗಿ ಕಟ್ಟಡದ ಉದ್ಘಾಟನೆ

ಆಸ್ಟ್ರೇಲಿಯಾದ ಸಿಡ್ನಿಯಲ್ಲಿರುವ **ವೇದಾಂತ ಸೆಂಟರ್**ನ ಬ್ರಿಸ್ಬೇನ್ ಶಾಖೆ ಹಾಗೂ ಅಲ್ಲಿನ ಬಹೂಪಯೋಗಿ ಕಟ್ಟಡದ ಉದ್ಘಾಟನೆಯು ೨೦೧೮ರ ಜೂನ್ ೨೮ 'ಸ್ನಾನಯಾತ್ರೆ'ಯ ಪುಣ್ಯದಿನದಂದು ಆರಂಭವಾಗಿ, ಜೂನ್ ೩೦ರಂದು ಕೊನೆಗೊಂಡಿತು.

ಸಿಡ್ನಿ ವೇದಾಂತ ಸೆಂಟರ್‌ಗೆ ಸ್ಪ್ರಿಂಗ್‌ಫೀಲ್ಡ್ ಸಿಟಿ ಕಾರ್ಪೊರೇಶನ್ ವತಿಯಿಂದ ೫೦ ಎಕರೆ ಜಮೀನು ದೇಣಿಗೆಯಾಗಿ ಲಭಿಸಿದ್ದು, ಬ್ರಿಸ್ಬೇನ್ ನಗರದ ಹೊರವಲಯದಲ್ಲಿರುವ ಸ್ಪ್ರಿಂಗ್‌ಫೀಲ್ಡ್‌ನಲ್ಲಿ ಈ ಕೇಂದ್ರದ ಚಟುವಟಿಕೆಗಳನ್ನು ನಡೆಸಲು ಯೋಗ್ಯವಾದ ವನ್ಯ ಪರಿಸರದಿಂದ ಕೂಡಿದೆ. ೨೦೧೪ರಲ್ಲಿ ಸ್ಥಳೀಯ ಆಡಳಿತ ಮಂಡಳಿಯು ಈ ಭೂಮಿಯಲ್ಲಿ ನಡೆಸಲು ಉದ್ದೇಶಿಸಿರುವ 'ವೇದಾಂತ ಪ್ರಿಸಿಂಕ್ಟ್ ಪ್ಲಾನ್' ಎಂಬ ಯೋಜನೆಗೆ ಅಂಗೀಕಾರ ನೀಡಿತು. ಈ ಯೋಜನೆಯ ಮೊದಲ ಹಂತವಾಗಿ ಪ್ರಾರ್ಥನಾ ಮಂದಿರ, ಸಭಾಂಗಣ, ಭೋಜನಾಲಯ, ಸಾಧುನಿವಾಸ ಹಾಗೂ ಅತಿಥಿಗೃಹ, ಗ್ರಂಥಾಲಯ, ಆಫೀಸು ಹಾಗೂ ಇತರ ವಿಭಾಗಗಳನ್ನೊಳಗೊಂಡ ಬೃಹತ್ತಾದ ಒಂದು ಬಹೂಪಯೋಗಿ ಕಟ್ಟಡದ ನಿರ್ಮಾಣ ಕಾರ್ಯ ನಡೆದಿದೆ.

ಜೂನ್ ೨೭ರಂದು ವಾಸ್ತುಪೂಜೆಯೊಂದಿಗೆ ಆರಂಭಗೊಂಡ ಕಾರ್ಯಕ್ರಮಗಳ ನಂತರ ೨೮ರಂದು ಗಣೇಶಪೂಜೆ, ಹೋಮ ಹಾಗೂ ೨೯ರಂದು ಚಂಡೀಹೋಮ, ಯತಿಪೂಜೆ ಹಾಗೂ ಕುಮಾರಿಪೂಜೆ ನಡೆದವು. ೩೦ರಂದು ಬೆಳಿಗ್ಗೆ ಸ್ಥಳೀಯ ಹಿರಿಯ ನಾಗರಿಕರಾದ ಡೆಸ್ ಸ್ಯಾಂಡಿಯವರು ಶುದ್ಧಿಕಾರ್ಯವನ್ನು ನಡೆಸಿಕೊಟ್ಟರು. ಅನಂತರ ಸಂನ್ಯಾಸಿಗಳು ಹಾಗೂ ಭಕ್ತರು ಕಟ್ಟಡಕ್ಕೆ ದಿವ್ಯತ್ರಯರ ಭಾವಚಿತ್ರಗಳೊಂದಿಗೆ ಪ್ರದಕ್ಷಿಣೆ ಬಂದರು. ಬಳಿಕ ಕೇರಳದ ಚೆಂಡೆಮೇಳ ನಡೆಯಿತು. ಸ್ವಾಮಿ ತ್ಯಾಗಾನಂದಜಿ ಶ್ರೀರಾಮಕೃಷ್ಣರ ಷೋಡಶೋಪಚಾರ ಪೂಜೆ ಮಾಡಿದರು. ಮಧ್ಯಾಹ್ನದ ನಂತರ ಸರ್ವಧರ್ಮಗಳ ಪ್ರಾರ್ಥನೆ ನಡೆಯಿತು. ಬ್ರಿಸ್ಬೇನಿನ ಶ್ರೀಲಂಕಾ ಬೌದ್ಧ ಮಠದ ಶ್ರೀ ಇಹಲ ಗೊನಗಾಮ ಥೀರೋ, ಇಪ್ಸ್‌ವಿಚ್ ಕ್ಯಾಥೋಲಿಕ್ ಸಮಾಜದ ಫಾದರ್ ಸ್ಟೀಫನ್ ಬ್ಲಿಸ್ ಇವರು ಬೌದ್ಧ ಹಾಗೂ ಕ್ರೈಸ್ತ ದೇಗುಲಗಳನ್ನು ಉದ್ಘಾಟಿಸಿದರು.

ಅನಂತರ ಸಿಕ್ಖ್, ಬಹಾಯಿ, ಸೂಫೀ ಧರ್ಮಗಳಿಗೆ ಸೇರಿದ ಮುಖಂಡರಿಂದ ಪ್ರಾರ್ಥನೆ ನಡೆಯಿತು. ಸ್ಥಳೀಯ ಕೌನ್ಸಿಲರ್ ಶೈಲಾ ಐರ್ಲೆಂಡ್, ಸರ್ಕಾರಿ ಅಧಿಕಾರಿಗಳು, ಪೋಲೀಸ್ ಸಿಬ್ಬಂದಿಗಳು ಹಾಗೂ ಇತರ ಗಣ್ಯರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ದಿನಾಂಕ ೩೦ರಂದು ಸಾಯಂಕಾಲ ಬಹು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಮೀಪದ ರೊಬೆಲ್ಲೆ ಡೊಮೇನ್ ಪಾರ್ಕ್ ಲ್ಯಾಂಡ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕ್ವೀನ್ಸ್‌ಲ್ಯಾಂಡ್ ರಾಜ್ಯದ ಬಹು ಸಾಂಸ್ಕೃತಿಕ ಇಲಾಖೆಯ ಮಂತ್ರಿಗಳಾದ ಸ್ಟರ್ಲಿಂಗ್ ಹಿಂಕ್ಲಿಫ್, ಪಾರ್ಲಿಮೆಂಟಿನ ಫೆಡರಲ್ ಹಾಗೂ ಸ್ಥಳೀಯ ಸದಸ್ಯರುಗಳು, ಇಪ್ಸ್‌ವಿಚ್ ಸಿಟಿ ಕೌನ್ಸಿಲಿನ ಮೇಯರ್ (ಸ್ಪ್ರಿಂಗ್‌ಫೀಲ್ಡ್ ಈ ಕೌನ್ಸಿಲ್‌ಗೆ ಸೇರಿದೆ) ಹಾಗೂ ಇತರ ಗಣ್ಯರು ನೆರೆದಿದ್ದರು. ಸ್ವಾಮಿ ಶ್ರೀಧರಾನಂದಜಿ ಹಾಗೂ ಇತರ ಗಣ್ಯರಿಂದ ಪ್ರವಚನ, ಶಾಖಾಕೇಂದ್ರವು ನಡೆಸುವ **ಬಾಲ ಸಂಘ**ದ ಮಕ್ಕಳಿಂದ ಕಿರುನಾಟಕ, ಭಾರತೀಯ ಶಾಸ್ತ್ರೀಯ ಸಂಗೀತ, ಆಸ್ಟ್ರೇಲಿಯಾದ ಮೂಲ ನಿವಾಸಿಗಳಿಂದ ಹಾಗೂ ಆಫ್ರಿಕಾ, ಮಾವೊರಿ (ನ್ಯೂಝಿಲ್ಯಾಂಡ್) ಜಪಾನೀ ಹಾಗೂ ಪಾಶ್ಚಾತ್ಯ ಸಂಪ್ರದಾಯಗಳ ನೃತ್ಯ ಹಾಗೂ ಸಂಗೀತ ಕಾರ್ಯಕ್ರಮಗಳು ನಡೆದವು. ಅಂತಿಮವಾಗಿ ಅದ್ದೂರಿಯ ಸಿಡಿಮದ್ದು ಕಾರ್ಯಕ್ರಮ ಕೂಡ ನಡೆಯಿತು.

ಎಲ್ಲೆಡೆ ಸಂಭ್ರಮದ ಹಾಗೂ ಹಬ್ಬದ ವಾತಾವರಣವಿತ್ತು. ಹಲವು ಧಾರ್ಮಿಕ ಸಂಪ್ರದಾಯಗಳಿಗೆ ಸೇರಿದ ಸಾಧುಗಳು, ಭಕ್ತರು ಹಾಗೂ ಆಗಮಿಸಿದ್ದ ಹಿತೈಷಿಗಳನ್ನು ಆಶೀರ್ವದಿಸಿದರು. ಜುಲೈ ೧, ೨೦೧೮ರಂದು ಹೊಸ ಪ್ರರ್ಥನಾ ಮಂದಿರದಲ್ಲಿ ಅರ್ಧ ದಿನದ ಆಧ್ಯಾತ್ಮಿಕ ಶಿಬಿರ ನಡೆಯಿತು. ಸ್ವಾಮಿ ತ್ಯಾಗಾನಂದಜಿ, ಸ್ವಾಮಿ ಸರ್ವದೇವಾನಂದಜಿ, ಸ್ವಾಮಿ ಯುಕ್ತಾತ್ಮಾನಂದಜಿ, ಸ್ವಾಮಿ ವೀತಮೋಹಾನಂದಜಿ ಹಾಗೂ ಸ್ವಾಮಿ ತತ್ತ್ವಮಯಾನಂದಜಿಯವರು ವೇದಾಂತದ ಶಾಶ್ವತ ಸಾರ್ವತ್ರಿಕ ತತ್ತ್ವಗಳು ತೋರಿಸಿಕೊಡುವ ಮಾರ್ಗದರ್ಶನದಂತೆ ಆಧ್ಯಾತ್ಮಿಕ ಜೀವನವನ್ನು ನಡೆಸುವ ವಿಷಯವಾಗಿ ವಿವರಿಸಿದರು. ಈ ಕಾರ್ಯಕ್ರಮಗಳಲ್ಲಿ ಹಲವು ಮಂದಿ ಭಕ್ತರು ಹಾಗೂ ಸಾರ್ವಜನಿಕ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಭಾಗವಹಿಸಿದ ಎಲ್ಲರಿಗೂ ಪ್ರಸಾದ ವಿತರಣೆ ಮಾಡಲಾಗಿತ್ತು.









Managing Editor : Swami Atmajnananda   Editor : Swami Jnanayogananda

Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

OUR OTHER INTERNATIONAL GROUP TOURS




8 Days - Thailand & Cambodia | 8 ದಿನಗಳ ಕಾಂಬೋಡಿಯ – ಥೈಲ್ಯಾಂಡ್

SIEM REAP : The World famous & biggest temple complex in the middle of water, Bayon Temples, Night Market, Ta Prohm, Floating Village on Tonle Sap Lake, Cambodian Cultural Village, Shopping at Night market.


BANGKOK : Bangkok City tour, Safari World, Marine Park, Golden Buddha Temple, Reclining Buddha Temple, Shopping at Indra square.

PATTAYA : Alcazar Show, Coral Island Tour in speed boat, Walkers Street, Thai Cultural show Elephant Show , Nong Nooch Village.




8 Days - Sri Mukthinatha Yatra | 8 ದಿನಗಳ ನೇಪಾಳ ವಿಶೇಷ – ಶ್ರೀ ಮುಕ್ತಿನಾಥ ಯಾತ್ರೆ (ಸಾಲಿಗ್ರಾಮಂ)

SRI MUKTHINATHA (Saligramam) : Gandaki River, Narasimha Temple, Jwala Mai, Ramanuja Kuta, Pokhara, Bindhya Basini Temple, Fewalake Devi Temple, Jomsom, Manaokamana Devi Temple by Cable Car, Kathmandu, city tour (Pasupathinath Temple, Jala Narayan Temple, Sri Krishna Temple at Patan) etc.



10 Days - China, Hong Kong & Macau | 10 ದಿನಗಳ ಚೈನಾ, ಹಾಂಕಾಂಗ್, ಮಕಾವ್

BEIJING : Tiananmen Square, Olympic site Bird Nest, Acrobatic show in Beijing, Summer Palace Kunming Lake Cruise, Visit The Great Wall of China, Forbidden City Cruise from Imperial Garden to Summer Palace.
SHANGHAI : Temple in Shanghai. Visit to Oriental Pearl TV Tower and observation deck, Cruise on Huangpu River, World famous Shanghai Museum, People Square, Nanjing Street Area, Shanghai Tower - tallest tower in China
HONG KONG : Ocean Park, Visit Victoria Peak, Night View at Waterfront, Lantau Island Ngong Ping village Po Lin Monastery, Market Hong Kong. Hong Kong – Macau - Hong Kong - Transfers by Ferry.
MACAU : Macau City Tour, Night Tour of Macau, Visit Macau Casino.



19 Days - Australia & New Zealand | 19 ದಿನಗಳ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್

AUSTRALIA : Melbourne, Sydney, Gold Coast, Cairns - **NEW ZEALAND** : Auckland, Rotorua, Christchurch, Queenstown
ATTRACTIONS ON TOUR : Sea World - Australia's best Marine Park, Warner Brother's Movie World, Kuranda – A World Heritage Rainforest, Kuranda Skyrail rain forest Cable Car, Kuranda Scenic Rail, Great Barrier Reef, Inside guided tour of world famous Melbourne Cricket Ground, Sea life Marine Park, Spectacular Showboat dinner cruise, Sydney Tower Eye, Milford Sound cruise, Gondola ride - the steepest cable car (Queenstown), Puzzling world at Wanaka, Sky Tower at Auckland, Sheep show of Agrodome Farm, TE-PUIA thermal village, Waitomo Glowworm Caves and Many more…



5 Days - Dubai, Abu Dhabi & Sharjah | 5 ದಿನಗಳ ದುಬೈ, ಅಬುಧಾಬಿ, ಶಾರ್ಜ

DUBAI : Dubai City Tour, Desert Safari Tour with BBQ Dinner, Belly Dance, Tanoora Show and other activities, Dhow Cruise with Buffet Dinner at the Dubai Creek, World tallest and popular building Burj Khalifa with Entrance tickets, Dubai Aquarium at Dubai Mall, Musical Fountain in Dubai Mall, Miracle Garden Tour, Monorail Ride at Dubai, Abu Dhabi City Tour with Yas Mall Abu Dhabi, Visit world famous Grand Mosque, Visit different Malls in - Mall of The Emirates, Gold Souq, and Dubai Mall, Global Village…Shopping paradise at global village, Sharjah City tour - Pearl of the Gulf.



18 Days - Grand U.K. & Europe | 18 ದಿನಗಳ ಗ್ರ್ಯಾಂಡ್ ಯು.ಕೆ.–ಯುರೋಪ್

COVERING 10 COUNTRIES : United Kingdom, France, Netherlands, Belgium, Germany, Switzerland, Austria, Liechtenstein, Italy, Vatican.

MAJOR CITIES COVERED : London, Paris, Amsterdam, Brussels, Heidelberg, Cologne, Lucerne, Interlaken, Innsbruck, Vaduz, Rome, Pisa, Vatican City, Vatican.

For more details please Contact :

Orchid Travel & Tours
BASAVANAGUDI
#98, 1st Floor, DVG Road
Office 080-26621983, 26617178
Mobile +91 9880079588 / 9900080793

Orchid Travel & Tours
MALLESHWARAM
198, 1st Floor, 11th Cross
Office 080 - 23445598, 23445559
Mobile +91 9900080796 / 9880079644

www.orchidtours.net

VIVEKA PRABHA (KANNADA MONTHLY)
September 2018, Vol.18, No.09, No.of pages : 44

Registered With Registrar of News Papers Of India
under 72356/2000.postal Regn.No.KA/SK/MYS/480/
2018-20. LICENCED TO POST W.P.P.AT YADAVAGIRI
MYSORE 570 020,VIDE LICENCE NO.SK/WPP/MYS/155/2018-20

Printed at mayur graphics,Bangalore